ಶುಕ್ರವಾರ, ಅಕ್ಟೋಬರ್ 1, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಧಿಕಾರಿ ಹಸ್ತಾಂತರ
ಭಾರತೀಯ ವಾಯುಪಡೆಯ ನಿರ್ಗಮಿತ ಏರ್ ಚೀಫ್ ಮಾರ್ಷಲ್ ಆರ್.ಕೆ.ಎಸ್ ಭದೌರಿಯಾ ಅವರು ನೂತನ ಏರ್ ಚೀಫ್ ಮಾರ್ಷಲ್ ವಿ.ಆರ್.ಚೌಧರಿ ಅವರಿಗೆ ನವದೆಹಲಿಯ ವಾಯುಭವನದಲ್ಲಿ ಗುರುವಾರ ಅಧಿಕಾರ ಹಸ್ತಾಂತರಿಸಿದರು

ಶುಕ್ರವಾರ, ಅಕ್ಟೋಬರ್ 1, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 273 | ಪುಟ 16

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ನಟನೆ ಜೊತೆ ನಿರ್ದೇಶನದ ಜವಾಬ್ದಾರಿಯನ್ನು ತೆರೆದಿಟ್ಟದ್ದಾರೆ 'ಸಲಗ' ಏರಿ ಬಂದಿರುವ ದುನಿಯಾ ವಿಜಯ್



ಸಂಖ್ಯೆ-ಸುದ್ದಿ 'ಭಾರತ ಬಯಲು ಶೌಚ ಮುಕ್ತ' ಎಂಬ ಮಿಥ್ಯೆಗೆ ಎರಡು ವರ್ಷ

ಶಾಸಕರ ಅಹವಾಲು ಆಲಿಸಿದ ಸಿ.ಎಂ 4

ಸಿಧು–ಚನ್ನಿ ಚರ್ಚೆ: ರಾಜಿ ಸೂತ್ರ ಸಿದ್ಧ 6

ಸೆನ್ಸೆಕ್ಸ್	ನಿಫ್ಟಿ	₹/$
59,126	17,618	74.23

ಕೈಗಾರಿಕಾ ವಲಯ: ಶೇ 11.6ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ಮೂಲಸೌಕರ್ಯ ವಲಯಗಳ ಪ್ರಮುಖ ಎಂಟು ಕೈಗಾರಿಕೆಗಳು ಆಗಸ್ಟ್‌ನಲ್ಲಿ ಶೇಕಡ 11.6ರಷ್ಟು ಬೆಳವಣಿಗೆ ಕಂಡಿವೆ. 2020ರ ಆಗಸ್ಟ್‌ನಲ್ಲಿ ಈ ಎಂಟು ವಲಯಗಳು ಶೇ (–)6.9ರಷ್ಟು ಇಳಿಕೆ ಕಂಡಿದ್ದವು. 11

ನಟಿ ಸೌಜನ್ಯಾ ಆತ್ಮಹತ್ಯೆ 10

ಅಡಿಕೆಗೆ ಎಲೆಚುಕ್ಕಿ ರೋಗ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಆರೋಗ್ಯ ಸೇವೆ ಲಭ್ಯತೆ ಹೆಚ್ಚಿಸಲು ಕ್ರಮ: ಪ್ರಧಾನಿ ಮೋದಿ ಭರವಸೆ

ಜಿಲ್ಲೆಗೊಂದು ವೈದ್ಯ ಕಾಲೇಜು

ಜೈಪುರ (ಪಿಟಿಐ): ಪ್ರತಿ ಜಿಲ್ಲೆಯಲ್ಲಿಯೂ ಒಂದು ವೈದ್ಯಕೀಯ ಕಾಲೇಜು ಅಥವಾ ವೈದ್ಯ ಶಿಕ್ಷಣದಲ್ಲಿ ಸ್ನಾತಕೋತ್ತರ ಶಿಕ್ಷಣ ನೀಡುವ ಸಂಸ್ಥೆ ಇರುವಂತೆ ಪ್ರಯತ್ನ ಮಾಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಭರವಸೆ ನೀಡಿದ್ದಾರೆ.



ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಲಭ್ಯತೆಯಲ್ಲಿ ಈಗ ಇರುವ ಅಂತರವನ್ನು ತುಂಬಲು ಯತ್ನಿಸಲಾಗುವುದು. ರೋಗ ತಡೆ ಆರೋಗ್ಯ ವ್ಯವಸ್ಥೆ ಸ್ಥಾಪನೆಗೆ ಸರ್ಕಾರ ಒತ್ತು ಕೊಡಲಿದೆ. ಹಾಗೆಯೇ ಆಯುರ್ವೇದ ಮತ್ತು ಯೋಗಕ್ಕೆ ಉತ್ತೇಜನವನ್ನೂ ನೀಡಲಾಗುವುದು ಎಂದು ಮೋದಿ ಹೇಳಿದ್ದಾರೆ.

ಆರು ವರ್ಷಗಳಲ್ಲಿ 170ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜುಗಳ ಕೆಲಸ ಪೂರ್ಣಗೊಳಿಸಲಾಗಿದೆ. 100ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜು ಸ್ಥಾಪನೆ ಕೆಲಸ ಭರದಿಂದ ಸಾಗುತ್ತಿದೆ ಎಂದು ರಾಜಸ್ಥಾನದಲ್ಲಿ ನಾಲ್ಕು ವೈದ್ಯಕೀಯ ಕಾಲೇಜುಗಳ ಶಂಕುಸ್ಥಾಪನೆಯ ವರ್ಚುವಲ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಹೇಳಿದರು.

ಪ್ರಯತ್ನ ಹಲವು

ಸ್ವಚ್ಛ ಭಾರತ, ಆಯುಷ್ಮಾನ್ ಭಾರತ ಅಭಿಯಾನದಿಂದ ಈಗ ಆಯುಷ್ಮಾನ್ ಭಾರತ ಡಿಜಿಟಲ್ ಮಿಷನ್ ವರೆಗೆ ಹಲವು ಪ್ರಯತ್ನಗಳನ್ನು ಸರ್ಕಾರ ನಡೆಸಿದೆ ಎಂದು ಮೋದಿ ಹೇಳಿದರು.

ಆರೋಗ್ಯ ಸೇವಾ ಸಂಸ್ಥೆಗಳ ಜಾಲ ವಿಸ್ತರಣೆಗೊಳ್ಳುವುದು ಬಹಳ ಅಗತ್ಯ ಎಂದು ಅವರು ಪ್ರತಿಪಾದಿಸಿದರು. ಅಖಿಲ ಭಾರತ ವೈದ್ಯ ವಿಜ್ಞಾನಗಳ ಸಂಸ್ಥೆ (ಏಮ್ಸ್) ಆಗಿರಲಿ, ವೈದ್ಯಕೀಯ ಕಾಲೇಜುಗಳು ಆಗಿರಲಿ ಅವು ದೇಶದ ಮೂಲೆ ಮೂಲೆಗೂ ತಲುಪುಬೇಕು ಎಂದರು.

ಆರು ಏಮ್ಸ್‌ಗಳಿಂದ ಈಗ 22 ಏಮ್ಸ್‌ಗಳ ಬಲವಾದ ಜಾಲವನ್ನು ಹೊಂದಿದ್ದೇವೆ ಎಂದು ಮೋದಿ ಹೆಮ್ಮೆ ಪಟ್ಟರು. 2014ರಲ್ಲಿ ದೇಶದಲ್ಲಿ ಲಭ್ಯವಿದ್ದ ವೈದ್ಯಕೀಯ ಪದವಿ ಮತ್ತು ಸ್ನಾತಕೋತ್ತರ ಪದವಿ ಸೀಟುಗಳ ಸಂಖ್ಯೆ ಸುಮಾರು 82 ಸಾವಿರ. ಈಗ ಅದು 1.40 ಲಕ್ಷಕ್ಕೆ ಏರಿಕೆಯಾಗಿದೆ ಎಂದರು.

ವೈದ್ಯರಾಗಲು ಇಂಗ್ಲಿಷ್ ಬೇಕಿಲ್ಲ

ವೈದ್ಯಕೀಯ ಶಿಕ್ಷಣ ಪಡೆದುಕೊಳ್ಳಲು ಹಲವರಿಗೆ ಇಂಗ್ಲಿಷ್ ಭಾಷೆಯು ದೊಡ್ಡ ತೊಡಕಾಗಿ ಪರಿಣಮಿಸಿದೆ. ಆದರೆ, ಹೊಸ ಶಿಕ್ಷಣ ನೀತಿಯಿಂದಾಗಿ ಭಾರತೀಯ ಭಾಷೆಗಳಲ್ಲಿಯೂ ಶಿಕ್ಷಣ ಪಡೆಯಲು ಸಾಧ್ಯವಿದೆ. ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆಯಲು ಅವಕಾಶ ದೊರೆಯದವರೂ ವೈದ್ಯರಾಗಿ ಸಮುದಾಯದ ಸೇವೆ ಮಾಡಬಹುದು ಎಂದು ಮೋದಿ ಹೇಳಿದರು.

ಸಮಾಜದ ಎಲ್ಲ ವರ್ಗಗಳಿಗೂ ಅವಕಾಶ ದೊರಕಬೇಕು. ಅದಕ್ಕಾಗಿಯೇ ಇತರ ಹಿಂದುಳಿದ ವರ್ಗಗಳು (ಒಬಿಸಿ) ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯುಎಸ್) ವೈದ್ಯಕೀಯ ಕಾಲೇಜುಗಳಲ್ಲಿ ಮೀಸಲಾತಿ ಕಲ್ಪಿಸಲಾಗಿದೆ ಎಂದು ಹೇಳಿದರು.

20 ವರ್ಷಗಳ ಹಿಂದೆ ತಾವು ಗುಜರಾತ್ ಮುಖ್ಯಮಂತ್ರಿಯಾದಾಗ ವೈದ್ಯಕೀಯ ಮೂಲಸೌಕರ್ಯ, ವೈದ್ಯಕೀಯ ಶಿಕ್ಷಣ ಮತ್ತು ಚಿಕಿತ್ಸಾ ಸೌಲಭ್ಯ ಹೆಚ್ಚಳಕ್ಕೆ ಸಂಬಂಧಿಸಿ ಹಲವು ಸವಾಲುಗಳಿದ್ದವು. ಈ ಎಲ್ಲ ಸವಾಲುಗಳನ್ನು ಸ್ವೀಕರಿಸಿ ಸಾಮೂಹಿಕ ಪ್ರಯತ್ನದ ಮೂಲಕ ಬದಲಾವಣೆ ತರಲಾಯಿತು ಎಂಬುದನ್ನು ಮೋದಿ ನೆನಪಿಸಿಕೊಂಡರು.

ಮುಖ್ಯಮಂತ್ರಿಯಾಗಿದ್ದಾಗ ಆರೋಗ್ಯ ಕ್ಷೇತ್ರದಲ್ಲಿ ಕಾಣಿಸಿಕೊಂಡಿದ್ದ ಸಮಸ್ಯೆಗಳಿಗೆ ಪ್ರಧಾನಿಯಾದ ಬಳಿಕ ಪರಿಹಾರ ಕಂಡುಕೊಳ್ಳಲಾಗಿದೆ. ಆರೋಗ್ಯ ಕ್ಷೇತ್ರದ ಪರಿವರ್ತನೆಗೆ ರಾಷ್ಟ್ರೀಯ ಧೋರಣೆ ಮತ್ತು ಹೊಸ ರಾಷ್ಟ್ರೀಯ ನೀತಿ ರೂಪಿಸುವ ದಿಸೆಯಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಹೇಳಿದರು.

'ಆರೋಗ್ಯವು ರಾಜ್ಯದ ವ್ಯಾಪ್ತಿಯಲ್ಲಿರುವ ವಿಚಾರ. ಆದರೆ, ಅಲ್ಲಿ ಏನೇನು ಕಷ್ಟಗಳಿವೆ ಎಂಬುದು ನನಗೆ ಗೊತ್ತು. ಏಕೆಂದರೆ ನಾನು ಮುಖ್ಯಮಂತ್ರಿಯಾಗಿ ಇದ್ದವನು. ಸಮಸ್ಯೆಗಳಿಗೆ ಸಂಬಂಧಿಸಿ ನಾವು ಕೆಲಸ ಮಾಡಿದ್ದೇವೆ. ದೊಡ್ಡ ಸಮಸ್ಯೆ ಏನೆಂದರೆ ಆರೋಗ್ಯ ವ್ಯವಸ್ಥೆಯು ವಿಭಜಿತವಾಗಿದೆ. ಪರಸ್ಪರ ಸಂಪರ್ಕದ ಕೊರತೆ ಇದೆ. ರಾಷ್ಟ್ರೀಯ ಮಟ್ಟದಲ್ಲಿ ಸಾಮೂಹಿಕ ಧೋರಣೆಯ ಕೊರತೆ ಇದೆ' ಎಂದು ಮೋದಿ ವಿವರಿಸಿದರು.

ಹಂಚಿಕೆ ರದ್ದು– 30 ದಿನಗಳಲ್ಲಿ ವಾಪಸ್‌ಗೆ ಹೈಕೋರ್ಟ್ ಸೂಚನೆ

ಜಾಧವ್ ಟ್ರಸ್ಟ್‌ಗೆ ₹10 ಕೋಟಿಯ ಸೈಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರ್ಗಿ ಕ್ಷೇತ್ರದ ಬಿಜೆಪಿ ಸಂಸದ ಉಮೇಶ್ ಜಿ. ಜಾಧವ್ ಅವರಿಗೆ ಸಂಬಂಧಪಟ್ಟ ಟ್ರಸ್ಟ್‌ಗೆ ಹಂಚಿಕೆ ಮಾಡಿದ್ದ ₹10 ಕೋಟಿ ಮೌಲ್ಯದ ಸಿ.ಎ (ನಾಗರಿಕ ಸೌಕರ್ಯ) ನಿವೇಶನವನ್ನು ಹೈಕೋರ್ಟ್ ರದ್ದುಗೊಳಿಸಿದೆ. ಟ್ರಸ್ಟ್ ಜೊತೆ ಕೈಜೋಡಿಸಿದ್ದ ಕರ್ನಾಟಕ ಗೃಹ ಮಂಡಳಿಯನ್ನು ತರಾಟೆಗೆ ತೆಗೆದುಕೊಂಡಿರುವ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, 30 ದಿನಗಳಲ್ಲಿ ಜಾಗ ವಾಪಸ್ ಪಡೆಯಲು ಸೂಚಿಸಿದೆ.

'ಅತ್ಯಂತ ಆಘಾತಕಾರಿ ಅಂಶವೆಂದರೆ, ರಾಜ್ಯ ಸರ್ಕಾರದ ಸಂಸ್ಥೆಯಾಗಿರುವ ಕರ್ನಾಟಕ ಗೃಹ ಮಂಡಳಿಯೇ ನಿಯಮಾವಳಿಗಳನ್ನು ಅನುಸರಿಸದೇ ನಿವೇಶನ ಹಂಚಿಕೆ ಮಾಡಿದೆ' ಎಂದೂ ಪೀಠ ಅಸಮಾಧಾನ ವ್ಯಕ್ತಪಡಿಸಿತು.

ಕೆಎಚ್‌ಬಿಗೆ ₹1 ಲಕ್ಷ ದಂಡ ವಿಧಿಸಿದ ಪೀಠ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಬೇಕು ಮತ್ತು ದಂಡದ ಮೊತ್ತವನ್ನು ಅವರಿಂದಲೇ ವಸೂಲಿ ಮಾಡಬೇಕು' ಎಂದು ಸೂಚಿಸಿತು.

ಯಲಹಂಕ ನ್ಯೂಟೌನ್ 5ನೇ ಹಂತದಲ್ಲಿನ ನಿವೇಶನವನ್ನು 2004ರ ಆಗಸ್ಟ್ 23ರಂದು ಜಾಧವ್ ಅವರ ಪತ್ನಿ ಗಾಯತ್ರಿ ಅಧ್ಯಕ್ಷರಾಗಿರುವ ಮೂರ್ತಿ ಚಾರಿಟಬಲ್ ಟ್ರಸ್ಟ್‌ಗೆ ಗುತ್ತಿಗೆ ಆಧಾರದಲ್ಲಿ ನೀಡಲಾಗಿತ್ತು. 232 ಚದರ ಮೀಟರ್ ವಿಸ್ತೀರ್ಣದ ನಿವೇಶನಕ್ಕೆ ಟ್ರಸ್ಟ್ ₹3.87 ಲಕ್ಷ ಪಾವತಿಸಿತ್ತು.

ಎರಡು ವರ್ಷದಲ್ಲಿ ಶೈಕ್ಷಣಿಕ ಮತ್ತು ಸಾರ್ವಜನಿಕ ಉದ್ದೇಶಕ್ಕೆ ನಿವೇಶನ ಬಳಕೆಯಾಗಬೇಕು ಎಂಬ ಷರತ್ತು ವಿಧಿಸಲಾಗಿತ್ತು.

4ನೇ ಪುಟ ನೋಡಿ

ಸ್ವಾತಂತ್ರ್ಯದ ಅಮೃತ ಮಹೋತ್ಸವ

ವಿಶ್ವ ಹಿರಿಯ ನಾಗರಿಕರ ದಿನಾಚರಣೆ–2021

ಹಾಗೂ

ಹಿರಿಯ ನಾಗರಿಕರ ರಾಷ್ಟ್ರೀಯ ಸಹಾಯವಾಣಿ ಲೋಕಾರ್ಪಣೆ

ಎಲ್ಲಾ ವಯೋಮಾನದವರಿಗೆ ಡಿಜಿಟಲ್ ಸಮಾನತೆ

ELDER LINE NATIONAL HELPLINE FOR SENIOR CITIZENS Call Toll-Free 14567



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ದಿನಾಂಕ: 01–10–2021ನೇ ಶುಕ್ರವಾರ ಸಮಯ: ಮಧ್ಯಾಹ್ನ : 1:00 ಗಂಟೆಗೆ
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ, ಬೆಂಗಳೂರು.

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು ಶ್ರೀ ಆಚಾರ ಹಾಲಪ್ಪ ಬಸಪ್ಪ ರವರು ಹಿರಿಯ ನಾಗರಿಕರೊಂದಿಗೆ ಬೆರೆತ ಕ್ಷಣ

ಹಿರಿಯ ನಾಗರಿಕರಿಗೆ ಯೋಜನೆಗಳು

- ಸಂಧ್ಯಾ ಸುರಕ್ಷ
- ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ
- ಹಿರಿಯ ನಾಗರಿಕರಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಗುರುತಿನ ಚೀಟಿ ವಿತರಣೆ
- ಹಿರಿಯ ನಾಗರಿಕರಿಗೆ ಬಸ್ / ರೈಲ್ವೆ ಪ್ರಯಾಣದಲ್ಲಿ ರಿಯಾಯಿತಿ ಹಾಗೂ ಆಸನಗಳ ಕಾಯ್ದಿರಿಸುವಿಕೆ.
- ಹಗಲು ಯೋಗಕ್ಷೇಮ ಕೇಂದ್ರಗಳು
- ಹಿರಿಯ ನಾಗರಿಕರ ಸಹಾಯವಾಣಿ
- ಕೇಂದ್ರ ಹಾಗೂ ರಾಜ್ಯ ಅನುದಾನಿತ ವೃದ್ಧಾಶ್ರಮಗಳು
- ಮೊಬೈಲ್ ಮೆಡಿಕೇರ್ ಯೂನಿಟ್
- ಡಿಮೆನ್ಶಿಯ ಡೇ–ಕೇರ್ ಸೆಂಟರ್

ಸಮಾರಂಭದ ಉದ್ಘಾಟನೆ ಹಾಗೂ ಹಿರಿಯ ನಾಗರಿಕರ ರಾಷ್ಟ್ರೀಯ ಸಹಾಯವಾಣಿ ಲೋಕಾರ್ಪಣೆ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಅಧ್ಯಕ್ಷತೆ

ಡಾ|| ಉದಯ್ ಬಿ. ಗರುಡಾಚಾರ್
ಮಾನ್ಯ ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

ಶ್ರೀ ಗೋವಿಂದ ಎಂ. ಕಾರಜೋಳ
ಮಾನ್ಯ ಜಲ ಸಂಪನ್ಮೂಲ ಸಚಿವರು

ಪ್ರಶಸ್ತಿ ಪ್ರದಾನ

ಶ್ರೀ ಆಚಾರ ಹಾಲಪ್ಪ ಬಸಪ್ಪ
ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು

ವಿಶೇಷ ಆಹ್ವಾನಿತರು

ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಕೇಂದ್ರ ಸಚಿವರು, ಭಾರತ ಸರ್ಕಾರ.

ಶ್ರೀ ಎ. ನಾರಾಯಣಸ್ವಾಮಿ
ಮಾನ್ಯ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವರು

ಶ್ರೀ ಎಂ. ರಾಜೀವ್ ಚಂದ್ರಶೇಖರ್
ಮಾನ್ಯ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ, ರಾಜ್ಯ ಸಚಿವರು, ಭಾರತ ಸರ್ಕಾರ

ಮುಖ್ಯ ಅತಿಥಿಗಳು

ಡಾ. ಸಿ. ಎನ್. ಅಶ್ವತ್ಥ ನಾರಾಯಣ
ಮಾನ್ಯ ಉನ್ನತ ಶಿಕ್ಷಣ, ಐ.ಟಿ., ಬಿ.ಟಿ. & ಎಸ್.ಟಿ. ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು.

ಶ್ರೀ ಎಸ್. ಟಿ. ಸೋಮಶೇಖರ್
ಮಾನ್ಯ ಸಹಕಾರ ಸಚಿವರು.

ಶ್ರೀ ವಿ. ಸೋಮಣ್ಣ
ಮಾನ್ಯ ವಸತಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ಸಚಿವರು.

ಶ್ರೀ ಆರ್. ಅಶೋಕ್
ಮಾನ್ಯ ಕಂದಾಯ ಸಚಿವರು

ಶ್ರೀ ಕೆ. ಗೋಪಾಲಯ್ಯ
ಮಾನ್ಯ ಅಬಕಾರಿ ಸಚಿವರು.

ಶ್ರೀ ಮುನಿರತ್ನ
ಮಾನ್ಯ ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ ಸಚಿವರು

ಶ್ರೀ ಬಿ. ಎ. ಬಸವರಾಜು
ಮಾನ್ಯ ನಗರಾಭಿವೃದ್ಧಿ ಸಚಿವರು.

ಶ್ರೀ ಎನ್. ನಾಗರಾಜ (ಎಂ.ಟಿ.ಬಿ.)
ಮಾನ್ಯ ಪೌರಾಡಳಿತ ಹಾಗೂ ಸಣ್ಣ ಕೈಗಾರಿಕೆ ಸಚಿವರು

ಶ್ರೀಮತಿ ಕೆ. ಪೂರ್ಣಿಮಾ
ಮಾನ್ಯ ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಹಾಗೂ ಶಾಸಕರು, ಹಿರಿಯೂರು ವಿಧಾನ ಸಭಾ ಕ್ಷೇತ್ರ

ಎಲ್ಲಾ ಮಾನ್ಯ ಲೋಕಸಭಾ ಹಾಗೂ ರಾಜ್ಯಸಭಾ ಸದಸ್ಯರು ಮತ್ತು ಮಾನ್ಯ ವಿಧಾನಸಭಾ ಸದಸ್ಯರು ಹಾಗೂ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳು

ಡಾ. ವಿ. ಮುನಿರಾಜು
ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು

ಉಮಾ ಮಹಾದೇವನ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು

"ಕೋವಿಡ್–19ರ ಮಾರ್ಗಸೂಚಿಗಳನ್ನು ಪಾಲಿಸೋಣ, ಕೊರೋನಾ ವಿರುದ್ಧ ಜಯಗಳಿಸೋಣ"

ಮಾಸ್ಕ್ ಧರಿಸಿ ಸೋಪಿನಿಂದ ಕೈಗಳನ್ನು ಸ್ವಚ್ಛಗೊಳಿಸಿ ದೈಹಿಕ ಅಂತರ ಪಾಲಿಸಿ

ಈ ಕಾರ್ಯಕ್ರಮದ ನೇರಪ್ರಸಾರವನ್ನು "ಯುಟ್ಯೂಬ್" ಮತ್ತು "ಫೇಸ್‌ಬುಕ್" ಸಾಮಾಜಿಕ ಜಾಲತಾಣಗಳಲ್ಲಿ ಮತ್ತು "ದೂರದರ್ಶನ ಚಂದನ" ವಾಹಿನಿಗಳಲ್ಲಿ ವೀಕ್ಷಿಸಬಹುದು.

ಹಿರಿಯ ನಾಗರಿಕರ ರಾಷ್ಟ್ರೀಯ ಸಹಾಯವಾಣಿ – 14567

YouTube https://youtu.be/MohoAjzCoek

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ
ನೆಲಮಹಡಿ, ಪೋಡಿಯಂ ಬ್ಲಾಕ್, ವಿ.ವಿ. ಕೇಂದ್ರ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001.

ಸರ್ವರಿಗೂ ಆದರದ ಸುಸ್ವಾಗತ

ನವೆಂಬರ್‌ನಲ್ಲಿ ರಸ್ತೆಗೆ ಇಳಿಯಲಿರುವ ಬಸ್‌ಗಳು • ಜೆಬಿಎಂ ಮತ್ತು ಎನ್‌ಟಿಪಿಸಿ ಸಹಯೋಗದಲ್ಲಿ ನಿರ್ವಹಣೆ

ಬೆಂಗಳೂರಿಗೆ ಬಂತು ಎಲೆಕ್ಟ್ರಿಕ್ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಸಂಚಾರ ಆರಂಭಿಸುವ ಬಿಎಂಟಿಸಿಯ ಬಹು ವರ್ಷಗಳ ಕನಸು ಕೊನೆಗೂ ಸಾಕಾರಗೊಂಡಿದ್ದು, ಮೊದಲ ಎಲೆಕ್ಟ್ರಿಕ್ ಬಸ್ ಬೆಂಗಳೂರಿಗೆ ಬಂದಿಳಿದಿದೆ. ನವೆಂಬರ್‌ನಿಂದ ಮೆಟ್ರೊ ರೈಲು ನಿಲ್ದಾಣಗಳಿಗೆ ಫೀಡರ್ ಸೇವೆಯಾಗಿ ಈ ಬಸ್‌ಗಳು ಸಂಚರಿಸಲಿವೆ.

ಸ್ಮಾರ್ಟ್‌ಸಿಟಿ ಯೋಜನೆಯಡಿ 90 ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ (ಜಿಸಿಸಿ) ಪಡೆಯಲಾಗುತ್ತಿದೆ. ಜೆಬಿಎಂ ಮತ್ತು ಎನ್‌ಟಿಪಿಸಿ ಸಹಯೋಗದಲ್ಲಿ ಬಸ್‌ಗಳ ನಿರ್ವಹಣೆ ಮತ್ತು ಕಾರ್ಯಾಚರಣೆ ನಡೆಯಲಿದೆ. ಚಾಲಕರನ್ನು ಕಂಪನಿಯವರೇ ಒದಗಿಸಲಿದ್ದು, ನಿರ್ವಾಹಕರು ಮಾತ್ರ ಬಿಎಂಟಿಸಿ ನೌಕರರೇ ಇರಲಿದ್ದಾರೆ. ಎನ್‌ಟಿಪಿಸಿ-ಜೆಬಿಎಂ ಕಂಪನಿಗೆ ಪ್ರತಿ ಕಿ.ಮೀಗೆ ₹51.67 ಅನ್ನು ಬಿಎಂಟಿಸಿ ಪಾವತಿಸಬೇಕಿದೆ. ದಿನಕ್ಕೆ ಕನಿಷ್ಠ 180 ಕಿ.ಮೀ ಸಂಚಾರ ಆಗಬೇಕು. ಆಗದಿದ್ದರೂ, ಅದರ ಮೊತ್ತವನ್ನು ಪಾವತಿಸಬೇಕು ಎಂಬ ಒಪ್ಪಂದ ಆಗಿದೆ. ಅಷ್ಟೂ (90) ಬಸ್‌ಗಳು ಡಿಸೆಂಬರ್ ಅಂತ್ಯದ ವೇಳೆಗೆ ರಸ್ತೆಗೆ ಇಳಿಯಲಿವೆ.

ಬೆಂಗಳೂರಿಗೆ ಬಂದ್ ಮೊದಲ ಬಸ್ ಪರೀಕ್ಷಾರ್ಥ ಸಂಚಾರ ಬಿಎಂಟಿಸಿಯ ಕೆಂಗೇರಿ ಘಟಕದ ಆವರಣದಲ್ಲೇ ನಡೆಸಲಾಯಿತು. ಸಾರಿಗೆ ಸಚಿವ ಬಿ.ಶ್ರೀರಾಮುಲು, ಬಿಎಂಟಿಸಿ ಅಧ್ಯಕ್ಷ ಎನ್.ಎಸ್ .ನಂದೀಶ್ ರೆಡ್ಡಿ, ಉಪಾಧ್ಯಕ್ಷ ಎಂ.ಆರ್. ವೆಂಕಟೇಶ್, ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಬಸ್‌ನಲ್ಲಿ ಕುಳಿತು ಒಂದು ಸುತ್ತು ಸಂಚರಿಸಿದರು.

ಆರು ಬ್ಯಾಟರಿಗಳ ಸಹಾಯದಲ್ಲಿ ಬಸ್ ಸಂಚರಿಸುತ್ತದೆ. ಎಡಬದಿಯ ಕೊನೆಯಲ್ಲಿ ಚಾರ್ಜಿಂಗ್ ಪಾಯಿಂಟ್ ಇದೆ. ಒಮ್ಮೆ ಚಾರ್ಜ್ ಮಾಡಿದರೆ 120 ಕಿ.ಮೀ. ಸಂಚರಿಸುವ ಸಾಮರ್ಥ್ಯ ಹೊಂದಿದೆ.ಅಗತ್ಯಎನಿಸಿದರೆ45 ನಿಮಿಷದಲ್ಲೇ ಮತ್ತೆ ಚಾರ್ಜ್ ಮಾಡಿಕೊಳ್ಳಲು ಸ್ಪೀಡ್ ಚಾರ್ಜರ್ ಅವಕಾಶವೂ ಇದೆ.

ಬಸ್ಸಿನ ಒಳಗೆ ಎರಡು ಮತ್ತು ಬಸ್ಸಿನ ಹಿಂಭಾಗ ಒಂದು ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಗಂಟೆಗೆ 120 ಕಿ.ಮೀ. ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹೊಂದಿದೆ. ಆದರೆ, ಬಿಎಂಟಿಸಿ ಗಂಟೆಗೆ 75 ಕಿ.ಮೀ. ವೇಗಕ್ಕೆ ಮಿತಿಗೊಳಿಸಿದೆ.

‘ರಾಜಧಾನಿಯ ಬಹು ವರ್ಷಗಳ ಎಲೆಕ್ಟ್ರಿಕ್ ಬಸ್ ಸಂಚಾರದ ಕನಸು ಈಗ ಈಡೇರುತ್ತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನವೆಂಬರ್ 1ರಂದು ವಿಧಾನಸೌಧದ ಆವರಣದಲ್ಲಿ ಎಲೆಕ್ಟ್ರಿಕ್ ಬಸ್ ಸೇವೆಗೆ ಚಾಲನೆ ನೀಡಲಿದ್ದಾರೆ’ ಎಂದು ಬಿ.ಶ್ರೀರಾಮುಲು ಹೇಳಿದರು.

‘ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ₹50 ಕೋಟಿ ಅನುದಾನದಲ್ಲಿ ಗುತ್ತಿಗೆ ಮಾದರಿಯಡಿ ಈ ಎಲೆಕ್ಟ್ರಿಕ್ ಬಸ್ ಪಡೆಯಲಾಗುತ್ತಿದೆ. ಈ ಬಸ್‌ಗಳನ್ನು ಮೆಟ್ರೊ ನಿಲ್ದಾಣಗಳಿಗೆ ಫೀಡರ್ ಸೇವೆಯಾಗಿ ನಿಯೋಜಿಸಲಾಗುವುದು. ಹಲವು ವರ್ಷಗಳಿಂದ ಎಲೆಕ್ಟ್ರಿಕ್ ಬಸ್ ಬಗ್ಗೆ ಚರ್ಚೆಗಳು ನಡೆಯುತ್ತಿದ್ದವು. ಇದೀಗ ಆ ಎಲೆಕ್ಟ್ರಿಕ್ ಬಸ್ ಕನಸು ನನಸಾಗಿದೆ’ ಎಂದು ಹೇಳಿದರು.

‘ನಾನು ಯಾವತ್ತೂ ಎಲೆಕ್ಟ್ರಿಕ್ ಬಸ್ ನೋಡಿರಲಿಲ್ಲ. ರಾಜ್ಯದ ಖಾಸಗಿ ಸಾರಿಗೆ ಹಾಗೂ ಸರ್ಕಾರಿ ಸಾರಿಗೆಯಲ್ಲಿ ಮೊದಲ ಎಲೆಕ್ಟ್ರಿಕ್ ಬಸ್ ಇದಾಗಿದೆ’ ಎಂದರು.

ಕೆಂಗೇರಿ ಬಿಎಂಟಿಸಿ ಘಟಕದಲ್ಲಿ ಎಲೆಕ್ಟ್ರಿಕ್ ಬಸ್ ವೀಕ್ಷಿಸಿದ ಸಾರಿಗೆ ಸಚಿವ ಬಿ. ಶ್ರೀರಾಮುಲು. ಬಿಎಂಟಿಸಿ ಅಧ್ಯಕ್ಷ ಎನ್.ಎಸ್. ನಂದೀಶ್ ರೆಡ್ಡಿ, ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ ಇದ್ದರು –ಪ್ರಜಾವಾಣಿ ಚಿತ್ರ

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ... ಪ್ರಜಾವಾಣಿ ನೋಡಿಯೊ

3 ವರ್ಷದಲ್ಲಿ 1,500 ಎಲೆಕ್ಟ್ರಿಕ್ ಬಸ್

‘ಗ್ರ್ಯಾಂಡ್ ಚಾಲೆಂಜ್’ ಯೋಜನೆಯಡಿ ಇ- ಕಲ್ಚರ್ ಪರಿಕಲ್ಪನೆ ಉತ್ತೇಜಿಸಲು ದೇಶದ 9 ಮಹಾನಗರಗಳಿಗೆ ಎಲೆಕ್ಟ್ರಿಕ್ ಬಸ್‌ಗಳನ್ನು ನೀಡಲು ಕೇಂದ್ರ ಸರ್ಕಾರ ಮುಂದಾಗಿದೆ.

‘ಬೆಂಗಳೂರಿಗೆ ಎಷ್ಟು ಬಸ್‌ಗಳ ಅಗತ್ಯವಿದೆ ಎಂಬ ಪಟ್ಟಿ ಒದಗಿಸುವಂತೆ ಕೇಂದ್ರ ಸರ್ಕಾರ ಕೇಳಿದೆ. ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಶೀಘ್ರವೇ ಕೇಂದ್ರಕ್ಕೆ ಮಾಹಿತಿ ಕಳುಹಿಸಲಾಗುವುದು. ಮುಂದಿನ ಮೂರು ವರ್ಷಗಳಲ್ಲಿ 1,500 ಎಲೆಕ್ಟ್ರಿಕ್ ಬಸ್‌ಗಳು ಬಿಎಂಟಿಸಿ ಸೇರ್ಪಡೆಯಾಗುವ ಸಾಧ್ಯತೆ ಇದೆ’ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ತಿಳಿಸಿದರು.

ಆರು ತಿಂಗಳಲ್ಲಿ 300 ಬಸ್

ಫೇಮ್-2 ಯೋಜನೆಯಡಿ ಬಿಎಂಟಿಸಿಗೆ 12 ಮೀಟರ್ ಉದ್ದದ 300 ಎಲೆಕ್ಟ್ರಿಕ್ ಬಸ್ ಬರಲಿವೆ. ಈ ಸಂಬಂಧ ಅ.8ರಂದು ಬಿಎಂಟಿಸಿಯ ಮಂಡಳಿ ಸಭೆಯಲ್ಲಿ ಈ ಟೆಂಡರ್‌ಗೆ ಅನುಮೋದನೆ ಸಿಗುವ ಸಾಧ್ಯತೆಯಿದೆ ಎಂದು ಶ್ರೀರಾಮುಲು ಹೇಳಿದರು.

‘ಇದಲ್ಲದೇ ಬಿಎಸ್-6 ಮಾದರಿಯ 643 ಡಿಸೆಲ್ ಬಸ್‌ಗಳು ಶೀಘ್ರದಲ್ಲೇ ನಿಗಮಕ್ಕೆ ಸರ್ಪೇಡೆಯಾಗಲಿವೆ. ಸಾರಿಗೆ ನಿಗಮಗಳಲ್ಲಿ ಹಂತ ಹಂತವಾಗಿ ಸುಧಾರಣೆ ತರಲಾಗುವುದು. ಇದಕ್ಕೆ ಮುಖ್ಯಮಂತ್ರಿಗಳು ಸಹಕರಿಸಲಿದ್ದಾರೆ’ ಎಂದರು.

ಖಾಸಗೀಕರಣ ಅಲ್ಲ: ಗುತ್ತಿಗೆ ಮಾದರಿಯಡಿ ಎಲೆಕ್ಟ್ರಿಕ್ ಬಸ್ ಪಡೆದ ಮಾತ್ರಕ್ಕೆ ಸಾರಿಗೆ ನಿಗಮ ಖಾಸಗೀಕರಣ ಆಗುವುದಿಲ್ಲ. ಆ ರೀತಿಯ ಯಾವುದೇ ವಾತಾವರಣ ಇಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ವಿಶೇಷಗಳೇನು?

- 9 ಮೀಟರ್ ಉದ್ದದ ಎರಡು ಬಾಗಿಲಿನ ಬಸ್
- ಆರು ಬ್ಯಾಟರಿಗಳ ಸಹಾಯದಿಂದ ಸಂಚರಿಸುವ ಬಸ್
- ಒಮ್ಮೆ ಚಾರ್ಜ್ ಮಾಡಿದರೆ 120 ಕಿಲೋ ಮೀಟರ್ ಸಂಚಾರ ಸಾಮರ್ಥ್ಯ
- ಗೇರ್, ಕ್ಲಚ್ ಎರಡೂ ಇಲ್ಲ
- ಸ್ಟೇರಿಂಗ್, ಆ್ಯಕ್ಸಿಲೇಟರ್ ಮತ್ತು ಬ್ರೇಕ್ ಮಾತ್ರ
- ಚಾಲಕ ಸೇರಿ 34 ಜನ ಕೂರಲು ಆಸನ
- ಮಹಿಳೆಯರಿಗೆ ಪ್ರತ್ಯೇಕ ಆಸನ
- ಪ್ರತಿ ಸೀಟಿನ ಬಳಿಯೂ ಸ್ಟಾಪ್ ಬಟನ್

ಸುದ್ದಿ 2 ನಿಮಿಷ

‘ಎಪಿಎಂಸಿ ಸಮಸ್ಯೆ ಪರಿಹಾರಕ್ಕೆ ಕ್ರಮ’

ಬೆಂಗಳೂರು: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ (ಎಪಿಎಂಸಿ) ಸಮಸ್ಯೆಗಳನ್ನು ಪಟ್ಟಿ ಮಾಡಿ ಅವುಗಳ ಪರಿಹಾರಕ್ಕೆ ಕ್ರಮವಹಿಸಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಗುರುವಾರ ನಡೆದ ಎಪಿಎಂಸಿ ಅಧ್ಯಕ್ಷರು, ನಿರ್ದೇಶಕರ ಸಭೆಯಲ್ಲಿ ಮಾತನಾಡಿದ ಅವರು, ಎಪಿಎಂಸಿಗಳ ಸಮಗ್ರ ಅಭಿವೃದ್ಧಿ ಕುರಿತಂತೆ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರ ಗಮನಕ್ಕೂ ತರಲಾಗಿದೆ ಎಂದರು.

ಸಹಕಾರ ಇಲಾಖೆಗೆ ಸಂಬಂಧಿಸಿದ ಕಾಯ್ದೆ ಮತ್ತು ನಿಯಮಗಳಿಗೆ ಈಗಾಗಲೇ ಕೆಲವು ತಿದ್ದುಪಡಿ ತರಲಾಗಿದೆ. ಅದೇ ರೀತಿ ಎಪಿಎಂಸಿಯಲ್ಲಿನ ಸಮಸ್ಯೆಗಳನ್ನು ಬಗೆಹರಿಸಲು ಅವಶ್ಯವಿದ್ದರೆ ಕಾಯ್ದೆಗೆ ತಿದ್ದುಪಡಿ ತರುವ ಪ್ರಯತ್ನ ಮಾಡಲಾಗುತ್ತದೆ. ಅಧ್ಯಕ್ಷರು ಮತ್ತು ನಿರ್ದೇಶಕರು ಸಮಸ್ಯೆಗಳನ್ನು ಪಟ್ಟಿ ಮಾಡಿ ಕೊಡಿ ಎಂದು ಸೋಮಶೇಖರ್ ಸೂಚಿಸಿದರು.

ಎಪಿಎಂಸಿಗಳ ವ್ಯಾಪ್ತಿಯಲ್ಲಿರುವ ಉಗ್ರಾಣ ಮತ್ತು ಮಳಿಗೆಗಳ ಬಾಡಿಗೆ ನಿಯಂತ್ರಣವನ್ನು ಸಮಿತಿಗೆ ನೀಡಿದರೆ ಸಂಪನ್ಮೂಲ ಒದಗುತ್ತದೆ ಎಂದು ಜಿಲ್ಲಾ ಸದಸ್ಯರು ಸಲಹೆ ನೀಡಿದರು.

ಆಯಾ ಭಾಗಗಲ್ಲಿ ಏನೇ ಸಮಸ್ಯೆಗಳು ಇದ್ದರೂ ಅಧ್ಯಕ್ಷರು ಮತ್ತು ನಿರ್ದೇಶಕರು ನೇರವಾಗಿ ಕಚೇರಿಯಲ್ಲಿ ಭೇಟಿ ಮಾಡಬಹುದು ಎಂದು ಸಚಿವರು ಹೇಳಿದರು.

‘ಮಹಿಳಾ ಆಯೋಗದ ಬಗ್ಗೆ ಅಪಪ್ರಚಾರ ಬೇಡ’

ಬೆಂಗಳೂರು: ರಾಜಕೀಯ ಲಾಭಕ್ಕಾಗಿ ಮಹಿಳಾ ಆಯೋಗದ ಮೇಲೆ ಸುಳ್ಳು ಆರೋಪ ಮಾಡಬಾರದು ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷ ಪ್ರಮೀಳಾ ಆರ್. ನಾಯ್ಡು ಹೇಳಿದ್ದಾರೆ.

ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ನ್ಯಾಯ ಕೊಡಿಸುವ ಕೆಲಸವನ್ನು ಆಯೋಗ ಮಾಡಿಕೊಂಡು ಬಂದಿದೆ. ಮಹಿಳಾ ಆಯೋಗದ ಕಾರ್ಯಾಲಯಕ್ಕೆ ಸೆ.28ರಂದು ಕೆಲವರು ನುಗ್ಗಲು ಪ್ರಯತ್ನಿಸಿದ್ದು, ಪೊಲೀಸರ ಸಕಾಲಿಕ ಮಧ್ಯಪ್ರವೇಶದಿಂದ ಅದಕ್ಕೆ ಅವಕಾಶ ಸಿಕ್ಕಿಲ್ಲ. ನಿರ್ದಿಷ್ಟ ಸಮಸ್ಯೆ ಕುರಿತು ಮಾತನಾಡದೆ ಆರೋಪಗಳನ್ನು ಮಾಡವುದು ಸರಿಯಲ್ಲ ಎಂದಿದ್ದಾರೆ.

ದೌರ್ಜನ್ಯ ಪ್ರಕರಣದಲ್ಲಿ ಶಿಕ್ಷೆಗೆ ಒಳಪಡಿಸುವುದು ಆಯೋಗದ ಕಾರ್ಯವ್ಯಾಪ್ತಿಗೆ ಬರುವುದಿಲ್ಲ. ಇದನ್ನು ರಾಜಕೀಯ ಪಕ್ಷಗಳು ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ವಾರದೊಳಗೆ ಎಲ್ಲ ಶಿಥಿಲ ಕಟ್ಟಡ ತೆರವು – ಅಶೋಕ • 185ರಲ್ಲಿ ಈವರೆಗೆ 10 ನೆಲಸಮ

ಗುಂಡಿ ಮುಚ್ಚಲು ಮತ್ತೊಂದು ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಪ್ರಮುಖ ರಸ್ತೆಗಳ ಗುಂಡಿಗಳನ್ನು ಹತ್ತು ದಿನಗಳಲ್ಲಿ ಹಾಗೂ ಒಳ ರಸ್ತೆಗಳಲ್ಲಿರುವ ಗುಂಡಿಗಳನ್ನು 25 ದಿನಗಳಲ್ಲಿ ಮುಚ್ಚಲಾಗುವುದು’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಬಿಬಿಎಂಪಿ ಅಧಿಕಾರಿಗಳ ಜೊತೆ ವಿಧಾನಸೌಧದಲ್ಲಿ ಗುರುವಾರ ಸಭೆ ನಡೆಸಿ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘2019ರ ಸರ್ವೆ ಪ್ರಕಾರ ಬೆಂಗಳೂರಲ್ಲಿ 185 ಕಟ್ಟಡಗಳು ಶಿಥಿಲಾವಸ್ಥೆಯಲ್ಲಿವೆ. ಈ ಪೈಕಿ, ಕೇವಲ 10 ಕಟ್ಟಡಗಳನ್ನು ಈವರೆಗೆ ತೆರವು ಮಾಡಲಾಗಿದೆ. ಇನ್ನೊಂದು ವಾರದಲ್ಲಿ ಎಲ್ಲ ಶಿಥಿಲ ಕಟ್ಟಡಗಳನ್ನು ತೆರವು ಮಾಡುವಂತೆ ಸೂಚಿಸಿದ್ದೇನೆ’ ಎಂದರು.

ನಗರದಲ್ಲಿ ಸುಮಾರು 13,874 ಕಿ.ಮೀ ರಸ್ತೆಗಳಿವೆ. 895 ಕಿ.ಮೀ ರಸ್ತೆ ಸುಸ್ಥಿತಿಯಲ್ಲಿದೆ. 449 ಕಿ.ಮೀ. ರಸ್ತೆಯಲ್ಲಿ ಗುಂಡಿ ಬಿದ್ದಿದೆ. ಸದ್ಯ 246 ಕಿ.ಮೀ. ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚಲಾಗಿದೆ. ರಸ್ತೆ ಗುಂಡಿ ಮುಚ್ಚಲು ಪ್ರತಿನಿತ್ಯ ಜಲ್ಲಿಮಿಕ್ಸ್ ಸ್ಥಾವರದಿಂದ 16 ಲೋಡ್ ಜಲ್ಲಿ ಮಿಕ್ಸ್ ಪೂರೈಸಲಾಗುತ್ತಿದೆ. ಆದರೆ, 12 ದಿನಗಳಿಂದ ಮಳೆ ಕಾರಣ ಜಲ್ಲಿ ಮಿಕ್ಸ್ ಮಾಡಲು ಸಾಧ್ಯವಾಗಿಲ್ಲ, ಹೀಗಾಗಿ ಗುಂಡಿ ಮುಚ್ಚಲು ಆಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಥಳೀಯ ಗುತ್ತಿಗೆದಾರರ ಮೂಲಕ ಗುಂಡಿ ಮುಚ್ಚುವ ಕಾಮಗಾರಿ ನಡೆಸಲು ಸೂಚಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಗೆ ಇತ್ತೀಚೆಗೆ ಸೇರಿದ 110 ಹಳ್ಳಿಗಳಲ್ಲಿ ರಸ್ತೆ ಕಾಮಗಾರಿಗೆ 30 ದಿನಗಳಲ್ಲಿ ಚಾಲನೆ ನೀಡಲಾಗುವುದು’ ಎಂದರು.

ನೋಟಿಸ್: ಈಗಾಗಲೇ ಗುರುತಿಸಿದ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಮಾಲೀಕರಿಗೆ, ಕಟ್ಟಡ ಒಡೆಯುವಂತೆ ನೋಟಿಸ್ ಕೊಡಲು ಸೂಚನೆ ನೀಡಲಾಗಿದೆ. ನೋಟಿಸ್ ನೀಡಿದ ಏಳು ದಿನಗಳ ಒಳಗೆ ಮನೆ ಖಾಲಿ ಮಾಡಲು ಸಮಯಾವಕಾಶ ನೀಡಲಾಗುತ್ತದೆ. ಮನೆ ಖಾಲಿ ಮಾಡದಿದ್ದರೆ ಬೆಸ್ಕಾಂ, ಜಲಮಂಡಳಿ ಸಂಪರ್ಕ ಕಡಿತ ಮಾಡಲಾಗುವುದು. ನೋಟಿಸ್ ನೀಡಿದ ಬಳಿಕವೂ ಕಟ್ಟಡ ಒಡೆಯದಿದ್ದರೆ ಪಾಲಿಕೆಯೇ ಒಡೆಯಲಿದೆ. ಕಟ್ಟಡದ ತೆರವಿಗೆ ತಗುಲುವ ವೆಚ್ಚವನ್ನು ಮಾಲೀಕರ ಆಸ್ತಿ ತೆರಿಗೆಗೆ ಸೇರಿಸಲು ಸೂಚನೆ ನೀಡಲಾಗಿದೆ’ ಎಂದರು.

‘ಉಳಿದಂತೆ ಶಿಥಿಲಾವಸ್ಥೆ ಕಟ್ಟಡಗಳ ಬಗ್ಗೆ ಸಮೀಕ್ಷೆ ನಡೆಸಿ 15 ದಿನಗಳಲ್ಲಿ ವರದಿ ನೀಡುವಂತೆ ಸೂಚಿಸಲಾಗಿದೆ. ಕಟ್ಟಡದ ನಕ್ಷೆಯನ್ನು ಸರಿಯಾಗಿ ನೀಡಬೇಕು. ಅಕ್ಕಪಕ್ಕದ ಮನೆ ನೋಡಿಕೊಂಡು ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡಬೇಕು. ನಿಯಮ ಉಲ್ಲಂಘಿಸಿದ ಎಂಜಿನಿಯರ್ ಮೇಲೆ ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದ ಅವರು, ‘ಅಕ್ಕಪಕ್ಕದ ಮನೆಗಳು ಶಿಥಿಲವಾಗಿದ್ದರೆ ಬಿಬಿಎಂಪಿ ಅಥವಾ ನೇರವಾಗಿ ನನಗೆ ದೂರು ನೀಡಬಹುದು’ ಎಂದು ಹೇಳಿದರು.

ನಾಳೆಯಿಂದ ವನ್ಯಜೀವಿ ಸಪ್ತಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಇಲಾಖೆಯು ಅಕ್ಟೋಬರ್ 2ರಿಂದ 8 ರವರೆಗೆ 67ನೇ ವನ್ಯಜೀವಿ ಸಪ್ತಾಹವನ್ನು ಹಮ್ಮಿಕೊಂಡಿದೆ.

‘ವನ್ಯಜೀವಿ ಸಂರಕ್ಷಣೆಯ ಬಗ್ಗೆ ಸಪ್ತಾಹದ ಅವಧಿಯಲ್ಲಿ ಜಾಗೃತಿ ಮೂಡಿಸಲಾಗುವುದು’ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರೀತು ಕಕ್ಕಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವಕನ ಮುಖದಲ್ಲಿ 8 ಕೆ.ಜಿ ಗೆಡ್ಡೆ

ಬೆಂಗಳೂರು: 31 ವರ್ಷದ ವ್ಯಕ್ತಿಯೊಬ್ಬರ ಮುಖದಲ್ಲಿ ಬೆಳೆದಿದ್ದ 8 ಕೆ.ಜಿಯ ಗೆಡ್ಡೆಯನ್ನು ಆಸ್ಟರ್ ಆರ್‌ವಿ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆ ಮೂಲಕ ತೆಗೆದಿದ್ದಾರೆ.

ಒಡಿಶಾದ ಮನ್ಬೋದ್ ಎಂಬುವರಿಗೆ ಬಾಲ್ಯದಲ್ಲಿ ಸಣ್ಣದಾಗಿ ಗೆಡ್ಡೆ ಕಾಣಿಸಿಕೊಂಡಿತ್ತು. 17 ವರ್ಷಗಳಿಂದ ಈ ಗೆಡ್ಡೆಯು ನಿರಂತರವಾಗಿ ಬೆಳವಣಿಗೆ ಹೊಂದಿದೆ. ಹಾನಿಕಾರಕವಲ್ಲದ ಈ ಗಡ್ಡೆಯನ್ನು ವೈದ್ಯರು ‘ಪ್ಲೆಕ್ಸಿಫಾರ್ಮ್ ನ್ಯೂರೋಫೈಬ್ರೊಮಾ’ ಎಂದು ಕರೆದಿದ್ದಾರೆ. ಆರು ತಿಂಗಳ ಅವಧಿಯಲ್ಲಿ 16 ವಿವಿಧ ಶಸ್ತ್ರಚಿಕಿತ್ಸಾ ವಿಧಾನಗಳ ಮೂಲಕ ಗೆಡ್ಡೆಯನ್ನು ತೆಗೆಯಲಾಗಿದೆ. ಕ್ರೌಡ್ ಫಂಡಿಂಗ್ ಮೂಲಕ ಈ ಶಸ್ತ್ರಚಿಕಿತ್ಸೆ ಸಾಕಾರವಾಯಿತು ಎಂದು ಆಸ್ಪತ್ರೆ ತಿಳಿಸಿದೆ.

An experience tailored for you

FLAT 25%

ON CUSTOM TAILORING OF STITCHING

THE Raymond SHOP

Nagarbhavi: No 4, Sunrise, Opp BDA Complex, Old Outer Ring Road. Tel: 080-23182773/74
RR Nagar: No 335, Phase 1 Ideal Home Product Township,Tel: 080-28606773/74
T. Dasarahalli: No 2, Havnoor Extension, Hesarghatta Main Road, Opp. Ammaji Kalyan Mantappa. Tel: 080-28372773

T&C Apply: • Offer applicable on purchase of two or more fabrics • Fabric must be purchased from the same store • To avail the offer tailoring has to be done at the time of purchase itself • This offer cannot be clubbed with any other offer • Suit is considered as one garment • **Offer valid till 31st Oct'2021**

ಉಪ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಚರ್ಚೆ

ಅ.3 ರಂದು ಬಿಜೆಪಿ ಪ್ರಮುಖ ನಾಯಕರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾನಗಲ್ ಮತ್ತು ಸಿಂದಗಿ ಉಪಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಲು ಭಾನುವಾರ (ಅ.3) ಬಿಜೆಪಿ ಪ್ರಮುಖ ನಾಯಕರ ಸಭೆಯನ್ನು ಕರೆಯಲಾಗಿದೆ.

ಈ ಎರಡೂ ಉಪಚುನಾವಣೆಗಳು ಬಿಜೆಪಿಗೆ ಅತ್ಯಂತ ಮಹತ್ವದ್ದಾಗಿದ್ದು, ಇವುಗಳನ್ನು ಗೆಲ್ಲುವ ದೃಷ್ಟಿಯಿಂದ ಅನುಸರಿಸಬೇಕಾದ ಕಾರ್ಯತಂತ್ರಗಳ ಬಗ್ಗೆ ಈ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಲಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಹಾನಗಲ್ ಕ್ಷೇತ್ರಕ್ಕೆ ಶಿವಕುಮಾರ್ ಉದಾಸಿ ಅವರ ಪತ್ನಿಗೆ ಮತ್ತು ಸಿಂದಗಿಯಲ್ಲಿ ರಮೇಶ ಭೂಸನೂರ ಅವರಿಗೆ ಟಿಕೆಟ್ ನೀಡುವ ಸಾಧ್ಯತೆ ನಿಚ್ಚಳವಾಗಿದೆ. ಆದರೆ, ಇವೆರಡೂ ಕ್ಷೇತ್ರಗಳು ಪಕ್ಷಕ್ಕೆ ಸುಲಭದ ತುತ್ತಲ್ಲ. ಮುಖ್ಯವಾಗಿ ಮುಸ್ಲಿಂ ಮತದಾರರ ಸಂಖ್ಯೆ ಅಧಿಕ ಸಂಖ್ಯೆಯಲ್ಲಿ ಇರುವುದರಿಂದ ಗೆಲುವಿಗೆ ಯಾವ ರಣತಂತ್ರ ಅನುಸರಿಸಬೇಕು ಎಂಬ ಬಗ್ಗೆಯೂ ಚರ್ಚಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಅಲ್ಲದೆ, 2023 ರ ವಿಧಾನಸಭಾ ಚುನಾವಣೆಯ ಸಿದ್ಧತೆಯ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಲಿದೆ. ಪಕ್ಷದ ಸಂಘಟನೆ ಬಲಪಡಿಸುವುದು ಮತ್ತು ಸರ್ಕಾರದ ವರ್ಚಸ್ಸು ಹೆಚ್ಚಿಸುವ ವಿಚಾರವೂ ಪ್ರಸ್ತಾಪವಾಗಲಿದೆ.

ಬೊಮ್ಮಾಯಿ ದೆಹಲಿಗೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅ. 8ಕ್ಕೆ ದೆಹಲಿಗೆ ತೆರಳಲಿದ್ದು, ವಿವಿಧ ಸಚಿವರ ಜತೆ ರಾಜ್ಯದ ಯೋಜನೆಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ಹೇಳಿವೆ.

ಆರ್‌ಎಸ್‌ಎಸ್ ನಾಯಕರ ಜತೆ ಚರ್ಚೆ

ಮುಖ್ಯಮಂತ್ರಿ ಬೊಮ್ಮಾಯಿ ಅವರು 'ಕೇಶವಕೃಪಾ'ದಲ್ಲಿ ಆರ್‌ಎಸ್‌ಎಸ್ ಮುಖಂಡರ ಜತೆ ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಸಿದರು.

ಅನಧಿಕೃತ ಧಾರ್ಮಿಕ ಕಟ್ಟಡಗಳಿಗೆ ರಕ್ಷಣೆ ನೀಡುವ ಉದ್ದೇಶದ ಮಸೂದೆ ವಿಚಾರ, ಇತ್ತೀಚೆಗೆ ಕಾಂಗ್ರೆಸ್ ನಾಯಕರು ಆರ್‌ಎಸ್‌ಎಸ್ ಅನ್ನು ತಾಲಿಬಾನ್‌ಗೆ ಹೋಲಿಸಿ ನಡೆಸುತ್ತಿರುವ ಅಪಪ್ರಚಾರ ಸೇರಿ ಹಲವು ವಿಚಾರಗಳು ಪ್ರಸ್ತಾಪ ಆದವು ಎಂದು ಮೂಲಗಳು ತಿಳಿಸಿವೆ.

ಧಾರ್ಮಿಕ ಕಟ್ಟಡಗಳ ಮಸೂದೆ ವಿಚಾರದಲ್ಲಿ ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಅದನ್ನು ಬೇರೆಯದೇ ರೀತಿಯಲ್ಲಿ ನಿಭಾಯಿಸಬಹುದಿತ್ತು ಎಂಬ ಅಭಿಪ್ರಾಯ ವ್ಯಕ್ತಪಡಿಸಲಾಯಿತು ಎಂದು ಮೂಲಗಳು ಹೇಳಿವೆ.

'ಸಂಪದ್ಭರಿತ, ಸುರಕ್ಷಿತ ಕರ್ನಾಟಕ ನನ್ನ ಕನಸು'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕರ್ನಾಟಕ ಸಂಪದ್ಭರಿತ, ಸುರಕ್ಷಿತ, ವಿಪುಲ ಅವಕಾಶ ಇರುವ ಸುಂದರ ನಾಡು. ಈ ನಾಡು ಎಲ್ಲರನ್ನೂ ಆಕರ್ಷಿಸುವ ಸುಂದರ ಬೀಡಾಗಬೇಕು. ಕನ್ನಡಕ್ಕೆ, ಕನ್ನಡಿಗರಿಗೆ ಅಗ್ರಸ್ಥಾನ ಸಿಗಬೇಕು ಎನ್ನುವುದೇ ನನ್ನ ಕನಸು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನದಾಳದ ಮಾತುಗಳನ್ನು ಹಂಚಿಕೊಂಡರು.

ಕರ್ನಾಟಕ ಮಾಧ್ಯಮ ಅಕಾಡೆಮಿ 40 ವರ್ಷ ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ ಗೃಹ ಕಚೇರಿ 'ಕೃಷ್ಣಾ' ದಲ್ಲಿ ಲಾಂಛನ ಬಿಡುಗಡೆ ಮಾಡಿ, 'ಕ್ಲಬ್ ಹೌಸ್' ಉದ್ಘಾಟಿಸಿ ಮಾತನಾಡಿದ ಅವರು, 'ದೀರ್ಘಾವಧಿ ಬದಲು ಅಲ್ಪಾವಧಿ ಫಲಿತಾಂಶದ ಕೆಲಸಕ್ಕೆ ಆದ್ಯತೆ ನೀಡುತ್ತೇನೆ'ಎಂದರು.

'ರಾಜ್ಯದಲ್ಲಿರುವ 10 ಕೃಷಿ-ಹವಾಮಾನ ವಲಯಗಳಲ್ಲಿ ವೈಜ್ಞಾನಿಕವಾಗಿ ಬೆಳೆಗಳನ್ನು ಬೆಳೆದು, ಅವುಗಳ ಸಂಸ್ಕರಣೆ, ಮೌಲ್ಯವರ್ಧನೆಯ ಮೂಲಕ ರೈತರ ಆದಾಯ ಹೆಚ್ಚಿಸಲು ಒತ್ತು ನೀಡಲಾಗುವುದು. ಲಭ್ಯವಿರುವ ಜಲ ಸಂಪನ್ಮೂಲದ ಸದ್ಬಳಕೆ ಮೂಲಕ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು. ಆರೋಗ್ಯ ಸೇವೆಗಳ ಸುಧಾರಣೆಗೆ, ವಿಶೇಷವಾಗಿ ತಾಲ್ಲೂಕು ಆಸ್ಪತ್ರೆಗಳ ಮೂಲಸೌಲಭ್ಯ ಅಭಿವೃದ್ಧಿಗೆ ಒತ್ತು ನೀಡಲಾಗುವುದು' ಎಂದರು.

ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಪ್ರಾಸ್ತಾವಿಕವಾಗಿ ಮಾತನಾಡಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಜಿ. ಜಗದೀಶ್, ಅಕಾಡೆಮಿಯ ಸದಸ್ಯರು, ಕಾರ್ಯದರ್ಶಿ ಸಿ. ರೂಪಾ ಇದ್ದರು.

ಸವಿನೆನಪು



ಶ್ರೀ ಕೆ. ಎನ್. ಗುರುಸ್ವಾಮಿ

ಸಂಸ್ಥಾಪಕರು: ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

1901- 1990

ಜನನ: 01-10-1901

ಕೆ ಎನ್ ತಿಲಕ್ ಕುಮಾರ್

ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಯಲಹಂಕ ಉತ್ತರ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಯ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ 18 ವರ್ಷದೊಳಗಿನ ಮಕ್ಕಳ ವಿಶೇಷ ಆರೋಗ್ಯ ತಪಾಸಣೆ ಶಿಬಿರದಲ್ಲಿ ಶಾಸಕ ಹಾಗೂ ಬಿಡಿಎ ಅಧ್ಯಕ್ಷ ಎಸ್‌ಆರ್‌.ವಿಶ್ವನಾಥ್ ಅವರು ಮಕ್ಕಳಿಗೆ ಪ್ರೋಟಿನ್ ಪೌಡರ್ ಮತ್ತು ವಿಟಮಿನ್ ಸಿರಪ್ ವಿತರಿಸಿದರು. ಕಾರ್ಯಕ್ರಮದಲ್ಲಿ ಸಪ್ತಗಿರಿ ಮೆಡಿಕಲ್ ಕಾಲೇಜಿನ ತಜ್ಞ ವೈದ್ಯರು 380 ಮಕ್ಕಳ ಆರೋಗ್ಯ ತಪಾಸಣೆ ನಡೆಸಿದರು. ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಎಚ್‌.ರಮೇಶ್, ಡಿ.ಇ.ಐ.ಸಿ ವಿಭಾಗದ ಮುಖ್ಯಸ್ಥ ಡಾ.ಶ್ರೀನಿವಾಸಗೌಡ ಮತ್ತು ಸಿಡಿಪಿಒ ವಿಜಯಕುಮಾರ್ ಇದ್ದರು

'ಬ್ಲಾಕ್, ಬೀದಿ ಹಂತದಲ್ಲಿ ಲಸಿಕಾ ಕೇಂದ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಲಸಿಕೆಯ ಮೊದಲ ಡೋಸ್ ನೀಡುವಿಕೆಯಲ್ಲಿ ಶೇ 100 ಗುರಿ ಸಾಧನೆಗೆ ಮುಂದಾಗಿರುವ ಬಿಬಿಎಂಪಿ, ಇದಕ್ಕಾಗಿ ಕಸ ವಿಲೇವಾರಿಗಾಗಿ ಗುರುತಿಸಿರುವ ಬ್ಲಾಕ್‌ಗಳು ಮತ್ತು ಬೀದಿಗಳಲ್ಲಿ ಲಸಿಕಾ ಕೇಂದ್ರ ತೆರೆಯಲು ಮುಂದಾಗಿದೆ.

ನಗರದಲ್ಲಿ ಎಲ್ಲರಿಗೂ ಲಸಿಕೆ ನೀಡುವ ಸಲುವಾಗಿ 198 ವಾರ್ಡ್‌ಗಳಲ್ಲೂ ಬ್ಲಾಕ್ ಹಾಗೂ ಬೀದಿ ಮಟ್ಟದಲ್ಲಿ ಲಸಿಕಾ ಕೇಂದ್ರ ಸ್ಥಾಪಿಸುವ ಬಗ್ಗೆ ವೈದ್ಯರು, ಕಿರಿಯ ಆರೋಗ್ಯ ಸಹಾಯಕಿಯರು ಹಾಗೂ ಆಶಾ ಕಾರ್ಯಕರ್ತರಿಗೆ ತರಬೇತಿ ನೀಡಲು ಗುರುವಾರ ಕಾರ್ಯಾಗಾರ ಹಮ್ಮಿಕೊಂಡಿತ್ತು.

ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಿ.ರಂದೀಪ್, 'ಕಸ ವಿಲೇವಾರಿಗಾಗಿ 750 ಮನೆಗೊಂದರಂತೆ ಸುಮಾರು 4 ಸಾವಿರ ಬ್ಲಾಕ್‌ಗಳನ್ನು ರಚಿಸಲಾಗಿದೆ. ವಾರ್ಡ್‌ನಲ್ಲಿ 15ರಿಂದ 50 ಬ್ಲಾಕ್‌ಗಳಿವೆ. ಸೋಮವಾರದಿಂದ ಈ ಎಲ್ಲ ಬ್ಲಾಕ್‌ಗಳಲ್ಲಿ ಹಾಗೂ ಬೀದಿಗಳಲ್ಲಿ (ಲೇನ್) ಲಸಿಕಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು' ಎಂದು ತಿಳಿಸಿದರು.

'ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರ ತಂಡವು ಬ್ಲಾಕ್‌ಗಳ ಬೀದಿಯಲ್ಲಿರುವ ಪ್ರತಿಯೊಂದು ಮನೆಗೆ ಭೇಟಿ ನೀಡಿ, ಲಸಿಕೆ ಹಾಕಿಸಿಕೊಳ್ಳದವರ ಮಾಹಿತಿ ಪಡೆಯಬೇಕು. ಮನೆಯಲ್ಲಿ ಎಷ್ಟು ಜನ ಇದ್ದಾರೆ, ಯಾರು ಯಾಕಾಗಿ ಲಸಿಕೆ ಪಡೆದಿಲ್ಲ ಎಂಬ ಬಗ್ಗೆ ವಿವರ ಕಲೆಹಾಕಬೇಕು. ಲಸಿಕೆಯ ಮಹತ್ವವನ್ನು ಮನವರಿಕೆ ಮಾಡಿ ಲಸಿಕಾ ಕೇಂದ್ರಕ್ಕೆ ಕರೆದೊಯ್ದು ಲಸಿಕೆ ಕೊಡಿಸಬೇಕು' ಎಂದು ವಿವರಿಸಿದರು.



77.20 ಲಕ್ಷ ಮಂದಿಗೆ ಲಸಿಕೆ

ಬಿಬಿಎಂಪಿ ವ್ಯಾಪ್ತಿಯಲ್ಲಿ 77.20 ಲಕ್ಷ (ಶೇ 85ರಷ್ಟು) ಮಂದಿ ಈಗಾಗಲೇ ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದಿದ್ದಾರೆ. ಅಕ್ಟೋಬರ್ ಅಂತ್ಯದೊಳಗೆ ಶೇ 95ರಷ್ಟು ಮಂದಿಗೆ ಮೊದಲ ಡೋಸ್ ನೀಡುವ ಗುರಿಯನ್ನು ಬಿಬಿಎಂಪಿ ನಿಗದಿಪಡಿಸಿದೆ.

ಮಾನೆ– ತಹಶೀಲ್ದಾರ್ ಪಟ್ಟು: 'ಕೈ' ನಾಯಕರಿಗೆ ಇಕ್ಕಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಚುನಾವಣೆ ನಡೆಯಲಿರುವ ಹಾನಗಲ್ ವಿಧಾನಸಭಾ ಕ್ಷೇತ್ರದ ಟಿಕೆಟ್‌ಗೆ, ಈ ಕ್ಷೇತ್ರದಿಂದ ನಾಲ್ಕು ಬಾರಿ ಚುನಾಯಿತರಾಗಿರುವ ಮನೋಹರ ತಹಶೀಲ್ದಾರ್ ಮತ್ತು ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದ ಹಾಲಿ ವಿಧಾನ ಪರಿಷತ್ ಸದಸ್ಯ ಶ್ರೀನಿವಾಸ ಮಾನೆ ಪಟ್ಟು ಹಿಡಿದಿರುವುದು ಕಾಂಗ್ರೆಸ್ ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಇಬ್ಬರ ಮಧ್ಯೆ ಸಂಧಾನ ಸಭೆ ನಡೆಸಿ, ಒಬ್ಬ ಅಭ್ಯರ್ಥಿಯ ಹೆಸರು ಅಂತಿಮಗೊಳಿಸಲು ಸಿದ್ದರಾಮಯ್ಯ ನಿವಾಸದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಇತರ ನಾಯಕರು ಗುರುವಾರ ರಾತ್ರಿಯವರೆಗೆ ಸಮಾಲೋಚನೆ ನಡೆಸಿದರು. ಆದರೆ, ಸಭೆಯಲ್ಲಿ ಯಾವುದೇ ಅಂತಿಮ ತೀರ್ಮಾನ ಆಗಿಲ್ಲ. ಯಾರೇ ಅಭ್ಯರ್ಥಿಯಾದರೂ ಒಗ್ಗಟ್ಟಿನಿಂದ ಚುನಾವಣೆ ಎದುರಿಸುವಂತೆ ನಾಯಕರು ಸಲಹೆ ನೀಡಿದ್ದಾರೆ.

ಸಭೆಯ ಬಳಿಕ ಮಾತನಾಡಿದ ಮನೋಹರ ತಹಶೀಲ್ದಾರ್, 'ನಾಯಕರ ಸಲಹೆಯನ್ನು ಒಪ್ಪಿಕೊಂಡಿದ್ದೇವೆ. ಟಿಕೆಟ್ ಕೇಳುವುದು ಹಕ್ಕು. ಆ ಹಕ್ಕನ್ನು ನಾಯಕರ ಮುಂದೆ ಪ್ರತಿಪಾದಿಸಿದ್ದೇನೆ. ನನಗೇ ಕೊಡಬೇಕು, ಹಿರಿಯವನಿದ್ದೇನೆ. ನಾಲ್ಕು ಬಾರಿ ಶಾಸಕನಾಗಿದ್ದೆ. 45 ವರ್ಷ ಪಕ್ಷ ಕಟ್ಟಿದ್ದೇನೆ. ಒಂದು ನಿಮಿಷ ಕೂಡಾ ಮನಸ್ಸು ಬದಲಿಸದೆ ಪಕ್ಷದಲ್ಲಿದ್ದೇನೆ. ಯಾವುದೇ ಪರಿಸ್ಥಿತಿಯಲ್ಲಿ ನನಗೇ ಟಿಕೆಟ್ ಕೊಡಲೇಬೇಕು ಎಂದು ಪ್ರತಿಪಾದಿಸಿದ್ದೇನೆ. ಅದಕ್ಕೆ ನಾಯಕರು ಸ್ಪಂದಿಸಿದ್ದಾರೆ' ಎಂದರು.

'ಇಬ್ಬರಿದ್ದೀರಿ, ಒಬ್ಬರಿಗೆ ಟಿಕೆಟ್ ಕೊಡಲು ಸಾಧ್ಯ ಎಂದಿದ್ದಾರೆ. ನನಗೇ ಕೊಡಬೇಕು ಎಂದು ಕೊನೆಯದಾಗಿಯೂ ಮನವಿ ಮಾಡಿದ್ದೇನೆ. ಒಬ್ಬರಿಗೆ ಟಿಕೆಟ್ ಕೊಡುತ್ತೇವೆ. ಮತ್ತೊಬ್ಬರಿಗೆ ಬೇರೆ ರೀತಿ ಗೌರವ ಕೊಡುತ್ತೇವೆ ಎಂದಿದ್ದಾರೆ' ಎಂದೂ ಹೇಳಿದರು.

'ಪಕ್ಷ ಗೆಲ್ಲಬೇಕು ಎಂಬ ನಿಟ್ಟಿನಲ್ಲಿ ಬೇರೆ ಬೇರೆ ರೀತಿಯಲ್ಲಿ ಯಾರೂ ಮಾತನಾಡಬಾರದು., ಹೈಕಮಾಂಡ್ ಜೊತೆ ಸಮಾಲೋಚನೆ ಮಾಡಿ, ಬೇರೆ ಬೇರೆ ಮೂಲಗಳಿಂದ ಮಾಹಿತಿ ಪಡೆದು ಅಭ್ಯರ್ಥಿಯನ್ನು ಘೋಷಣೆ ಮಾಡುವುದಾಗಿ ತಿಳಿಸಿದ್ದಾರೆ' ಎಂದರು.

ಶ್ರೀನಿವಾಸ ಮಾನೆ ಮಾತನಾಡಿ, 'ನಮ್ಮ ಅಭಿಪ್ರಾಯವನ್ನು ರಾಜ್ಯದ ನಾಯಕರಿಗೆ ತಿಳಿಸಿದ್ದೇವೆ. ಬಿಜೆಪಿ ಸರ್ಕಾರದ ವೈಫಲ್ಯದ ವಿರುದ್ಧ, ರಾಜ್ಯದ ಹಿತದೃಷ್ಟಿಯಿಂದ ನಮ್ಮ ಭಿನ್ನಾಭಿಪ್ರಾಯ ಬದಿಗಿಟ್ಟು, ಪಕ್ಷ ಕೈಗೊಳ್ಳುವ ತೀರ್ಮಾನಕ್ಕೆ ಬದ್ಧರಾಗಿ ಒಮ್ಮತದಿಂದ ಚುನಾವಣೆ ಎದುರಿಸಲು ನಿರ್ಧರಿಸಿದ್ದೇವೆ' ಎಂದರು.

'ಮನೋಹರ ತಹಶೀಲ್ದಾರ್, ಶ್ರೀನಿವಾಸ ಮಾನೆ, ಪ್ರಕಾಶ್ ಪಾಟೀಲ ಅವರಲ್ಲಿ ಯಾರೇ ಆಗಿರಲಿ ಪಕ್ಷ ಬಹಳ ಮುಖ್ಯ ಎಂದು ಅರಿತಿದ್ದಾರೆ. ನಾವು ಯಾರಿಗೇ ಟಿಕೆಟ್ ಕೊಟ್ಟರೂ ಎಲ್ಲರೂ ಒಗ್ಗಟ್ಟಿನಿಂದ ಚುನಾವಣೆ ಎದುರಿಸುತ್ತಾರೆ. ಇಡೀ ಜಿಲ್ಲೆಯ ನಾಯಕರು ಶಾಸಕಾಂಗ ಪಕ್ಷದ ನಾಯಕರ ಸಮ್ಮುಖದಲ್ಲಿ ಚರ್ಚೆ ಮಾಡಿದ್ದಾರೆ. ರಾಜಕೀಯವಾಗಿ ಎಲ್ಲರಿಗೂ ಸ್ಥಾನಮಾನ ಕಲ್ಪಿಸಬೇಕು ಎಂದು ಮನವಿ ಮಾಡಿದ್ದಾರೆ. ಅದನ್ನು ನಾವು ಮಾಡುತ್ತೇವೆ. ಯಾರಿಗೆ ಟಿಕೆಟ್ ಸಿಕ್ಕರೂ ಎಲ್ಲರೂ ಕೆಲಸ ಮಾಡುತ್ತಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

'ಹೆದ್ದಾರಿಯಲ್ಲಿ ಬೀದಿ ದೀಪ ಅಳವಡಿಕೆಗೆ ಕಾನೂನಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲಮಂಗಲ-ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬೀದಿ ದೀಪ ಅಳವಡಿಸಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ತುಮಕೂರಿನ ವಕೀಲ ರಮೇಶ್ ನಾಯ್ಕ ಅರ್ಜಿ ಸಲ್ಲಿಸಿ, ಈ ಸಂಬಂಧ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ(ಎನ್‌ಎಚ್‌ಎಐ) ನಿರ್ದೇಶನ ನೀಡಬೇಕು ಎಂದು ಕೋರಿದ್ದರು.

ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, 'ಹೆದ್ದಾರಿಯಲ್ಲಿ ಬೀದಿ ದೀಪ ಅಳವಡಿಸಬೇಕು ಎಂಬುದಕ್ಕೆ ಶಾಸನಬದ್ಧ ಅವಕಾಶವನ್ನು ಅರ್ಜಿದಾರರು ದಾಖಲಿಸಿಲ್ಲ' ಎಂದು ಪೀಠ ಹೇಳಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	23.33 ಕೋಟಿ ▲	3.37ಕೋಟಿ ▲
ಸಕ್ರಿಯ ಪ್ರಕರಣ	1.84 ಕೋಟಿ ▼	2.76ಲಕ್ಷ ▼
ಗುಣಮುಖ	21.01 ಕೋಟಿ ▲	3.29 ಕೋಟಿ
ಸಾವು	47.73 ಲಕ್ಷ ▲	4.47ಲಕ್ಷ

ದಿನದ ಮಾಹಿತಿ	ವಿಶ್ವ	ಭಾರತ
ಹೊಸ ಪ್ರಕರಣ	3.78 ಲಕ್ಷ ▲	21,885 ▲
ಗುಣಮುಖ	4.94 ಲಕ್ಷ ▲	29,452 ▲
ಸಾವು	5,515 ▲	373 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

81,409 ಅಮೆರಿಕ ▲ · 37,958 ಬ್ರಿಟನ್ ▲ · 27,188 ಟರ್ಕಿ ▲

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

98.38 ಅಮೆರಿಕ ▼ · 13.46 ಬ್ರಿಟನ್ ▲ · 4.80 ಟರ್ಕಿ

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

1.38 ಲಕ್ಷ ಮಹಾರಾಷ್ಟ್ರ · 35,526 ತಮಿಳುನಾಡು ▲ · 25,087 ದೆಹಲಿ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

65.44 ಮಹಾರಾಷ್ಟ್ರ ▲ · 46.52 ಕೇರಳ ▲ · 26.60 ತಮಿಳುನಾಡು ▲

'ಉದ್ಯೋಗ ಕ್ಷೇತ್ರದಲ್ಲಿ ಕನ್ನಡಿಗರಿಗೆ ಆದ್ಯತೆ'

ಬೆಂಗಳೂರು: 'ಉದ್ಯೋಗ ಕ್ಷೇತ್ರದಲ್ಲಿ ಸ್ಥಳೀಯ ಕನ್ನಡಿಗರಿಗೆ ಆದ್ಯತೆ ದೊರಕಿಸಿ ಕೊಡಲು ಮುಖ್ಯಮಂತ್ರಿ ಹಾಗೂ ಕಾರ್ಮಿಕ ಇಲಾಖೆಯೊಂದಿಗೆ ಚರ್ಚಿಸಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ನಗರದಲ್ಲಿ ಗುರುವಾರ ಹಮ್ಮಿಕೊಂಡ 'ಬದಲಾದ ಉದ್ಯೋಗ ಪರ್ವ' ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, 'ರಾಜ್ಯದಲ್ಲಿರುವ ಎಲ್ಲ ಸಂಸ್ಥೆಗಳು ಕನ್ನಡಕ್ಕೆ ಮಾನ್ಯತೆ ನೀಡುವ ಜೊತೆಗೆ ಇಲ್ಲಿನ ಯುವಕರಿಗೆ ಆದ್ಯತೆ ನೀಡಬೇಕು. ಈ ಬಗ್ಗೆ ಆಗಬೇಕಾದ ಕಾರ್ಯಗಳ ಬಗ್ಗೆ ಇಲಾಖೆಯು ಪರಿಣಾಮಕಾರಿ ನಿರ್ಣಯಗಳನ್ನು ತೆಗೆದುಕೊಳ್ಳಲಿದೆ' ಎಂದರು.

'ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದ (ಐಟಿ, ಬಿಟಿ) ಜೊತೆಗೆ ಖಾಸಗಿ ವಲಯದಲ್ಲಿಯೂ ಸ್ಥಳೀಯ ಕನ್ನಡಿಗರಿಗೆ ಪ್ರಾತಿನಿಧ್ಯ ಕಲ್ಪಿಸಬೇಕು' ಎಂದು ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆಗ್ರಹಿಸಿದರು.

ಸಾವಿರದತ್ತ ಹೊಸ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗುರುವಾರ 933 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. 13 ದಿನಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಸೆ.17ರಂದು 1,003 ಪ್ರಕರಣಗಳು ಖಚಿತಪಟ್ಟಿದ್ದವು. ಬಳಿಕ ಈ ಸಂಖ್ಯೆ 500ರ ಗಡಿಯ ಆಸುಪಾಸಿನಲ್ಲಿತ್ತು. ಒಂದು ದಿನದ ಅವಧಿಯಲ್ಲಿ 1.14 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.81 ರಷ್ಟು ವರದಿಯಾಗಿದೆ. 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಹಾಗೂ ರಾಯಚೂರಿನಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 94, ಮೈಸೂರಿನಲ್ಲಿ 76 ಹಾಗೂ ಕೊಡಗಿನಲ್ಲಿ 48 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 291, ಉಡುಪಿಯಲ್ಲಿ 77 ಹಾಗೂ ತುಮಕೂರಿನಲ್ಲಿ 54 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.76 ಲಕ್ಷಕ್ಕೆ ತಲುಪಿದೆ.

ಸೋಂಕಿತರಲ್ಲಿ 704 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.25 ಲಕ್ಷದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 12,780ಕ್ಕೆ ಏರಿಕೆಯಾಗಿದೆ.

ಕೋವಿಡ್ ಪೀಡಿತರಲ್ಲಿ 14 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 7 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 5, ದಕ್ಷಿಣ ಕನ್ನಡದಲ್ಲಿ 3, ಹಾಸನದಲ್ಲಿ ಇಬ್ಬರು, ಬೆಳಗಾವಿ, ಮೈಸೂರು, ತುಮಕೂರು ಹಾಗೂ ಉತ್ತರ ಕನ್ನಡದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ಮರಣ ಪ್ರಮಾಣ ದರವು ಶೇ 1.50 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,794ಕ್ಕೆ ತಲುಪಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,46,430 ಒಟ್ಟು ಪ್ರಕರಣಗಳು ▲

(12,46,139 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,623 ▲	12,22,651 ▲	16,155 ▲

ದಿನದ ಏರಿಕೆ	
ಹೊಸ ಪ್ರಕರಣ	291 ▲
ಗುಣಮುಖ	172 ▲
ಸಾವು	05 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಮೃತ 1200 ಮಂದಿಗೆ ಪಿಂಡಪ್ರದಾನಕ್ಕೆ ಮುಂದಾದ ಸಚಿವ ಆರ್. ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟ 1,200 ಮಂದಿಯ ವಾರಸುದಾರರು ಪತ್ತೆಯಾಗದ ಕಾರಣ ಅವರಿಗೆ ಪಿತೃಪಕ್ಷದ ವೇಳೆ ವಿಷ್ಣು ಶ್ರಾದ್ಧ ಮಾಡಿ ಪಿಂಡಪ್ರದಾನ ಮಾಡಲು ಕಂದಾಯ ಸಚಿವ ಆರ್. ಅಶೋಕ ಮುಂದಾಗಿದ್ದಾರೆ.

ಕೋವಿಡ್ ಎರಡನೇ ಅಲೆಯಲ್ಲಿ ಮೃತಪಟ್ಟವರ ಅಂತ್ಯಕ್ರಿಯೆ ನಡೆಸಲು ಯಾರೂ ಮುಂದೆ ಬರುತ್ತಿರಲಿಲ್ಲ. ಕೋವಿಡ್ ಭಯದಿಂದಾಗಿ ಮೃತರ ಕುಟುಂಬದವರೂ ಈ ಕೆಲಸ ಮಾಡಲು ಅಂಜುವ ವಾತಾವರಣ ಇತ್ತು. ಇಂತಹ 1200 ಜನರ ಅಂತ್ಯಕ್ರಿಯೆಯನ್ನು ವಿವಿಧ ಶವಾಗಾರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯೇ ನೆರವೇರಿಸಿದ್ದರು. ಶವಸಂಸ್ಕಾರವಾದ ಬಳಿಕ ಚಿತಾಭಸ್ಮವನ್ನೂ ಕೊಂಡೊಯ್ಯಲು ಯಾರೂ ಬಂದಿರಲಿಲ್ಲ.

ಇಂತಹ ಅನಾಥರ ಚಿತಾಭಸ್ಮ ಹಾಗೂ ಅಸ್ಥಿಯನ್ನು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಬಳಿ ಕಾವೇರಿಯಲ್ಲಿ ವಿಸರ್ಜಿಸಿದ್ದ ಸಚಿವ ಅಶೋಕ, ಮೃತರ ಅಂತ್ಯೋತ್ತರ ಕ್ರಿಯೆಗಳನ್ನು ಸಾಮೂಹಿಕವಾಗಿ ನಡೆಸಿದ್ದರು. ಕೆಲ ತಿಂಗಳುಗಳ ಹಿಂದೆ ಅಸ್ಥಿ ವಿಸರ್ಜನೆ ಮಾಡಿರುವುದರಿಂದ ಸೋಮವಾರ (ಅ.4) ವಿಷ್ಣು ಶ್ರಾದ್ಧ ನಡೆಸಲು ಅಶೋಕ ತೀರ್ಮಾನಿಸಿದ್ದಾರೆ. ಪಿತೃಪಕ್ಷ ಹೊತ್ತಿನಲ್ಲಿ ಶ್ರಾದ್ಧ ನಡೆಸಲು ಅಶೋಕ ನಿರ್ಧರಿಸಿದ್ದಾರೆ. ಪಂಡಿತ ಭಾನುಪ್ರಕಾಶ ಶರ್ಮಾ ಅವರ ಸೂಚನೆಯ ಮೇರೆಗೆ ಅ.4ರಂದು ದಿನ ನಿಗದಿ ಮಾಡಲಾಗಿದೆ ಎಂದೂ ಮೂಲಗಳು ಹೇಳಿವೆ.

ಅನಾಥರ ಅಸ್ಥಿ ವಿಸರ್ಜನೆ ಹಾಗೂ ಧಾರ್ಮಿ ವಿಧಿ ನಡೆಸಿಕೊಟ್ಟಿದ್ದ ಅಶೋಕ ಅವರ ಕ್ರಮಕ್ಕೆ ಸಂಘ ಹಾಗೂ ಬಿಜೆಪಿ ಪ್ರಮುಖರು ಶ್ಲಾಘನೆ ವ್ಯಕ್ತಪಡಿಸಿದ್ದರು. ಅದೇ ಕಾರಣಕ್ಕೆ ತಿಥಿ ಕಾರ್ಯ ಮಾಡಲು ಮುಂದಾಗಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಪ್ರಥಮ ಸೆಮಿಸ್ಟರ್ ಡಿಪ್ಲೊಮಾ ಪ್ರಿಂಟಿಂಗ್ ಟೆಕ್ನಾಲಜಿ ಕೋರ್ಸ್‌ನ ತರಗತಿ ಪ್ರಾರಂಭ ಕಾರ್ಯಕ್ರಮ: ಉದ್ಘಾಟನೆ: ಶಿವಶಂಕರ್ ನಾಯ್ಕ್ ದೊಡ್ಡಮನೆ, ಆಯೋಜನೆ ಹಾಗೂ ಸ್ಥಳ: ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ, ಬೆಳಿಗ್ಗೆ 10

ಜೆ.ಎಚ್. ಪಟೇಲ್ ಜನ್ಮದಿನಾಚರಣೆ: ಉದ್ಘಾಟನೆ: ಸಿಂ. ರಾ. ಹೊನ್ನಲಿಂಗಯ್ಯ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಅಲ್ಲಮ ಕಲಾಶಾಲೆ, ಸೀಗೆಹಳ್ಳಿ ರಸ್ತೆ, ಕನ್ನಲ್ಲಿ, ಬೆಳಿಗ್ಗೆ 10.30



ಜೆ.ಎಚ್. ಪಟೇಲ್

ಡಾ.ಬಿ.ಆರ್. ಅಂಬೇಡ್ಕರ್ ಓದು ಕಾರ್ಯಕ್ರಮ: ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪನ್ಯಾಸ: ಕಾ.ವೆಂ. ಶ್ರೀನಿವಾಸಮೂರ್ತಿ, ಮುಖ್ಯ ಅತಿಥಿಗಳು: ಎಸ್. ಶಾಂತರಾಜು, ಭಾಗೀರತಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ನಗರ ಜಿಲ್ಲೆ, ಸ್ಥಳ: ಅಲ್ಲಮ ಕಲಾಶಾಲೆ ಸೀಗೆಹಳ್ಳಿ ರಸ್ತೆ, ಕನ್ನಲ್ಲಿ, ಬೆಳಿಗ್ಗೆ 11.30

56ನೇ ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ: ಶೋಭಾ ಕರಂದ್ಲಾಜೆ, ಮುಖ್ಯ ಅತಿಥಿಗಳು: ಮಹಾಬಲೇಶ್ವರ ಎಂ.ಎಸ್., ಅಧ್ಯಕ್ಷತೆ: ಡಾ.ಎಸ್. ರಾಜೇಂದ್ರ ಪ್ರಸಾದ್, ಆಯೋಜನೆ: ಕೃಷಿ ವಿಶ್ವವಿದ್ಯಾಲಯ (ಜಿಕೆವಿಕೆ), ಸ್ಥಳ: ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಳಿಗ್ಗೆ 10.30

ವಿಶ್ವ ಹಿರಿಯ ನಾಗರಿಕರ ದಿನಾಚರಣೆ-2021 ಮತ್ತು ರಾಷ್ಟ್ರೀಯ ಹಿರಿಯ ನಾಗರಿಕರ ಸಹಾಯವಾಣಿ ಲೋಕಾರ್ಪಣೆ: ಬಸವರಾಜ ಬೊಮ್ಮಾಯಿ, ಪ್ರಶಸ್ತಿ ಪ್ರದಾನ: ಗೋವಿಂದ ಕಾರಜೋಳ, ಹಾಲಪ್ಪ ಬಸಪ್ಪ ಆಚಾರ್, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 1

ಪಿ.ಎನ್. ಕೃಷ್ಣಮೂರ್ತಿ ಅವರಿಗೆ ಅಭಿನಂದನಾ ಸಮಾರಂಭ: ಉದ್ಘಾಟನೆ: ಅ. ದೇವೇಗೌಡ, ಅಭಿನಂದನಾ ನುಡಿಗುಚ್ಛ ಬಿಡುಗಡೆ: ಪ್ರೊ.ಎಲ್.ಎನ್. ಮುಕುಂದರಾಜ್, ಆಯೋಜನೆ: ಪಿ.ಎನ್. ಕೆ. ಅಭಿನಂದನಾ ಸಮಿತಿ, ಸ್ಥಳ: ಚನ್ನಬಸಪ್ಪ ಸಭಾಂಗಣ, ಸಚಿವಾಲಯ ಕ್ಲಬ್, ಕಬ್ಬನ್ ಉದ್ಯಾನ, ಮಧ್ಯಾಹ್ನ 1.30

ಜೆ.ಎಚ್. ಪಟೇಲ್ ಜನ್ಮದಿನಾಚರಣೆ ಹಾಗೂ 'ಮಾಧ್ಯಮ ಮತ್ತು ಜೆ.ಎಚ್. ಪಟೇಲ್' ಪುಸ್ತಕ ಬಿಡುಗಡೆ: ಉದ್ಘಾಟನೆ: ಬಿ.ಎಲ್. ಶಂಕರ್, ಮುಖ್ಯ ಅತಿಥಿಗಳು: ಬಿ.ಎಸ್. ಯಡಿಯೂರಪ್ಪ, ಎಂ. ವೀರಪ್ಪ ಮೊಯಿಲಿ, ಟಿ. ಪ್ರಭಾಕರ್, ಲಕ್ಷ್ಮೀನಾರಾಯಣ ಗೌಡ, ಸುನಿತಾ ಶಂಕರ ಗೌಡ, ಪುಸ್ತಕ ಬಿಡುಗಡೆ: ವೈ.ಎಸ್.ವಿ. ದತ್ತ, ಆಯೋಜನೆ: ಜೆ.ಎಚ್. ಪಟೇಲ್ ಪ್ರತಿಷ್ಠಾನ, ಸ್ಥಳ: ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಸಂಜೆ 5

ಮನೋರಂಗದಲ್ಲಿ ಕನ್ನಡ ನಾಟಕಗಳು: ಮೂವತ್ತೊಂದು ದಿನ ಮೂವತ್ತೊಂದು ಉಪನ್ಯಾಸ, ಉದ್ಘಾಟನೆ: ಪ್ರೊ.ಎಚ್.ಎಸ್. ಉಮೇಶ್, ಉಪಸ್ಥಿತಿ: ಎನ್. ಕರಿಯಪ್ಪ, ಅಧ್ಯಕ್ಷತೆ: ಬಿ.ವಿ. ವಸಂತಕುಮಾರ್, ವಿಷಯ: ಮಿತ್ರಾವಿಂದ ಗೋವಿಂದ ಮತ್ತು ಕನ್ನಡ ನಾಟಕ ಪರಂಪರೆ, ಉಪನ್ಯಾಸಕ: ಪ್ರೊ.ಎಚ್. ಎಸ್. ಉಮೇಶ್, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಅಕ್ಟೋಬರ್ 1ರಂದು ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ ನಗರದ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಎಚ್‌ಎಸ್‌ಆರ್ ವಿದ್ಯುತ್ ವಿತರಣಾ ಕೇಂದ್ರ: ಎಚ್‌ಎಸ್‌ಆರ್ 2ನೇ ಸೆಕ್ಟರ್, 27ನೇ ಮುಖ್ಯರಸ್ತೆ ಹಾಗೂ ಸುತ್ತಲಿನ ಪ್ರದೇಶ. ರಾಯಲ್ ಕೌಂಟಿ, ಕೃಷ್ಣ ರೆಡ್ಡಿ ಲೇಔಟ್, ಆಶ್ರಯ ಕಾಲೊನಿ ಮತ್ತು ಸುತ್ತಲಿನ ಪ್ರದೇಶ (ಬೆಳಿಗ್ಗೆ 10.30ರಿಂದ ಮಧ್ಯಾಹ್ನ 1.30). ಸನ್ ಸಿಟಿ, ರಾಮಯ್ಯ ಸಿಟಿ, ಸಾಯಿ ಎನ್‌ಕ್ಲೇವ್, ರಾಘವೇಂದ್ರ ಲೇಔಟ್, ಆರಾಧನ ಲೇಔಟ್ ಹಾಗೂ ಸುತ್ತಲಿನ ಪ್ರದೇಶ (ಮಧ್ಯಾಹ್ನ 2ರಿಂದ ಸಂಜೆ 5).

ಅಮರಜ್ಯೋತಿ ವಿದ್ಯುತ್ ವಿತರಣಾ ಕೇಂದ್ರ: ಈಜಿಪುರ, ವಿವೇಕನಗರ ಎಕ್ಸ್‌ಟೆನ್ಶನ್, ದೊಮ್ಮಲೂರು 14ನೇ ತಿರುವು, ಕೋಡಿಹಳ್ಳಿ, ಕೆ.ಆರ್. ಕಾಲೊನಿ, ಗುಂಡಪ್ಪಗೌಡ ರಸ್ತೆ, ಅಮರಜ್ಯೋತಿ ಬಡಾವಣೆ ಮತ್ತು ಸುತ್ತಲಿನ ಪ್ರದೇಶ.

ಆರ್‌ಬಿಐ (ಬೆಳಿಗ್ಗೆ 10 ರಿಂದ ಸಂಜೆ 5.30): ಚುಂಚಘಟ್ಟ ಗ್ರಾಮ, ಗಣಪತಿಪುರ, ಟೀಚರ್ಸ್ ಕಾಲೊನಿ, ಖೋಡೆಸ್ ಬಿಯರ್ ಫ್ಯಾಕ್ಟರಿ, ಬೀರೇಶ್ವರ ನಗರ, ಕೋಣನಕುಂಟೆ ಕೈಗಾರಿಕಾ ಪ್ರದೇಶ, ದೊಡ್ಡನೆ ಕೈಗಾರಿಕಾ ಪ್ರದೇಶ. ವಸಂತ ವಲ್ಲಭ ನಗರ, ಶಾರದಾ ನಗರ, ಮಾರುತಿ ಲೇಔಟ್, ವಸಂತಪುರ, ಕುವೆಂಪುನಗರ ಮುಖ್ಯರಸ್ತೆ, ಪ್ರತಿಮಾ ಇಂಡಸ್ಟ್ರಿಯಲ್ ಲೇಔಟ್, ಇಸ್ರೊ ಲೇಔಟ್.

ನೆಲಗೆದರನಹಳ್ಳಿ: ಸುವರ್ಣನಗರ, ಸುವರ್ಣನಗರ ಬಸ್ ನಿಲ್ದಾಣ ಹಾಗೂ ಸುತ್ತಲಿನ ಪ್ರದೇಶ.

ಬ್ಯಾಡರಹಳ್ಳಿ: ಹೊಸಹಳ್ಳಿ, ಬಿಡಬ್ಲ್ಯುಎಸ್‌ಎಸ್‌ಬಿ ನೀರು ಪೂರೈಕೆ ಕೇಂದ್ರ ಮತ್ತು ಸುತ್ತಲಿನ ಪ್ರದೇಶ.

ವಿಜಯನಗರ: ಮಣಿ ವಿಲ್ಲಾ ಗಾರ್ಡನ್, ಕಾಮಾಕ್ಷಿಪಾಳ್ಯ, ವಿನಾಯಕನಗರ, ಶಿವ ಫಾರ್ಮ್, ಶಿವ ದೇವಸ್ಥಾನ, ಆನಂದಪ್ಪ ಲೇಔಟ್, ಮರಿಯಪ್ಪ ರಸ್ತೆ, ಕೆ.ಜಿ.ಎಚ್.ಎಸ್.ಲೇಔಟ್, ಪಾಪರೆಡ್ಡಿ ಪಾಳ್ಯ, ಕೆ.ಕೆ.ಲೇಔಟ್, ಬಿನ್ನಿ ಲೇಔಟ್, ಜಯಲಕ್ಷ್ಮಮ್ಮ ಲೇಔಟ್, ಬಿಬಿಎಂಪಿ ವಾರ್ಡ್ ಕಚೇರಿ ಮತ್ತು ಸುತ್ತಲಿನ ಪ್ರದೇಶ.

ಶ್ರೀಗಂಧಕಾವಲ್: ಲಕ್ಷ್ಮಣನಗರ, ಸಂಜೀವಿನಿನಗರ, ವಿಘ್ನೇಶ್ವರನಗರ, ಹೆಗ್ಗನಹಳ್ಳಿ, ಹೆಗ್ಗನಹಳ್ಳಿ ಕ್ರಾಸ್, ಸುಂಕದಕಟ್ಟೆ ಮತ್ತು ಸುತ್ತಲಿನ ಪ್ರದೇಶ.

ಬಾಗ್ಮನೆ ಟೆಕ್ ಪಾರ್ಕ್: ಜೀವನ್‌ಬಿಮಾ ನಗರದ 4,8,9 ಮತ್ತು 10ನೇ ಮುಖ್ಯರಸ್ತೆ, ದೊಮ್ಮಲೂರು 2ನೇ ಹಂತ, ದೂಪನಹಳ್ಳಿ, ಗೋಪಾಲನ್ ಗ್ರಾಂಡೆರ್ ವಸತಿ ಸಮುಚ್ಚಯ, ಸೀತಾರಾಮ ಪಾಳ್ಯ, ಕೆ.ಆರ್.ಪುರಂ, ಭಟ್ಟರಹಳ್ಳಿ, ಟಿ.ಸಿ.ಪಾಳ್ಯ.

ಎಸಿಬಿ ದಾಳಿ: ಸರ್ವೆಯರ್ ವಶಕ್ಕೆ

ರಾಮನಗರ: ಜಮೀನಿನ ಸರ್ವೆ ಸ್ಕೆಚ್ ನೀಡಲು ಲಂಚ ಪಡೆಯುತ್ತಿದ್ದ ಬೆಂಗಳೂರು ದಕ್ಷಿಣ ತಾಲ್ಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕ ಕಚೇರಿಯ ಲೈಸನ್ಸ್ ಸರ್ವೆಯರ್ ಜಿ. ಬಸವರಾಜು ಎಂಬುವರನ್ನು ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಗುರುವಾರ ವಶಕ್ಕೆ ಪಡೆದರು.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಗುಳಕಮಲೆ ಗ್ರಾಮದ ನಿವಾಸಿಯೊಬ್ಬರು 5 ಗುಂಟೆ ಜಮೀನಿನ ಕ್ರಯಪತ್ರಕ್ಕೆ ಬೇಕಾದ ಸ್ಕೆಚ್‌ಗಾಗಿ ಉತ್ತರಹಳ್ಳಿ ನಾಡಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದರು. ಇದನ್ನು ನೀಡಲು ಬಸವರಾಜು ₹45 ಸಾವಿರ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಕಡೆಗೆ ₹22 ಸಾವಿರಕ್ಕೆ ಒಪ್ಪಿ, ₹10 ಸಾವಿರ ಮುಂಗಡ ಹಣವನ್ನೂ ಪಡೆದುಕೊಂಡಿದ್ದರು.

ಭಾರತೀಯ ಜೀವ ವಿಮಾ ನಿಗಮ
भारतीय जीवन बीमा निगम
LIFE INSURANCE CORPORATION OF INDIA

Divisional Office I, Jeevan Prakash, J C Road, Bengaluru-560002, PH: 22966605
Email: sales.bangalore-do1@licindia.com

Divisional Office II, Indiranagar Bengaluru-560038. PH: 22966801
Email: sales.bangalore-do2@licindia.com

NOTICE FOR EMPANELMENT

Applications are invited from reputed firms for empanelment at Life Insurance Corporation of India, Divisional Office-I & II, Bengaluru for the following Competition Prizes & Services .1) Gold, Silver Coins & Silver articles. **2)** Trophies, Medals, Shields(Acrylic, Gun Metal, Wooden, Glass, Steel, Bronze, white metal etc). **3)** Wall clocks & Wrist Watches. **4)** Bed sheets, Suitings & Shirtings. **5)** Wood work articles, Soaps, Perfumes. **6)** Crockery items, Kitchen wares. **7)** Travel Bags, Pouches, Laptop Bags, Back Pack, Leather items. **8)** Electric items like Mixer, Iron Box, Fans, Emergency Lamps, Hot Plates. **9)** Electronic items like Mobile handsets, Tabs, Laptop. **10)** Other house hold articles, Refrigerators, Air Conditioners, Coolers, Television, Music Player, Home Theatre. **11)** Fabric/Cloth Banner Printing. **12)** Fabric/Cloth Printing & Mounting in our Hoardings. **13)** Fabric/Cloth Printing and Mounting for Arches. **14)** Standees. **15)** Repair of the existing hoardings. **16)** Printing of Pamphlets, leaf lets, Posters, Stickers.

The details of Empanelment are available in our website www.licindia.in/tenders. Application of empanelment are to be collected from Divisional Office, Bengaluru-1 on payment of Rs.100/- in cash /DD/Cheque at Divisional Office cash counter (or) can be downloaded from our website. Last Date for submitting the duly filled in Applications is 3.00 PM on 18.10.2021.

Senior Divisional Manager reserves the rights to accept or reject any or all applications in full/part without assigning any reasons whatsoever

Dated : 30-09-2021 Sd/-
Place : Bengaluru Senior Divisional Manager

ಪಿ.ಇ.ಎಸ್ ಇಂಜಿನಿಯರಿಂಗ್ ಕಾಲೇಜು

ಮಂಡ್ಯ– 571 401, ಕರ್ನಾಟಕ

(ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಡಿಯಲ್ಲಿನ ಸ್ವಾಯತ್ತ ಸಂಸ್ಥೆ, ಕರ್ನಾಟಕ ರಾಜ್ಯ ಅನುದಾನಿತ ಸಂಸ್ಥೆ ಮತ್ತು ಎನ್.ಬಿ.ಎ.ಯ ಮಾನ್ಯತೆ ಪಡೆದಿರುತ್ತದೆ)

ಫೋನ್ ನಂ: +91 8232–220043, 238683, 238042, ಫ್ಯಾಕ್ಸ್ +91 8232–222075

ನಂ:ಪಿಇಎಸ್/ಇಎಸ್‌ಟಿ/2021–22 ದಿನಾಂಕ:30–09–2021

ಉದ್ಯೋಗ ಪ್ರಕಟಣೆ

ಕಾಲೇಜಿನ ಎಂಬಿಎ ವಿಭಾಗದಲ್ಲಿ (ಅನುದಾನರಹಿತ) ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ರೂ.1000/– ಗಳ ಅರ್ಜಿ ಶುಲ್ಕವನ್ನು ನೇರವಾಗಿ ನಗದು ವಿಭಾಗದಲ್ಲಿ ಅಥವಾ ಪ್ರಾಂಶುಪಾಲರು, ಪಿಇಎಸ್ ಇಂಜಿನಿಯರಿಂಗ್ ಕಾಲೇಜು, ಮಂಡ್ಯರವರ ಹೆಸರಿನಲ್ಲಿ ಡಿ.ಡಿ ಮೂಲಕ ಪಾವತಿಸಿ, ಅರ್ಜಿ ನಮೂನೆಯನ್ನು ಪಡೆದು **ದಿನಾಂಕ: 16–10–2021** ರಂದು ಸಂಜೆ 5.00 ಗಂಟೆಯೊಳಗೆ ಭರ್ತಿ ಮಾಡಿದ ಅರ್ಜಿಗಳನ್ನು ಸೂಕ್ತ ದಾಖಲಾತಿಗಳೊಡನೆ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ, ಖುದ್ದು ಅಥವಾ ಅಂಚೆ ಮೂಲಕ ಪ್ರಾಂಶುಪಾಲರು, ಪಿಇಎಸ್ ಇಂಜಿನಿಯರಿಂಗ್ ಕಾಲೇಜು, ಮಂಡ್ಯ–571401 ರವರಿಗೆ ತಲುಪಿಸತಕ್ಕದ್ದು.

ಲಕೋಟೆಯ ಮೇಲೆ ಹುದ್ದೆಯ ಹೆಸರು & ಸ್ಪೆಷಲೈಸೇಷನ್ ಬಗ್ಗೆ ಸ್ಪಷ್ಟವಾಗಿ ನಮೂದಿಸತಕ್ಕದ್ದು.

ಕ್ರ. ಸಂ.	ವಿಭಾಗ	ಒಟ್ಟು ಹುದ್ದೆಗಳ ಸಂಖ್ಯೆ	ಸ್ಪೆಷಲೈಸೇಷನ್
1	ಎಂಬಿಎ.	01	Finance Management
		01	Human Resource Management

1) **ವಿದ್ಯಾರ್ಹತೆ:–** ಎಂಬಿಎ ಪದವಿಯನ್ನು ಸಂಬಂಧಿಸಿದ ವಿಷಯದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿರಬೇಕು ಹಾಗೂ Ph.D/NET/SLET ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

2) **ವೇತನ:–** ಎಐಸಿಟಿಇ ನಿಯಮಾವಳಿ ಪ್ರಕಾರ ಹಾಗೂ ಪಿಇಟಿ ವೇತನ ಶ್ರೇಣಿ.

ಸಾಮಾನ್ಯ ನಿಬಂಧನೆಗಳು:

1) ಕೊನೆ ದಿನಾಂಕ ಮುಗಿದ ನಂತರ ಬಂದ ಅರ್ಜಿಗಳನ್ನು ಹಾಗೂ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
2) ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
3) ನೇಮಕಾತಿಗೆ ಆಯ್ಕೆಗೊಂಡ ಅಭ್ಯರ್ಥಿಯು ಕೇಂದ್ರ ಸ್ಥಾನದಲ್ಲಿಯೇ ವಾಸವಾಗಿರಬೇಕು.
4) ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ.
5) ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ಮುಂದೆ ತಿಳಿಸಲಾಗುವುದು.
6) ಹುದ್ದೆಗಳನ್ನು ಭರ್ತಿ ಮಾಡುವ ಅಧಿಕಾರವು ಆಯ್ಕೆ ಸಮಿತಿಯ ವಿವೇಚನೆಗೆ ಒಳಪಟ್ಟಿರುತ್ತದೆ.

ಸಹಿ/– (ಕೆ.ಎಸ್.ವಿಜಯ್ ಆನಂದ್) ಅಧ್ಯಕ್ಷರು, ಆಡಳಿತ ನಿರ್ವಹಣಾ ಮಂಡಳಿ

ಸಹಿ/– (ಡಾ: ಆರ್.ಎಂ.ಮಹಾಲಿಂಗೇಗೌಡ) ಪ್ರಾಂಶುಪಾಲರು

ಮಂತ್ರಿ ಮಾಲ್‌ಗೆ ಬಿಬಿಎಂಪಿ ಬೀಗ

ಅಧಿಕಾರಿಗಳ ಕಾರ್ಯಾಚರಣೆ ಬಳಿಕ ₹ 5 ಕೋಟಿ ಬಾಕಿ ತೆರಿಗೆ ಪಾವತಿಸಿದ ಕಟ್ಟಡ ಮಾಲೀಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆಯ ಹಳೆ ಬಾಕಿ ಪಾವತಿಸದ ಸಂಪಿಗೆ ರಸ್ತೆಯ ಮಂತ್ರಿ ಮಾಲ್‌ಗೆ (ಅಭಿಷೇಕ್ ಡೆವಲಪರ್ಸ್) ಬಿಬಿಎಂಪಿ ಅಧಿಕಾರಿಗಳು ಗುರುವಾರ ಬೆಳಿಗ್ಗೆ ಬೀಗ ಹಾಕಿದರು. ಪಾಲಿಕೆಯ ಪಶ್ಚಿಮ ವಲಯದ ಜಂಟಿ ಆಯುಕ್ತ ಶಿವಸ್ವಾಮಿ ನೇತೃತ್ವದ ಅಧಿಕಾರಿಗಳ ತಂಡವು ಮಾಲ್‌ನ ವಹಿವಾಟುಗಳನ್ನು ಸುಮಾರು ಒಂದು ಗಂಟೆ ಬಂದ್ ಮಾಡಿಸಿದ ಬಳಿಕ ಕಟ್ಟಡ ಮಾಲೀಕರು ₹ 5 ಕೋಟಿ ಮೊತ್ತದ ಡಿ.ಡಿ.ಯನ್ನು ಪಾಲಿಕೆಗೆ ಪಾವತಿಸಿದರು.

ಬೀಗ ಹಾಕಿದ್ದ ಸಂದರ್ಭದಲ್ಲಿ ಮಾಲ್‌ಗೆ ಬಂದ ಗ್ರಾಹಕರನ್ನು ಮಾರ್ಷಲ್‌ಗಳು ಹಿಂದಕ್ಕೆ ಕಳುಹಿಸಿದರು. ಕಟ್ಟಡ ಮಾಲೀಕರು ಡಿ.ಡಿ ನೀಡಿದ ಬಳಿಕವಷ್ಟೇ ಮಾಲ್‌ನಲ್ಲಿದ್ದ ಮಳಿಗೆಗಳು ವಹಿವಾಟು ನಡೆಸಲು ಬಿಬಿಎಂಪಿ ಅಧಿಕಾರಿಗಳು ಅವಕಾಶ ಮಾಡಿಕೊಟ್ಟರು.

ಯಾವ ವರ್ಷ ಎಷ್ಟು ತೆರಿಗೆ ಬಾಕಿ? (₹ ಕೋಟಿಗಳಲ್ಲಿ)

ವರ್ಷ	ಆಸ್ತಿ ತೆರಿಗೆ ಮೊತ್ತ	ಬಡ್ಡಿ	ಒಟ್ಟು ಮೊತ್ತ
2018-19	6.78	5.69	12.47
2019-20	6.78	4.07	10.84
2020-21	6.78	2.44	9.22
2021-22	6.89	0.069	6.95

'ಆಸ್ತಿ ತೆರಿಗೆಯ ಹಳೆ ಬಾಕಿ ಪಾವತಿಸುವಂತೆ ಮಂತ್ರಿ ಮಾಲ್‌ನ ಮಾಲೀಕರಿಗೆ ಅನೇಕ ಬಾರಿ ನೋಟಿಸ್ ಜಾರಿಮಾಡಿದ್ದೆವು. ಕಳೆದ ಸಾಲಿನಲ್ಲೂ ಮಾಲ್‌ನ ವಹಿವಾಟು ಸ್ಥಗಿತಗೊಳಿಸಿದ್ದೆವು. ಆಗ ಮಾಲೀಕರು ಕೋವಿಡ್ ಕಾರಣ ನೀಡಿ ಕಾಲಾವಕಾಶ ಕೇಳಿದ್ದರು. ನಮ್ಮ ನೋಟಿಸ್‌ಗಳಿಗೆ ಮಾಲ್‌ನ ಮಾಲೀಕರು ಸ್ಪಂದಿಸದ ಕಾರಣ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹಾಗೂ ವಿಶೇಷ ಆಯುಕ್ತ (ಕಂದಾಯ) ಎಸ್.ಬಸವರಾಜು ನಿರ್ದೇಶನದಂತೆ ಬಾಕಿ ತೆರಿಗೆ ವಸೂಲಿಗೆ ಕ್ರಮ ಕೈಗೊಂಡಿದ್ದೇವೆ' ಎಂದು ಪಶ್ಚಿಮ ವಲಯದ ಜಂಟಿ ಆಯುಕ್ತ ಶಿವಸ್ವಾಮಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸಂಪಿಗೆ ರಸ್ತೆ ಬಳಿಯ ಮಂತ್ರಿ ಮಾಲ್ ಕಟ್ಟಡಕ್ಕೆ ಆಸ್ತಿ ತೆರಿಗೆ ಬಾಕಿ ವಸೂಲಿಗಾಗಿ ಗುರುವಾರ ಭೇಟಿ ನೀಡಿದ ಬಿಬಿಎಂಪಿ ಪಶ್ಚಿಮ ವಲಯದ ಜಂಟಿ ಆಯುಕ್ತ ಶಿವಸ್ವಾಮಿ (ಎಡದಿಂದ ನಾಲ್ಕನೆಯವರು) ನೇತೃತ್ವದ ಅಧಿಕಾರಿಗಳ ತಂಡ

ಮಂತ್ರಿ ಮಾಲ್ 2018-19ರಿಂದ ಈ ಸಾಲಿನವರೆಗೆ ₹ 39.49 ಕೋಟಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದೆ. ಇದರಲ್ಲಿ ಆಸ್ತಿ ತೆರಿಗೆಯ ಮೊತ್ತ ₹ 27.22 ಕೋಟಿ. ಒಟ್ಟು ಬಾಕಿ ಮೊತ್ತದಲ್ಲಿ ₹ 400ರಂತೆ ದಂಡನಾ ಶುಲ್ಕ ಹಾಗೂ ₹ 28,800 ಕಸ ವಿಲೇವಾರಿ ಸೆಸ್ ಮತ್ತು ₹ 12.26 ಕೋಟಿ ಬಡ್ಡಿ ಕೂಡಾ ಸೇರಿದೆ. ಮಾಲೀಕರು ₹ 5 ಕೋಟಿ ಪಾವತಿಸಿದ್ದು, ಇನ್ನೂ ₹ 34.49 ಕೋಟಿ ಪಾವತಿಸಬೇಕಿದೆ. ಬಾಕಿ ಮೊತ್ತವನ್ನು ಅ.31ರ ಒಳಗೆ ಪಾವತಿಸುವುದಾಗಿ ಕಟ್ಟಡದ ಮಾಲೀಕರು ಲಿಖಿತ ಭರವಸೆ ನೀಡಿದ್ದಾರೆ ಎಂದು ಬಿಬಿಎಂಪಿ ತಿಳಿಸಿದೆ.

2018–19ನೇ ಸಾಲಿನಲ್ಲಿ ₹ 10.43 ಕೋಟಿ ಆಸ್ತಿ ತೆರಿಗೆ ಪಾವತಿಗಾಗಿ ಕಟ್ಟಡದ ಮಾಲೀಕರು ಚೆಕ್ ನೀಡಿದ್ದರು. ಅವರ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದ ಕಾರಣ ಚೆಕ್ ಅಮಾನ್ಯಗೊಂಡಿತ್ತು. ಈ ಸಂಬಂಧ ಬಿಬಿಎಂಪಿಯು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದೆ.

ನಟಿ ಸೌಜನ್ಯಾ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು ದಕ್ಷಿಣ ತಾಲ್ಲೂಕಿನ ದೊಡ್ಡಬೆಲೆ ಗ್ರಾಮದ ಅಪಾರ್ಟ್‌ಮೆಂಟ್‌ವೊಂದರಲ್ಲಿ ಕಿರುತೆರೆ ನಟಿ ಸೌಜನ್ಯಾ (ಸವಿ ಮಾದಪ್ಪ) (25) ನೇಣು ಬಿಗಿದುಕೊಂಡು ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸೌಜನ್ಯಾ

ಸ್ಥಳದಲ್ಲಿ ಪೊಲೀಸರಿಗೆ ನಾಲ್ಕು ಪುಟಗಳ ಡೆತ್‌ನೋಟ್ ದೊರೆತಿದೆ. 'ನನ್ನ ಸಾವಿಗೆ ನಾನೇ ಕಾರಣ. ಇತ್ತೀಚೆಗೆ ನನ್ನ ಮಾನಸಿಕ ಆರೋಗ್ಯ ಸರಿಯಿಲ್ಲ. ಆರೋಗ್ಯ ಸಹ ಕೈ ಕೊಟ್ಟಿದೆ. ವೈಯಕ್ತಿಕ ಕಾರಣಗಳಿಗೆ ಮನನೊಂದು ಈ ನಿರ್ಧಾರಕ್ಕೆ ಬಂದಿದ್ದೇನೆ' ಎಂದು ಮರಣ ಪತ್ರ ಬರೆದಿರುವ ಸೌಜನ್ಯಾ, ಇದಕ್ಕಾಗಿ ಹೆತ್ತವರ ಕ್ಷಮೆ ಕೇಳಿದ್ದಾರೆ.

ಇತ್ತೀಚೆಗೆ ಇನ್‌ಸ್ಟಾಗ್ರಾಂನಲ್ಲಿ ಪುಟ್ಟ ಬರಹವೊಂದನ್ನು ಪೋಸ್ಟ್ ಮಾಡಿದ್ದ ಸೌಜನ್ಯಾ, ನಿಮ್ಮ ಜೀವನದ ಬಗ್ಗೆ ಹಾಗೂ ಗುರಿ ಬಗ್ಗೆ ಹೆಚ್ಚು ಗಮನ ಕೇಂದ್ರೀಕರಿಸಿದರೆ ನೀವು ನಿಮ್ಮ ಜೀವನದಲ್ಲಿ ಸಾಕಷ್ಟು ಜನರನ್ನು ಕಳೆದುಕೊಳ್ಳಬೇಕಾಗುತ್ತದೆ' ಎಂದು ಅವರು ಬರೆದುಕೊಂಡಿದ್ದರು.

'ಯಾರನ್ನೂ ಕೀಳಾಗಿ ಕಾಣಬೇಡಿ. ನಗುತ್ತಾ ಇರುವ ವ್ಯಕ್ತಿಗಳ ಹಿಂದೆಯೂ ಸಾಕಷ್ಟು ನೋವಿರುತ್ತದೆ, ಆ ಬಗ್ಗೆ ಯಾರಿಗೂ ಗೊತ್ತಿರುವುದಿಲ್ಲ' ಎಂದು ಅವರು ಇನ್ನೊಂದು ಪೋಸ್ಟ್‌ನಲ್ಲಿ ಬರೆದಿದ್ದರು. 'happiness, sadness ' ಹ್ಯಾಶ್ ಟ್ಯಾಗ್ ಹಾಕಿ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿ, ಗೆಳೆಯರು ಹಾಗೂ ಸಹೋದರರ ಫೋಟೋ ಹಾಕಿ ಅವರಿಗೆ ಧನ್ಯವಾದ ಹೇಳಿದ್ದರು. ಇದಾದ ಬೆನ್ನಲ್ಲೇ ಅವರು ಆತ್ಮಹತ್ಯೆಗೆ ಶರಣಾಗಿದ್ದಾರೆ.

'ಈ ಯುವತಿ ಕಳೆದ ಒಂದೂವರೆ ವರ್ಷದಿಂದ ಅಪಾರ್ಟ್‌ಮೆಂಟ್‌ನಲ್ಲಿ ಒಬ್ಬರೇ ವಾಸವಿದ್ದರು. ಮೇಲ್ನೋಟಕ್ಕೆ ಆತ್ಮಹತ್ಯೆ ಎಂದು ಕಂಡುಬಂದಿದ್ದು, ನಾನಾ ಆಯಾಮಗಳ ಕುರಿತು ತನಿಖೆ ನಡೆಸುತ್ತಿದ್ದೇವೆ' ರಾಮನಗರ ಎಸ್ಪಿ ಗಿರೀಶ್ ತಿಳಿಸಿದರು.

ತಂದೆಯಿಂದ ದೂರು

ರಾಮನಗರ: ಮಗಳ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ ನಟಿ ಸೌಜನ್ಯಾ ಅಲಿಯಾಸ್ ಸವಿ ಮಾದಪ್ಪರ ತಂದೆ ಪ್ರಭು ಮಾದಪ್ಪ ಕುಂಬಳಗೋಡು ಠಾಣೆ ಪೊಲೀಸರಿಗೆ ಗುರುವಾರ ರಾತ್ರಿ ದೂರು ನೀಡಿದರು.

ಸೌಜನ್ಯಾ ಆಪ್ತ ಸಹಾಯಕ ಹಾಗೂ ನಟನೊಬ್ಬನ ವಿರುದ್ಧ ಅವರು ದೂರು ನೀಡಿದ್ದು, ಕೊಲೆಯ ಶಂಕೆ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭ ಮಾಧ್ಯಮದವರ ಜೊತೆ ಮಾತನಾಡಿದ ಪ್ರಭು ಮಾದಪ್ಪ 'ಮಗಳು ಕಳೆದ ಐದು ವರ್ಷದಿಂದ ಬೆಂಗಳೂರಿನಲ್ಲಿದ್ದು, ಎರಡು ವರ್ಷದಿಂದ ಈ ಅಪಾರ್ಟ್‌ಮೆಂಟ್‌ನಲ್ಲಿ ಒಬ್ಬಳೇ ಇದ್ದಳು. ಕೆಲ ಕಾಲ ಗಗನಸಖಿಯಾಗಿಯೂ ಕೆಲಸ ಮಾಡಿದ್ದಳು. ಚೌಕಟ್ಟು, ಫನ್, ಅರ್ಜುನ್ ಗೌಡ ಚಿತ್ರಗಳಲ್ಲಿ ಆಕೆ ನಟಿಸಿದ್ದಳು. ನನ್ನ ಮಗಳು ಆತ್ಮಹತ್ಯೆ ಮಾಡಿಕೊಳ್ಳುವಂಥ ಹೇಡಿ ಅಲ್ಲ. ಬುಧವಾರ ಸಂಜೆ ಕರೆ ಮಾಡಿ ಎರಡು ದಿನದಲ್ಲಿ ಕೊಡಗಿಗೆ ಬರುವುದಾಗಿ ತಿಳಿಸಿದ್ದಳು. ಯಾರೋ ಕಿರುಕುಳ ನೀಡಿ ಅವಳ ಸಾವಿಗೆ ಕಾರಣರಾಗಿದ್ದಾರೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

ಕುಶಾಲನಗರ ತಾಲ್ಲೂಕಿನ ಶುಂಠಿಕೊಪ್ಪದ ಅಂದಗೋವೆ ಗ್ರಾಮದಲ್ಲಿ ಶುಕ್ರವಾರ ಅಂತ್ಯಕ್ರಿಯೆ ನಡೆಸುವುದಾಗಿ ಅವರು ತಿಳಿಸಿದರು.

ಹಿಂದೆಯೇ ಸಿದ್ಧವಾಗಿತ್ತ ಡೆತ್‌ನೋಟ್: ಸೌಜನ್ಯಾ ಬಳಿ ದೊರಕಿದ ಡೆತ್‌ನೋಟ್ ಮೂರ್ನಾಲ್ಕು ದಿನದ ಹಿಂದೆಯೇ ಬರೆದಿದ್ದು ಎನ್ನಲಾಗಿದ್ದು, ಇದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ರಾಜ್ಯ ಒಕ್ಕಲಿಗರ ಸಂಘದ ಮಾಜಿ ಚೇರ್ಮನ್, ಮಾಜಿ ಅಧ್ಯಕ್ಷನ ವಿರುದ್ಧ ಎಫ್‌ಐಆರ್

ವಿದ್ಯಾರ್ಥಿನಿ ಪಾವತಿಸಿದ್ದ ₹ 70 ಲಕ್ಷ ಸ್ವಂತಕ್ಕೆ ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯದ (ಕಿಮ್ಸ್) ವಿದ್ಯಾರ್ಥಿನಿಯೊಬ್ಬರು ಪಾವತಿಸಿದ್ದ ₹ 70 ಲಕ್ಷ ಶುಲ್ಕವನ್ನು ಸ್ವಂತಕ್ಕೆ ಬಳಸಿದ್ದ ಆರೋಪದಡಿ ರಾಜ್ಯ ಒಕ್ಕಲಿಗರ ಸಂಘದ ಮಾಜಿ ಚೇರ್ಮನ್ ಹಾಗೂ ಅಧ್ಯಕ್ಷನ ವಿರುದ್ಧ ವಿ.ವಿ.ಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಡಾ. ಸಿ.ಸಿದ್ದರಾಮಯ್ಯ ಅವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅದರನ್ವಯ ಸಂಘದ ಮಾಜಿ ಚೇರ್ಮನ್ ಡಿ.ಸಿ.ಕೆ. ಕಾಳೇಗೌಡ, ಮಾಜಿ ಅಧ್ಯಕ್ಷ ಡಾ. ಅಪ್ಪಾಜಿಗೌಡ, ನಿರ್ದೇಶಕ ಜಿ.ಎಲ್. ನರೇಂದ್ರಬಾಬು ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚಾಮರಾಜನಗರದ ಡಾ. ಮರಿ ಅನುಷಾ ದೀಪ್ತಿ ಎಂಬುವರು 2016 ಹಾಗೂ 2017ನೇ ಸಾಲಿನಲ್ಲಿ ಕಿಮ್ಸ್‌ನ ಒಬಿಜಿ (ಪ್ರಸೂತಿ ಮತ್ತು ಸ್ತ್ರೀರೋಗ) ಕೋರ್ಸ್ ವ್ಯಾಸಂಗಕ್ಕೆ ಪ್ರವೇಶ ಪಡೆದಿದ್ದರು. ಆದರೆ, ಶುಲ್ಕವನ್ನು ಪೂರ್ತಿಯಾಗಿ ಪಾವತಿಸಿರಲಿಲ್ಲ. ಹೀಗಾಗಿ, ಅವರಿಗೆ ನೋಟಿಸ್ ನೀಡಲಾಗಿತ್ತು.'

'ನೋಟಿಸ್ ಪಡೆದಿದ್ದ ವಿದ್ಯಾರ್ಥಿನಿ, 2018ರ ಅಕ್ಟೋಬರ್ 26ರಂದು ಬಾಕಿ ಶುಲ್ಕ ₹ 70 ಲಕ್ಷವನ್ನು ಚೇರ್ಮನ್ ಕಾಳೇಗೌಡ ಅವರಿಗೆ ನೀಡಿದ್ದರು. ಉಳಿದ ಆರೋಪಿಗಳ ಪರವಾಗಿ ಕಾಳೇಗೌಡ ಹಣ ಪಡೆದಿದ್ದರು. ನಂತರ, ವಿದ್ಯಾರ್ಥಿನಿಯ ಪ್ರವೇಶ ದಾಖಲಾತಿಯನ್ನು ಅಂಗೀಕರಿಸಿದ್ದರು. ಆದರೆ, ವಿದ್ಯಾರ್ಥಿನಿಯಿಂದ ಪಡೆದಿದ್ದ ₹ 70 ಲಕ್ಷವನ್ನು ಆರೋಪಿಗಳು, ಕಾಲೇಜಿಗೆ ಸಂದಾಯ ಮಾಡಿರಲಿಲ್ಲ. ಎಲ್ಲ ಹಣವನ್ನು ಆರೋಪಿಗಳು ತಮ್ಮ ಸ್ವಂತಕ್ಕೆ ಬಳಸಿಕೊಂಡಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಕ್ರಿಮಿನಲ್ ಪಿತೂರಿ (ಐಪಿಸಿ 120 ಬಿ), ನಂಬಿಕೆ ದ್ರೋಹ (ಐಪಿಸಿ 406), ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟು ಮಾಡಿದ (ಐಪಿಸಿ 427) ಹಾಗೂ ವಂಚನೆ (ಐಪಿಸಿ 420) ಆರೋಪದಡಿ ಎಫ್‌ಐಆರ್ ದಾಖಲಾಗಿದೆ. ದಾಖಲೆಗಳ ಪರಿಶೀಲನೆ ನಡೆಸಿ, ಆರೋಪಿಗಳಿಗೆ ನೋಟಿಸ್ ನೀಡಲಾಗುವುದು. ಅವರ ಹೇಳಿಕೆ ದಾಖಲಿಸಿಕೊಂಡ ಬಳಿಕ ಕಾನೂನು ಕ್ರಮ ಜರುಗಿಸಲಾಗುವುದು' ಎಂದೂ ಹೇಳಿವೆ.

₹60 ಕೋಟಿ ಮೌಲ್ಯದ ಆಸ್ತಿ ವಶ

ಬೆಂಗಳೂರು: ಎಚ್‌ಬಿಆರ್ ಬಡಾವಣೆಯಲ್ಲಿ ಬಿಡಿಎ ಆಸ್ತಿಯಲ್ಲಿ ನಿರ್ಮಾಣವಾಗಿದ್ದ ತಾತ್ಕಾಲಿಕ ಕಟ್ಟಡ ನೆಲಸಮಗೊಳಿಸಿ ₹60 ಕೋಟಿ ಮೌಲ್ಯದ ಆಸ್ತಿಯನ್ನು ಬಿಡಿಎ ವಶಕ್ಕೆ ಪಡೆದಿದೆ.

ಕಾರ್ಯಪಾಲಕ ಎಂಜಿನಿಯರ್ ಕುಮಾರ್ ನೇತೃತ್ವದಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು, ಕಾಚರಕನಹಳ್ಳಿಯಲ್ಲಿ 1 ಎಕರೆ 23 ಗುಂಟೆ ಜಮೀನು ಸ್ವಾಧೀನಕ್ಕೆ ಪಡೆದಿದ್ದಾರೆ.

ಬಿಡಿಎ ಬಡಾವಣೆ ನಿರ್ಮಾಣ ಮಾಡಲು 1978ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, 1985ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಭೂಮಾಲೀಕರು ಬಿಡಿಎ ವಿರುದ್ಧ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದರು. ಹೈಕೋರ್ಟ್ ಬಿಡಿಎ ಪರ ತೀರ್ಪು ನೀಡಿತ್ತು. ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಮೇಲ್ಮನವಿ ಕೂಡ ತಿರಸ್ಕಾರಗೊಂಡಿತ್ತು. ಆದರೂ, ಅನಧಿಕೃತ ತಾತ್ಕಾಲಿಕ ಕಟ್ಟಡಗಳು ತಲೆ ಎತ್ತಿದ್ದವು ಎಂದು ಬಿಡಿಎ ತಿಳಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

Sri Krishna International Education Trust ®
SRI KRISHNA DEGREE COLLEGE
Affiliated to Bengaluru City University
#2(p), ITI Layout, BSK 3rd Stage, Bengaluru – 560 085
Tel 080- 26796020/26795644 www.skdc.edu.in

FACULTY RECRUITMENT

Applications are invited for the post of **Assistant Professors**, in the following Departments.

Commerce | Management | Computer Science | English

Qualification PG with Ph.D. / SET / NET with a minimum of 60% Marks in PG course

Experience Minimum 5 years

Office Assistant 3 Years of Experience in Educational Institution and must have good communication skills in English and Kannada

Interested and eligible candidates may send their resume along with the copies of relevant certificates to
skies.skc@gmail.com / principal.skdc2018@gmail.com

Multiple Vacancy

OPPORTUNITY FOR Retd Officials,Bankers, VRS,NRI,Teachers, Professionals, CAs. Earn Salary+Incentives. Call: 8095301555

Accounts & Finance

APPLICATIONS ARE invited from Experienced Accountants /Retired Bankers worked as Manager/ Senior Manager in Accounts department having knowledge in Accounting/ GST/ TDS/ PF etc., The detailed resumed may be forwarded within 15 days to ngreddygroup@gmail.com, Mob No: 9845948122

Call Centre

REQUIRED FOR US Based Furniture Industry, Work From Home, American/ Neutral Accent & US Telesales/ US Outbound Experience Must, Sal 50- 80k Call: 9766018123

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

FULFILL YOUR dreams/ desires with a Corporate which looks for NRIs,Ex-Bankers, State/Central VRS,Unemployed Teachers Educated Housewives with flexible timings.Benefits: Fixed salary,flexible timings, PF+ESI, Unlimited Incentives.Call:8660526113.

Wanted

WANTED BUSINESS DEVELOPMENT MANAGER, Earn more than 1,00,000/ month, Part-time/ Full-time/ Freshers/ Retired. 8660955348

REAL ESTATE SELLING

Commerical

Out-Station

3.	ಟೆಂಡರ್ ಅನ್ನು ತೆರೆಯುವ ದಿನಾಂಕ ಮತ್ತು ಕಾಲ	08–10–2021	ಸಂಜೆ 5.00 ಗಂಟೆಯ ನಂತರ

ಸಹಿ/–ಕಾರ್ಯಪಾಲಕ ಅಭಿಯಂತರರು (ಪಶ್ಚಿಮ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/KAVITA/565/2021-22

ಕರ್ನಾಟಕ ಗ್ರಾಮೀಣ ಬ್ಯಾಂಕ್
(ಭಾರತ ಸರ್ಕಾರದಿಂದ ಸ್ಥಾಪಿತ ಷೆಡ್ಯೂಲ್ಡ್ ಬ್ಯಾಂಕ್; ಪ್ರವರ್ತಕರು: ಕೆನರಾ ಬ್ಯಾಂಕ್)
ಪ್ರಧಾನ ಕಛೇರಿ, ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ – 583 104

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ದಿನಾಂಕ 15.12.2021 ರಿಂದ ಅನ್ವಯವಾಗುವಂತೆ, ಕೆಲವು ಆಡಳಿತಾತ್ಮಕ ಕಾರಣಗಳಿಂದಾಗಿ ಬ್ಯಾಂಕಿನ ಈ ಕೆಳಕಂಡ ಶಾಖೆಗಳನ್ನು ಹತ್ತಿರವಿರುವ ಶಾಖೆಗಳಿಗೆ ವಿಲೀನಗೊಳಿಸಲು ನಿರ್ಧರಿಸಲಾಗಿದೆ.

ಕ್ರ ಸಂ	ಮುಕ್ತಾಯಗೊಳ್ಳುವ ಶಾಖೆಯ ಹೆಸರು	ಮುಕ್ತಾಯಗೊಳ್ಳುವ ಶಾಖೆಯ IFSC CODE	ಜಿಲ್ಲೆ	ವಿಲೀನಮಾಡಿಕೊಳ್ಳುತ್ತಿರುವ ಶಾಖೆಯ ಹೆಸರು	ವಿಲೀನಮಾಡಿಕೊಳ್ಳುತ್ತಿರುವ ಶಾಖೆಯ IFSC CODE
1	APMC ಯಾರ್ಡ್ ಶಾಖೆ, ಬಳ್ಳಾರಿ	PKGB0010976	ಬಳ್ಳಾರಿ	ಮೋತಿ ಸರ್ಕಲ್ ಶಾಖೆ, ಬಳ್ಳಾರಿ	PKGB0010878
2	ಮೇಲೆಕೋಟೆ ರಸ್ತೆ ಶಾಖೆ, ತುಮಕೂರು	PKGB0012485	ತುಮಕೂರು	ಚಿಕ್ಕಪೇಟೆ ಶಾಖೆ, ತುಮಕೂರು	PKGB0012344
3	ದೊಡ್ಡಪೇಟೆ ಶಾಖೆ, ಚಿತ್ರದುರ್ಗ	PKGB0010978	ಚಿತ್ರದುರ್ಗ	ಕೋರ್ಟ್ ಕಾಂಪ್ಲೆಕ್ಸ ಶಾಖೆ, ಚಿತ್ರದುರ್ಗ	PKGB0010885
4	ವಿಜಯಪುರ ಶಾಖೆ, ಚಿಕ್ಕಮಗಳೂರು	PKGB0012343	ಚಿಕ್ಕಮಗಳೂರು	ಚಿಕ್ಕಮಗಳೂರು ಮುಖ್ಯ ಶಾಖೆ, ಚಿಕ್ಕಮಗಳೂರು	PKGB0012247
5	ರಾಮಮೂರ್ತಿನಗರ ಶಾಖೆ, ಬೆಂಗಳೂರು	PKGB0012521	ಬೆಂಗಳೂರು	ಕಲ್ಯಾಣನಗರ ಶಾಖೆ, ಬೆಂಗಳೂರು	PKGB0012464
6	ಅನಂತಪುರ ಶಾಖೆ, ಬೆಂಗಳೂರು	PKGB0012516	ಬೆಂಗಳೂರು	ಯಲಹಂಕ 4ನೇ ಹಂತ ಶಾಖೆ, ಬೆಂಗಳೂರು	PKGB0012536
7	ಶಹಪುರ ರಸ್ತೆ ಶಾಖೆ, ಜೇವರ್ಗಿ	PKGB0011199	ಕಲಬುರ್ಗಿ	ಜೇವರ್ಗಿ ಶಾಖೆ, ಜೇವರ್ಗಿ	PKGB0011022
8	ದರ್ಜಿಗಲ್ಲಿ ಶಾಖೆ, ಬೀದರ್	PKGB0011178	ಬೀದರ್	ಚೌಬಾರಾ ಶಾಖೆ, ಬೀದರ್	PKGB0011189
9	ಮೈಲೂರ ರಸ್ತೆ ಶಾಖೆ, ಬೀದರ್	PKGB0010986	ಬೀದರ್	ಗುಂಪಾ ಶಾಖೆ, ಬೀದರ್	PKGB0011161
10	ಭಿದ್ರಿ ರಸ್ತೆ ಶಾಖೆ, ಬೀದರ್	PKGB0011137	ಬೀದರ್	ಬೀದರ್ ಮುಖ್ಯ ಶಾಖೆ, ಬೀದರ್	PKGB0011087
11	ಲಾಲ್‌ಬಹದ್ದೂರಶಾಸ್ತ್ರಿನಗರ ಶಾಖೆ, ಮೈಸೂರು	PKGB0012513	ಮೈಸೂರು	ಆಲನಹಳ್ಳಿ ಶಾಖೆ, ಮೈಸೂರು	PKGB0012245
12	ಸರಸ್ವತಿಪುರಂ ಶಾಖೆ, ಮೈಸೂರು	PKGB0012491	ಮೈಸೂರು	ತೊಣಚಿಕೊಪ್ಪಲು ಲೇಔಟ್ ಶಾಖೆ, ಮೈಸೂರು	PKGB0012130
13	ಶಾರದಾದೇವಿ ನಗರ ಶಾಖೆ, ಮೈಸೂರು	PKGB0012438	ಮೈಸೂರು	ತೊಣಚಿಕೊಪ್ಪಲು ಲೇಔಟ್ ಶಾಖೆ, ಮೈಸೂರು	PKGB0012130
14	ರಾಜೀವನಗರ ಶಾಖೆ, ಮೈಸೂರು	PKGB0012446	ಮೈಸೂರು	ಗಾಯತ್ರಿಪುರಂ ಶಾಖೆ, ಮೈಸೂರು	PKGB0012511
15	ವಿವಿ ಮೊಹಲ್ಲಾ ಶಾಖೆ, ಮೈಸೂರು	PKGB0012500	ಮೈಸೂರು	ಹಿನಕಲ್ ಶಾಖೆ, ಮೈಸೂರು	PKGB0012050
16	ಗಾಂಧಿನಗರ ಶಾಖೆ, ಸಾಗರ	PKGB0010995	ಶಿವಮೊಗ್ಗ	ಸಾಗರ ಶಾಖೆ, ಸಾಗರ	PKGB0010791

ಮುಕ್ತಾಯವಾಗುವ ಶಾಖೆಯ ಗ್ರಾಹಕರು ಎಂದಿನಂತೆಯೇ ಎಲ್ಲಾ ತರಹದ ಬ್ಯಾಂಕಿನ ಸೇವೆಗಳನ್ನು, ವಿಲೀನಮಾಡಿಕೊಳ್ಳುತ್ತಿರುವ ಶಾಖೆಗಳಲ್ಲಿ ಮೇಲ್ಕಂಡ ದಿನಾಂಕದ ನಂತರ ಪಡೆಯಬಹುದು. ಬ್ಯಾಂಕಿನ ಸೇವೆಯಲ್ಲಿ ಯಾವುದೇ ತೊಂದರೆಯಾಗುವುದಿಲ್ಲ ಮತ್ತು ಖಾತೆ ಸಂಖ್ಯೆಗಳಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲವೆಂದು ತಮ್ಮ ಗಮನಕ್ಕೆ ತರಬಯಸುತ್ತೇವೆ. ತಾಂತ್ರಿಕವಾದ ಅತ್ಯುತ್ತಮ ಸೇವೆಯು ಮುಂದುವರಿಯುವುದೆಂದು ಭರವಸೆ ನೀಡುತ್ತೇವೆ.
ದಿನಾಂಕ: 30.09.2021
ಸ್ಥಳ : ಬಳ್ಳಾರಿ
ಮಹಾಪ್ರಬಂಧಕರು ಎಸ್‌ಪಿ ಮತ್ತು ಡಿ ವಿಭಾಗ

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ.
ಸಂಖ್ಯೆ: ಉಗ್ರಾಣ/71/2021–22 ದಿನಾಂಕ: 28.09.2021

ಇ–ಪ್ರಕ್ಯೂರಮೆಂಟ್ ಟೆಂಡರ್ ಅಧಿಸೂಚನೆ

2021–22ನೇ ನೇ ಸಾಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಅಡಿಯಲ್ಲಿ ಕುಷ್ಟಗಿ ಹಾಗೂ ಕುಕನೂರ ತಾಲೂಕಿನ ಸ.ಆ.ಕೇಂದ್ರ ಕುಕನೂರ ಹಾಗೂ ಪ್ರಾ.ಆ.ಕೇಂದ್ರ ಹೂಲಗೇರಾಕ್ಕೆ ವೈದ್ಯಕೀಯ ಉಪಕರಣಗಳು ಮಂಜೂರಾಗಿದ್ದು, ಸರಬರಾಜು ಮಾಡಲು ಇ–ಪ್ರಕ್ಯೂರಮೆಂಟ್ ಟೆಂಡರ್ ಕರೆಯಲಾಗಿದೆ.
1)ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಅವಧಿ : 16.10.2021 ರಂದು ಸಾಯಂಕಾಲ 5–00 ಗಂಟೆಯೊಳಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18.10.2021 ರಂದು ಬೆಳಿಗ್ಗೆ 11–00 ಗಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 21.10.2021 ರಂದು ಬೆಳಿಗ್ಗೆ 11–00 ಗಂಟೆಗೆ. E-Mail:dhokoppal@gmail.com
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಅಧಿಕಾರಿಗಳು ಕೊಪ್ಪಳ.
ಡಿಐಪಿಆರ್/ಕೊಪ್ಪಳ/297/ಎಂಸಿಎ/2021–22

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕಇಂಜನೀಯರ(ವಿ), ರವರಕಛೇರಿ,
ರಿ.ಸ.ನಂ : 85ಬ, ಐ.ಇ.ಓ/ ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರಿಆಫೀಸ್ ಹತ್ತಿರ, ಹಂಚಿನಾಳ ಲೇಔಟ್, ಪೂ.ಬೆಂ. ರಸ್ತೆ, ಹಾವೇರಿ – 581110.
TelephoneNo.: 08375-232632 Web Site: www.hescom.co.in
Fax No: : 08375-232625
Corporate Identity Number (CIN) : U31401KA2002SGC030437
No.HESCOM/HVR/SEE/EEE(O)/AEE(O)/AET-1/21-22/2780 Date:29.09.2021

ಅಲ್ಪಾವಧಿಟೆಂಡರ್ ಪ್ರಕಟಣೆ
ಇ–ಪ್ರೊಕ್ಯುರ್‌ಮೆಂಟ್‌ಮುಖಾಂತರ

ಅಧೀಕ್ಷಕ ಇಂಜಿನಿಯರ್(ವಿ), ಕಾ&ಪಾ ವೃತ್ತ, ಹೆಸ್ಕಾಂ, ಹಾವೇರಿರವರು "ಹಾವೇರಿ ವೃತ್ತದ ವ್ಯಾಪ್ತಿಯಲ್ಲಿ ವಿವಿಧ ಸೇವೆ ಟೆಂಡರ್‌ಗಳನ್ನು ಬಿಡ್‌ಇಂಡೆಂಟ್ ಸಂಖ್ಯೆ: 1.Light Goods transportation vehicle for Transportation of Transformers:- Ident no: HESCOM/SEE/HVR/2021-22/TRF_Vhcl/HVR,RNR ಮುಖಾಂತರ ಆಹ್ವಾನಿಸಿರುತ್ತಾರೆ. ಸದರಿ ಪ್ರಕ್ರಿಯೆಗೆ ದಿನಾಂಕ:11.10.2021ರ16.00 ಘಂಟೆಯೊಳಗೆ ಬಿಡ್‌ಗಳನ್ನು ಇ–ಪ್ರೋಕ್ಯುರ್‌ಮೆಂಟ್ ಮೂಲಕ ಸ್ವೀಕರಿಸಲಾಗುತ್ತದೆ.ಟೆಂಡರ್‌ಡಾಕ್ಯುಮೆಂಟ್ ಗಳನ್ನು www.eproc.karnataka.gov.inನಲ್ಲಿ ಪಡೆಯಬಹುದಾಗಿದೆ.
ಸಹಿ/–ಅಧೀಕ್ಷಕಇಂಜನೀಯರ(ವಿ), ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹಾವೇರಿ.
ವಾ.ಸಾ.ಇ/ಧಾ/558/2021–22/ದೇಶಪಾಂಡೆಪಬ್ಲಿಸಿಟಿ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು (ಪೂರ್ವ)ವಿಭಾಗ, ಸಯ್ಯಾಜಿರಾವ್ ರಸ್ತೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು–570024. ದೂರವಾಣಿ: 9740029156 ಇಮೇಲ್: eewmccmys@gmail.com
ಸಂಖ್ಯೆ:ಮೈನಪಾ/ಕಾ.ಇಂ/ಟಿ.ಎನ್–51/2021–22 ದಿನಾಂಕ:29.09.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರ ಪಾಲಿಕೆ ಅನುದಾನದಲ್ಲಿ ನಗರ ಪಾಲಿಕೆಯು ಆರೋಗ್ಯ ಶಾಖೆಗೆ ಅವಶ್ಯವಿರುವ ಔಷಧಿ ಮತ್ತು ಉಪಕರಣ ಸಾಮಾಗ್ರಿಗಳನ್ನು ಸರಬರಾಜು ಮಾಡುವುದು ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ "E-procurement" Portal ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇ.ಎಂ.ಡಿ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: 29.09.2021 ರ ನಂತರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್‌ನಲ್ಲಿ https://eproc.karnataka.gov.in ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ 07.10.2021 ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ: 08.10.2021 ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು(ಪೂ) ಕಛೇರಿಯಿಂದ ಪಡೆಯಬಹುದಾಗಿದೆ.
ಸಹಿ/–ಕಾರ್ಯಪಾಲಕ ಅಭಿಯಂತರರು(ಪೂ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಸಹಿ/–ಉಪ ಆಯುಕ್ತರು (ಅಭಿವೃದ್ಧಿ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/KC/568/2021-22

ಮೈಸೂರು ಅರಮನೆಯ ಹೊರ ಆವರಣದಲ್ಲಿ ಗುರುವಾರ ನಡೆದ ಕುಶಾಲತೋಪು ಸಿಡಿಸುವ ತಾಲೀಮಿನಲ್ಲಿ ನಗರ ಸಶಸ್ತ್ರ ಮೀಸಲು ಪಡೆಯ ಸಿಬ್ಬಂದಿಯೊಬ್ಬರು ಬೆಂಕಿ ಇಟ್ಟ ಕೂಡಲೇ ಫಿರಂಗಿ ನಳಿಕೆಯಿಂದ ಬೃಹತ್ ಗಾತ್ರದ ಬೆಂಕಿಯುಂಡೆ ಸಿಡಿಯಿತು

ಫಿರಂಗಿ ಸದ್ದಿಗೆ ಬೆಚ್ಚದ ಅಭಿಮನ್ಯು!

ಮೈಸೂರು: ಫಿರಂಗಿಯ ನಳಿಕೆಯಿಂದ ಕಿವಿಗಡಚಿಕ್ಕುವ ಶಬ್ದದೊಂದಿಗೆ ಬೆಂಕಿಯುಗುಳುತ್ತಾ ಕುಶಾಲತೋಪು ಸಿಡಿಯುತ್ತಿದ್ದಂತೆ, ಅಂಬಾರಿ ಹೊರಲಿರುವ ಅಭಿಮನ್ಯು ಆನೆ ಹಾಗೂ ಅದಕ್ಕೆ ಸಾಥ್ ನೀಡಲಿರುವ ಧನಂಜಯ, ವಿಕ್ರಮ, ಕಾವೇರಿ, ಚೈತ್ರಾ ಆನೆಗಳು ಕೊಂಚವೂ ಬೆದರಲಿಲ್ಲ. ಬದಲಿಗೆ ರಾಜ-ಗಾಂಭೀರ್ಯದಿಂದ ನಿಂತಲ್ಲೇ ನಿಂತು ದಿಟ್ಟಿಸಿದವು. ಗಜಪಡೆಯ ಮೂರು ಆನೆಗಳು ಮಾತ್ರ ಬೆಚ್ಚಿ ಘೀಳಿಟ್ಟವು. ಕೆಲವು ಕುದುರೆಗಳು ಕೆನೆದವು.

ಜಂಬೂಸವಾರಿಯ ಸಂದರ್ಭದಲ್ಲಿ ಕುಶಾಲತೋಪು ಸಿಡಿಸಿದಾಗ ಆನೆ ಮತ್ತು ಕುದುರೆಗಳು ಬೆದರಬಾರದು ಎಂಬ ಕಾರಣಕ್ಕೆ, ಕುಶಾಲತೋಪು ಸಿಡಿಸುವ ಮೂರು ತಾಲೀಮುಗಳ ಪೈಕಿ ಮೊದಲನೇ ತಾಲೀಮು ಅರಮನೆಯ ಹೊರ ಆವರಣದಲ್ಲಿ ಗುರುವಾರ ನಡೆದಾಗ ಈ ದೃಶ್ಯಗಳು ಕಂಡುಬಂದವು.

ಲಕ್ಷ್ಮೀ ಮತ್ತು ಗೋಪಾಲಸ್ವಾಮಿ ಆನೆಗಳು ತುಸು ಹೆಚ್ಚು ಬೆದರಿ, ಹಿಂದಕ್ಕೆ ತಿರುಗಿ ಅರಮನೆಯತ್ತ ತೆರಳಲು ಹೆಜ್ಜೆ ಇಟ್ಟವು. ಅವುಗಳ ನಡುವೆ ನಿಂತಿದ್ದ ಅಶ್ವತ್ಥಾಮ ಸಹ ಗಲಿಬಿಲಿಗೆ ಒಳಗಾಯಿತು. ಕೂಡಲೇ ಮಾವುತರು ಮತ್ತು ಕಾವಾಡಿಗಳು ಆನೆಗಳನ್ನು ನಿಯಂತ್ರಿಸಿದರು.

21 ಬಾರಿ ಸಿಡಿದ ಕುಶಾಲ-ತೋಪುಗಳಿಂದ ಹೊಮ್ಮಿದ ಬೆಂಕಿ ಉಂಡೆಗಳನ್ನು ಕಂಡು ನೋಡುಗರು ರೋಮಾಂಚಿತರಾದರು. ಮುಂಜಾಗ್ರತೆಯಿಂದ ಎಲ್ಲ ಆನೆಗಳ ಕಾಲಿಗೆ ಸರಪಳಿಗಳನ್ನು ಬಿಗಿದು ಕಟ್ಟಲಾಗಿತ್ತು. ಅಗ್ನಿಶಾಮಕ ವಾಹನ, ಆಂಬುಲೆನ್ಸ್‌ಗಳನ್ನು ಸಜ್ಜುಗೊಳಿಸಲಾಗಿತ್ತು.

ಉಪ ಅರಣ್ಯ ಸಂರಕ್ಷಣಾಧಿಕಾರಿ ವಿ.ಕರಿಕಾಳನ್ ಪ್ರತಿಕ್ರಿಯಿಸಿ, 'ಮೊದಲ ದಿನದ ತಾಲೀಮಿಗೆ ಆನೆಗಳು ತೃಪ್ತಿಕರವಾಗಿ ಸ್ಪಂದಿಸಿವೆ. ಇನ್ನೆರಡು ಬಾರಿ ತಾಲೀಮು ನಡೆಸಿ, ಜಂಬೂಸವಾರಿಗೆ ಅಣಿಗೊಳಿಸಲಾಗುವುದು' ಎಂದರು.

ಅತಂತ್ರ ಪರಿಸ್ಥಿತಿ ನಿರ್ಮಾಣವೇ ಜೆಡಿಎಸ್ ಧ್ಯೇಯ

ಬೆಂಗಳೂರು: 'ರಾಜ್ಯದಲ್ಲಿ ಜೆಡಿಎಸ್ ಸ್ವಂತ ಬಲದ ಮೇಲೆ ಅಧಿಕಾರ ಹಿಡಿಯುವುದು ಕನಸಷ್ಟೇ. ಆ ಪಕ್ಷ ಇಟ್ಟುಕೊಂಡಿರುವ ಗುರಿ ಅವಾಸ್ತವಿಕ ಮತ್ತು ಅಸಾಧ್ಯವಾದುದು. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಸಿಗಬಾರದು. ಅತಂತ್ರ ಪರಿಸ್ಥಿತಿ ನಿರ್ಮಾಣವಾಗುವಂತೆ ಮಾಡಿ, ಇತರ ಪಕ್ಷಗಳು ಸರ್ಕಾರ ರಚನೆಗೆ ತನ್ನನ್ನೇ ಅವಲಂಬಿಸುವಂತೆ ಮಾಡುವುದು ಆ ಪಕ್ಷದ ಉದ್ದೇಶ. ಈ ತಂತ್ರಗಾರಿಕೆಯ ಭಾಗವೇ ಮಿಷನ್–123'....

'ಜೆಡಿಎಸ್: ಮಿಷನ್ 123–ಕಾರ್ಯಸಾಧುವೇ? ವಿಷಯದ ಕುರಿತು ನಡೆದ 'ಪ್ರಜಾವಾಣಿ' ಸಂವಾದದಲ್ಲಿ ಗುರುವಾರ ವ್ಯಕ್ತವಾದ ಅಭಿಪ್ರಾಯವಿದು. 'ಪ್ರಾದೇಶಿಕ ಅಸ್ಮಿತೆಯನ್ನು ಬಲವಾಗಿ ಪ್ರತಿಪಾದಿಸಿದರೆ ಜೆಡಿಎಸ್‌ಗೆ ಅಲ್ಪ ಲಾಭವಾಗಬಹುದು. ಆ ಪಕ್ಷಕ್ಕೆ ದೊಡ್ಡಮಟ್ಟದ ಕಾರ್ಯಕರ್ತರ ಪಡೆಯೇ ಇಲ್ಲ. ನಿರ್ದಿಷ್ಟ ಸಿದ್ಧಾಂತವೂ ಇಲ್ಲ' ಎಂಬ ಅಭಿಪ್ರಾಯವೂ ಬಂದವು.

ಸಂವಾದದ ಪೂರ್ಣ ವೀಕ್ಷಣೆಗೆ: https://bit.ly/3uzl4Bu

'ಬಿಜೆಪಿ, ಕಾಂಗ್ರೆಸ್‌ನವರಿಗೆ ಭಯ ಶುರುವಾಗಿರ ಬಹುದು'

ಈ ಬಾರಿ ಜೆಡಿಎಸ್ ಕುರಿತು ಜನರಲ್ಲಿ ಸುಪ್ತ ಭಾವನೆ ಇದೆ. ಅದು ನಮ್ಮ ಪಾಲಿಗೆ ಆಶಾಕಿರಣ. ಇದರ ಸಂಪೂರ್ಣ ಲಾಭ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

2004ರ ಚುನಾವಣೆಯಲ್ಲಿ ಬೀದರ್, ಕಲಬುರ್ಗಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಯಾದಗಿರಿ ಜಿಲ್ಲೆಗಳಲ್ಲಿ ನಾವು ಬಿಜೆಪಿಗಿಂತ ಹೆಚ್ಚು ಸ್ಥಾನಗಳನ್ನು ಗೆದ್ದಿದ್ದೆವು. ಕಲ್ಯಾಣ ಕರ್ನಾಟಕದಲ್ಲಿ ಈಗಲೂ ನಮಗೆ ಗಟ್ಟಿಯಾದ ನೆಲೆ ಇದೆ.

ಪಕ್ಷದಲ್ಲಿ ಮಹಿಳಾ ಕಾರ್ಯಕರ್ತರನ್ನು ಸೃಷ್ಟಿಮಾಡಲು ಆಗಲಿಲ್ಲ ಎಂಬ ಕೊರಗು ದೇವೇಗೌಡರಿಗೂ ಕಾಡುತ್ತಿದೆ. ಈ ತಪ್ಪನ್ನು ಸರಿಪಡಿಸಿಕೊಳ್ಳಲು ಮುಂದಾಗಿದ್ದೇವೆ. ಮುಂಬರುವ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಪ್ರಾತಿನಿಧ್ಯ ನೀಡಲು ನಿರ್ಧರಿಸಲಾಗಿದೆ. ಯುವಕರಿಗೂ ಹೆಚ್ಚಿನ ಆದ್ಯತೆ ಸಿಗಲಿದೆ.

ಬಿಜೆಪಿ ಮತ್ತು ಕಾಂಗ್ರೆಸ್ ನಮ್ಮ ಸಿದ್ಧತೆಯನ್ನು ಬಹಳ ಕುತೂಹಲದಿಂದ ನೋಡುತ್ತಿವೆ. ಆ ಪಕ್ಷಗಳಲ್ಲಿ ಈಗ ಭಯ ಶುರುವಾಗಿದೆ. **–ವೈ.ಎಸ್.ವಿ.ದತ್ತ,** ಜೆಡಿಎಸ್ ಮುಖಂಡ.

ಪ್ರಜಾವಾಣಿ ಸಂವಾದ

'ಜೆಡಿಎಸ್ ಪರಾವಲಂಬಿ ಪಕ್ಷ'



ಚುನಾವಣೆಗೆ ಇನ್ನೂ ಸಮಯವಿದೆ. ಇಂತಹ ಪಕ್ಷವೇ ಅಧಿಕಾರಕ್ಕೆ ಬರುತ್ತದೆ. ಇಂತಹ ಪಕ್ಷ ಇಂತಿಷ್ಟೇ ಸ್ಥಾನ ಗಳಿಸುತ್ತದೆ ಎಂದು ಹೇಳುವುದಕ್ಕೆ ಕಾಲ ಪಕ್ವವಾಗಿಲ್ಲ.

ಜೆಡಿಎಸ್ ಸ್ವತಂತ್ರವಾಗಿ ಸರ್ಕಾರ ರಚಿಸುವ ಸಾಧ್ಯತೆಯೇ ಇಲ್ಲ. ಇದು ಜನರ ಅಭಿಪ್ರಾಯ ಕೂಡ. ಉತ್ತರ ಕರ್ನಾಟಕದಲ್ಲಿ ಆ ಪಕ್ಷಕ್ಕೆ ನೆಲೆ ಎಲ್ಲಿದೆ. ಮುಂಬೈ ಕರ್ನಾಟಕ ಭಾಗದಲ್ಲಿ ಅವರೆಷ್ಟು ಸ್ಥಾನಗಳನ್ನು ಗೆದ್ದಿದ್ದಾರೆ. ಜೆಡಿಎಸ್ ಪರಾವಲಂಬಿ ಪಕ್ಷ. ವಲಸಿಗರ ಆಶ್ರಯ ತಾಣ.

ಜೆಡಿಎಸ್ ಎಂದು ಹೆಸರು ಪಡೆದುಕೊಂಡ ಮೇಲೆ ರಾಜ್ಯದಲ್ಲಿ ಈವರೆಗೂ ಸ್ವಂತ ಬಲದ ಮೇಲೆ ಆ ಪಕ್ಷ ಅಧಿಕಾರಕ್ಕೆ ಬಂದಿಲ್ಲ. ದಕ್ಷಿಣ ಕರ್ನಾಟಕದಲ್ಲಿ ಕಾಂಗ್ರೆಸ್ ಅನ್ನು ಕಟ್ಟಿಹಾಕಬಹುದಾದ ಏಕೈಕ ಪಕ್ಷ ಬಿಜೆಪಿ. ಆದರೆ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಕಟ್ಟಿಹಾಕಬಲ್ಲ ಸಾಮರ್ಥ್ಯ ಜೆಡಿಎಸ್‌ಗೆ ಇದೆಯೇ?. ರಾಜ್ಯದಲ್ಲಿ ಸ್ಪಷ್ಟ ಬಹುಮತದೊಂದಿಗೆ ಅಧಿ-ಕಾರಕ್ಕೇರುವ ಸಾಮರ್ಥ್ಯವಿರುವುದು ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಮಾತ್ರ.

–ಎನ್.ರವಿಕುಮಾರ್, ಬಿಜೆಪಿ ವಿಧಾನ ಪರಿಷತ್ ಸದಸ್ಯ.

'ಜೆಡಿಎಸ್‌ನವರದ್ದು ಕಷ್ಟಸಾಧ್ಯ ಗುರಿ'



ಜನತಾದಳವು ರಾಷ್ಟ್ರೀಯ ಪಕ್ಷಗಳ ಸ್ವರೂಪವನ್ನೇ ಹೊಂದಿತ್ತು. ಒಡಕಿನ ಕಾರಣ ಪ್ರಾದೇಶಿಕ ಪಕ್ಷದ ಮಟ್ಟಕ್ಕೆ ಇಳಿದಿದೆ. 2004ರ ಜೆಡಿಎಸ್‌ಗೂ ಈಗಿನ ಜೆಡಿಎಸ್‌ಗೂ ಬಹಳ ವ್ಯತ್ಯಾಸವಿದೆ. ಆಗ ಸಿದ್ದರಾಮಯ್ಯ ಆ ಪಕ್ಷದಲ್ಲಿದ್ದು. ಬಳಿಕ ರಾಜ್ಯ ರಾಜಕಾರಣದಲ್ಲಿ ಸಾಕಷ್ಟು ಧ್ರುವೀಕರಣ-ಗಳು ನಡೆದಿವೆ.

1983ರಲ್ಲಿ ಜನತಾ ಪರಿವಾರವಿದ್ದ ಸ್ಥಾನಕ್ಕೆ ಈಗ ಬಿಜೆಪಿ ಬಂದುಬಿಟ್ಟಿದೆ. ಅಭ್ಯರ್ಥಿಗಳಿಗೆ ಏನೇ ತರಬೇತಿ ನೀಡಿದರೂ ಮತ ಗಳಿಕೆಯ ಪ್ರಮಾಣ ಹೆಚ್ಚಿಸಿಕೊಳ್ಳಬೇಕಾದರೆ ಪ್ರಾದೇಶಿಕ ವಿಷಯಗಳನ್ನು ಇಟ್ಟುಕೊಂಡು ಚುನಾವಣೆಗೆ ಹೋಗಬೇಕಾಗುತ್ತದೆ. ಕರ್ನಾಟಕದ ಮಟ್ಟಿಗೆ ನೆಲ, ಜಲ ಮತ್ತು ಭಾಷೆಯ ವಿಷಯ ಮುಂದಿಟ್ಟುಕೊಂಡು ಚುನಾವಣೆಯಲ್ಲಿ ಗೆದ್ದ ನಿದರ್ಶನಗಳೇ ಇಲ್ಲ.ದೇವೇಗೌಡರ ಮೇಲೆ ಇಟ್ಟಿರುವ ಪ್ರೀತಿ ಮತ್ತು ಗೌರವವನ್ನು ಕುಮಾರಸ್ವಾಮಿ ಅವರ ಮೇಲೆ ರಾಜ್ಯದ ಜನರು ತೋರುವುದಿಲ್ಲ.

ಡಾ.ರಾಜ್‌ಕುಮಾರ್ ಮನಸ್ಸು ಮಾಡಿದ್ದರೆ ಬಲಿಷ್ಠ ಪ್ರಾದೇಶಿಕ ಪಕ್ಷ ಕಟ್ಟಬಹುದಿತ್ತು. ಜೆಡಿಎಸ್‌ನಲ್ಲಿ ಪ್ರಭಾವಶಾಲಿ ನಾಯಕರಿದ್ದಾರೆ. ಸಾಮೂಹಿಕ ನಾಯಕತ್ವ ಇಲ್ಲ. ಕಾಂಗ್ರೆಸ್‌ನ ಇಂದಿನ ದುಸ್ಥಿತಿಗೆ ಪಕ್ಷದ ನಾಯಕರೇ ಕಾರಣ.

– ಬಿ.ಎಲ್.ಶಂಕರ್, ಅಧ್ಯಕ್ಷ, ಕೆಪಿಸಿಸಿ ಮಾಧ್ಯಮ ವಿಭಾಗ.

'ಜೆಡಿಎಸ್ ನಾಯಕರಿಗೇ ತರಬೇತಿ ಬೇಕು'

ಜೆಡಿಎಸ್ ತನ್ನದೇ ತಪ್ಪುಗಳಿಂದಾಗಿ ವರ್ಚಸ್ಸು ಕುಗ್ಗಿಸಿಕೊಂಡಿದೆ. ಪಕ್ಷವು ಪ್ರತಿ ಚುನಾವಣೆಯಲ್ಲೂ ತನ್ನ ಗುರಿಗಳನ್ನು ಕಡಿಮೆಮಾಡಿಕೊಳ್ಳುತ್ತಾ ಹೋದಂತೆ ಭಾಸವಾಗುತ್ತಿದೆ. ಕಾಂಗ್ರೆಸ್ ಹಾಗೂ ಬಿಜೆಪಿಗೆ ಪರ್ಯಾಯವಾಗಿ ಪ್ರಾದೇಶಿಕ ಪಕ್ಷವೊಂದು ಬೆಳೆದರೆ ಅದರಿಂದ ರಾಜ್ಯಕ್ಕೆ ಲಾಭ ಹೆಚ್ಚು. ಜನ ಕೂಡ ಅದನ್ನೇ ಬಯಸುತ್ತಾರೆ. ಮೈಸೂರು ಭಾಗ ಬಿಟ್ಟು ಕಲ್ಯಾಣ ಕರ್ನಾಟಕದಲ್ಲೂ ಜೆಡಿಎಸ್ ಅನ್ನು ಗುರುತಿಸುವ ಜನರಿದ್ದಾರೆ. ಆದರೆ ಬೆಂಬಲಿಸುವವರು ಇಲ್ಲ. ಅಲ್ಲಿನ ಜನರೊಂದಿಗೆ ಪಕ್ಷದ ನಾಯಕರು ನಿಕಟ ಸಂಬಂಧ ಹೊಂದಿಲ್ಲ. ಹಿಂದಿನ ಚುನಾವಣೆಗಳಲ್ಲಿ ಅದು ಸಾಬೀತಾಗಿದೆ.

ದೇವೇಗೌಡ ಮತ್ತು ಕುಮಾರಸ್ವಾಮಿಯವರಿಗೆ ಪರ್ಯಾಯವಾಗಬಲ್ಲ ನಾಯಕರು ಜೆಡಿಎಸ್‌ನಲ್ಲಿಲ್ಲ. ಮಹಿಳಾ ಮುಖಂಡರು ಮತ್ತು ಕಾರ್ಯಕರ್ತೆಯರ ಕೊರತೆ ಪಕ್ಷಕ್ಕೆ ಹಿನ್ನಡೆಯಾಗಿದೆ. ಎಲ್ಲಾ ಪಕ್ಷಗಳ ನಾಯಕರೂ ಹೊಂದಾಣಿಕೆಯ ರಾಜಕಾರಣ ಮಾಡುತ್ತಾರೆ. ಜೆಡಿಎಸ್‌ನ ಮಿಷನ್–123 ಸುಂದರ ಕಲ್ಪನೆಯಷ್ಟೇ. ಅದರ ಹಿಂದೆ ಬೇರೆಯದ್ದೇ ಉದ್ದೇಶ ಅಡಗಿದೆ.

ಕುಮಾರಸ್ವಾಮಿ ಅವರು ಎರಡು ಬಾರಿ ಮುಖ್ಯಮಂ-ತ್ರಿಯಾದರೂ ಜನರ ಜೊತೆ ಅಷ್ಟು ಬೆರೆಯಲಿಲ್ಲ. ಪಕ್ಷದ ಇಂದಿನ ಸ್ಥಿತಿಗೆ ನಾಯಕರೇ ಕಾರಣ.

–ಪ್ರೀತಿ ನಾಗರಾಜ್, ಪತ್ರಕರ್ತೆ

ಇಲಿ ಜ್ವರ ಪ್ರಕರಣಗಳು ಪತ್ತೆ

ಮಡಿಕೇರಿ: 'ಕೊಡಗು ಜಿಲ್ಲೆಯಲ್ಲಿ 14 ಇಲಿ ಜ್ವರ ಪ್ರಕರಣಗಳು ಕಂಡುಬಂದಿರುವುದರಿಂದ ಸ್ವಚ್ಛತೆ ನಿರ್ವಹಣೆಗೆ ಹೆಚ್ಚು ಗಮನ ಕೊಡಬೇಕು' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಆರ್.ವೆಂಕಟೇಶ್ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಡಿಕೇರಿ ತಾಲ್ಲೂಕಿನಲ್ಲಿ 7, ಸೋಮವಾರಪೇಟೆ ತಾಲ್ಲೂಕಿನಲ್ಲಿ 2, ವಿರಾಜಪೇಟೆ ತಾಲ್ಲೂಕಿನಲ್ಲಿ 5 ಪ್ರಕರಣಗಳು ಕಂಡು ಬಂದಿವೆ' ಎಂದರು.

ತಲಕಾವೇರಿ: 17ರಂದು 'ಕಾವೇರಿ ತೀರ್ಥೋದ್ಭವ'

ಮಡಿಕೇರಿ: ಕಾವೇರಿ ತೀರ್ಥೋದ್ಭವವು ಅ.17ರ ಭಾನುವಾರ ನಡೆಯಲಿದ್ದು, ಅಂದು ಭಕ್ತರಿಗೆ ಕಾವೇರಿ ತೀರ್ಥರೂಪಿಣಿಯಾಗಿ ಒಲಿಯಲಿದ್ದಾಳೆ. ಮಧ್ಯಾಹ್ನ 1.11ರ ಮಕರ ಲಗ್ನದಲ್ಲಿ ಕಾವೇರಿ ತೀರ್ಥೋದ್ಭವಕ್ಕೆ ಸಮಯ ನಿಗದಿಯಾಗಿದೆ.

'ಈಗಾಗಲೇ ಭಾಗಮಂಡಲದ ಭಗಂಡೇಶ್ವರ ದೇಗುಲದಲ್ಲಿ ಪತ್ತಾಯಕ್ಕೆ ಅಕ್ಕಿ ಹಾಕುವ ಮೂಲಕ ಕಾವೇರಿ ಜಾತ್ರೆಗೆ ಚಾಲನೆ ಸಿಕ್ಕಿದೆ. ಅ.4ರ ಬೆಳಿಗ್ಗೆ 10.35ಕ್ಕೆ ವೃಶ್ಚಿಕ ಲಗ್ನದಲ್ಲಿ 'ಆಜ್ಞಾ ಮುಹೂರ್ತ' ನಡೆಯಲಿದೆ. 14ರಂದು ಮಧ್ಯಾಹ್ನ 12.05ರ ಧನು ಲಗ್ನದಲ್ಲಿ ಅಕ್ಷಯ ಪಾತ್ರೆ ಇರಿಸುವುದು ಹಾಗೂ ಅಂದೇ ಮಧ್ಯಾಹ್ನ 1.25ಕ್ಕೆ ಕಾಣಿಕೆ ಡಬ್ಬಿಯಿಡುವ ಧಾರ್ಮಿಕ ಕಾರ್ಯಗಳು ಜರುಗಲಿವೆ' ಎಂದು ಭಾಗಮಂಡಲ – ತಲಕಾವೇರಿ ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿ ಕೃಷ್ಣಪ್ಪ ತಿಳಿಸಿದ್ದಾರೆ.

KEA

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23 460 460 (5 ಲೈನ್‌ಗಳು)
ಫ್ಯಾಕ್ಸ್: 080–23461576 ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.19/2020–21(ಕೆಕೆ) ದಿನಾಂಕ: 30–09–2021
ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.19/2020–21(ಆರ್‌ಪಿಸಿ) ದಿನಾಂಕ: 30–09–2021

ಅಧಿಸೂಚನೆ

ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇರ ನೇಮಕಾತಿ – ಮಿಕ್ಕುಳಿದ ವೃಂದ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ (ಸ್ಥಳೀಯ) ವೃಂದದ ಹುದ್ದೆಗಳೂ ಸೇರಿದಂತೆ

ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲು ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ ಇಡಿ 257 ಡಿಸಿಇ 2019 (ಭಾ–3), ಬೆಂಗಳೂರು, ದಿನಾಂಕ 15–07–2021 ರಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಆಯ್ಕೆ ಪ್ರಾಧಿಕಾರವನ್ನಾಗಿ ಅಧಿಸೂಚಿಸಲಾಗಿದೆ. "ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಸಹಾಯಕ ಪ್ರಾಧ್ಯಾಪಕರ ನೇಮಕಾತಿ) (ವಿಶೇಷ) ನಿಯಮಗಳು 2020" ಮತ್ತು ತಿದ್ದುಪಡಿ ಅಧಿಸೂಚನೆ ಸಂಖ್ಯೆ ಇಡಿ 257 ಡಿಸಿಇ 2019 (ಭಾ–3) ಬೆಂಗಳೂರು, ದಿನಾಂಕ 19–10–2020; ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 257 ಡಿಸಿಇ 2019 ದಿನಾಂಕ 26–08–2021 ಹಾಗು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ ಕಾಶಿಇ/ನೇವಿ–1/ಸಪ್ರಾನೇ/199/2019–20 ದಿನಾಂಕ 01–09–2021ರ ಅನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ನಿಯಮದ ಅನ್ವಯ ಅಭ್ಯರ್ಥಿಗಳು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗೆ ಅರ್ಹತೆ ಪಡೆಯಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಬೇಕು.

1. **ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಯನ್ನು ಈ ಕೆಳಕಂಡ ವಿಷಯಗಳಿಗೆ ನಡೆಸಲಾಗುವುದು.**
ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ, ಶಿಕ್ಷಣ ಶಾಸ್ತ್ರ, ಕಾನೂನು, ಸಮಾಜ ಕಾರ್ಯ, ಭೂಗೋಳ ಶಾಸ್ತ್ರ, ಭೂಗರ್ಭ ಶಾಸ್ತ್ರ, ವಾಣಿಜ್ಯ ಶಾಸ್ತ್ರ, ನಿರ್ವಹಣಾ ಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೈವಿಕ ರಸಾಯನ ಶಾಸ್ತ್ರ, ಗಣಿತಶಾಸ್ತ್ರ, ಸೂಕ್ಷ್ಮ ಜೀವಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯ ಶಾಸ್ತ್ರ, ಎಲೆಕ್ಟ್ರಾನಿಕ್ಸ್, ಗಣಕವಿಜ್ಞಾನ, ಸಂಖ್ಯಾ ಶಾಸ್ತ್ರ, ಫ್ಯಾಶನ್ ಟೆಕ್ನಾಲಜಿ.
2. **ವೇತನ ಶ್ರೇಣಿ:** ಯುಜಿಸಿ ವೇತನ ಶ್ರೇಣಿ ರೂ. 57700 – 182400
3. **ಪಿಂಚಣಿ ಸೌಲಭ್ಯ:** ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ: 31–3–2006 ರಂತೆ.
4. **ವಯೋಮಿತಿ:** ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಕನಿಷ್ಠ 22 ವರ್ಷಗಳು ತುಂಬಿರತಕ್ಕದ್ದು ಹಾಗೂ ಈ ಕೆಳಕಂಡ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು;
ಎ) ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ : 40 ವರ್ಷಗಳು,
ಬಿ) ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ : 43 ವರ್ಷಗಳು,
ಸಿ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ /ಪ್ರವರ್ಗ–1 ಅಭ್ಯರ್ಥಿಗಳಿಗೆ:45 ವರ್ಷಗಳು. ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು, ಎನ್.ಸಿ.ಸಿ ಪರಿವೀಕ್ಷಕರು, ಗ್ರಾಮ ಸಮೂಹ ಪರಿಶೀಲಕರು, ಜೀತ ಕಾರ್ಮಿಕರು, ಜನಗಣತಿ ಮತ್ತು ವಿಧವೆ ಅಭ್ಯರ್ಥಿಗಳಿಗೆ ಗರಿಷ್ಠ ಐದು ವರ್ಷಗಳ ಸಡಿಲಿಕೆ ನೀಡಲಾಗುವುದು. ವಿಕಲಚೇತನ ಅಭ್ಯರ್ಥಿಗಳಿಗೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ಅಧಿನಿಯಮ (3) ರ ನಿಯಮ 6 ರಲ್ಲಿ ನಿಗದಿಪಡಿಸಿರುವಂತೆ ನಿಗದಿತ ಗರಿಷ್ಠ ವಯೋಮಿತಿಯಲ್ಲಿ ಹತ್ತು ವರ್ಷಗಳ ಸಡಿಲಿಕೆ ನೀಡಲಾಗುವುದು. ಹಾಗು ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಕೇಂದ್ರ ಸರ್ಕಾರದ ಸಶಸ್ತ್ರ ಪಡೆಯಲ್ಲಿ ಆತನು ಸಲ್ಲಿಸಿದ ಸೇವಾವಧಿಯೊಂದಿಗೆ ಮೂರು ವರ್ಷಗಳನ್ನು ಸೇರಿಸಿ ವಯೋಮಿತಿ ಸಡಿಲಿಕೆ ನೀಡಲಾಗುವುದು.
5. **ಅರ್ಜಿ ಸಲ್ಲಿಸುವ ವಿಧಾನ:**
ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ತೋರಿಸಿರುವ "Assistant Professors Recruitment-2021" ಲಿಂಕ್ ಅನ್ನು ಆಯ್ಕೆ ಮಾಡಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಭರ್ತಿಮಾಡಬೇಕು. ಪೆನ್ ಮತ್ತು ಪೇಪರ್ ಉಪಯೋಗಿಸಿ ಅರ್ಜಿಯನ್ನು ಸಲ್ಲಿಸುವ ವಿಧಾನ ಇರುವುದಿಲ್ಲ.

ಆನ್‌ಲೈನ್ ಮುಖಾಂತರ ಅರ್ಜಿಸಲ್ಲಿಸಲು ಪ್ರಾರಂಭಿಕ ದಿನಾಂಕ	**07.10.2021ರ ಬೆಳಿಗ್ಗೆ 11.30ರಿಂದ**
ಆನ್‌ಲೈನ್ ಮುಖಾಂತರ ಅರ್ಜಿಸಲ್ಲಿಸಲು ಕೊನೆಯ ದಿನಾಂಕ	**06.11.2021ರ ರಾತ್ರಿ 11.59 ಗಂಟೆಯವರೆಗೆ**
ಇ–ಪೋಸ್ಟ್ ಆಫೀಸ್‌ನಲ್ಲಿ ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ	**10.11.2021 (ಕಛೇರಿ ವೇಳೆಯಲ್ಲಿ)**
ಸ್ಪರ್ಧಾತ್ಮಕ ಪರೀಕ್ಷೆಯನ್ನು **2021 ರ ಡಿಸೆಂಬರ್ ಮಾಹೆಯ ಮೂರನೆ ಅಥವಾ ನಾಲ್ಕನೇ ವಾರದ ಅವಧಿಯಲ್ಲಿ** ನಡೆಸುವ ಸಾಧ್ಯತೆ ಇರುತ್ತದೆ.	
ಸ್ಪರ್ಧಾತ್ಮಕ ಪರೀಕ್ಷೆಗೆ ಪ್ರವೇಶ ಪತ್ರಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕವನ್ನು ನಂತರ ತಿಳಿಸಲಾಗುವುದು	

6. **ಶುಲ್ಕ:**

ವಿವರಗಳು	ಶುಲ್ಕ	
ಸಾಮಾನ್ಯ ಅರ್ಹತೆ ಮತ್ತು ಇತರೆ ಪ್ರವರ್ಗಗಳು (ಪ್ರವರ್ಗ–2ಎ / 2ಬಿ / 3ಎ / 3ಬಿ)	**ರೂ.2,000/–**	**ಹಿಂದಿರುಗಿಸಲಾಗುವುದಿಲ್ಲ**
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1	**ರೂ.1,000/–**	

ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ. (ಶೇ.40ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವವರು ಮತ್ತು ಅದಕ್ಕೆ ಸಂಬಂಧಿಸಿದಂತೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರ ಹೊಂದಿರುವವರು)

ಸೂಚನೆ: ಶುಲ್ಕವನ್ನು ಕಂಪ್ಯೂಟರೈಸ್ಡ್ ಅಂಚೆ ಕಚೇರಿಗಳಲ್ಲಿ ಮಾತ್ರ ಪಾವತಿಸಬೇಕು. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ, ಒಂದೇ ಅರ್ಜಿಯಲ್ಲಿ ಸಲ್ಲಿಸಬೇಕು, ಆದರೆ ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಶುಲ್ಕವನ್ನು ಪಾವತಿಸಬೇಕು.

7. **ಒಟ್ಟು ಹುದ್ದೆಗಳು: 1242**

ಕ್ರ.ಸಂ.	ವಿಷಯ	ಹುದ್ದೆಗಳ ವಿವರ: ಹಿಂದಿನ 2015 ರ ನೇಮಕಾತಿಯಲ್ಲಿ ಭರ್ತಿ ಯಾಗದೇ ಇದ್ದ ಹುದ್ದೆಗಳು (Carry forward) RPC(NHK) TOT	RPC(NHK) Grp-C	KK(HK) TOT	KK(HK) Grp-C	ಈ ನೇಮಕಾತಿ ಅಧಿಸೂಚನೆಯ ಹುದ್ದೆಗಳು RPC(NHK) TOT	RPC(NHK) Grp-C	KK(HK) TOT	KK(HK) Grp-C	ಒಟ್ಟು ಹುದ್ದೆಗಳು
01	ಕನ್ನಡ	1	0	1	0	85	4	15	1	107
02	ಇಂಗ್ಲೀಷ್	30	1	18	1	31	2	1	0	84
03	ಹಿಂದಿ	0	0	1	0	7	0	2	0	10
04	ಉರ್ದು	3	0	3	0	3	0	0	0	9
05	ಇತಿಹಾಸ	1	0	0	0	89	5	13	1	109
06	ಅರ್ಥಶಾಸ್ತ್ರ	0	1	0	0	102	5	13	1	122
07	ರಾಜ್ಯಶಾಸ್ತ್ರ	2	0	0	0	79	4	12	1	98
08	ಸಮಾಜ ಶಾಸ್ತ್ರ	1	0	0	0	36	2	9	1	49
09	ಶಿಕ್ಷಣ ಶಾಸ್ತ್ರ	0	0	0	0	2	0	0	0	2
10	ಕಾನೂನು	0	0	0	0	15	1	0	1	17
11	ಸಮಾಜ ಕಾರ್ಯ	1	0	0	0	4	0	0	0	5
12	ಭೂಗೋಳ ಶಾಸ್ತ್ರ	0	0	0	0	8	0	0	0	8
13	ಭೂಗರ್ಭ ಶಾಸ್ತ್ರ	0	0	0	0	5	0	0	0	5
14	ವಾಣಿಜ್ಯ ಶಾಸ್ತ್ರ	9	1	17	0	134	7	28	2	198
15	ನಿರ್ವಹಣಾ ಶಾಸ್ತ್ರ	9	0	5	0	0	0	0	1	15
16	ಭೌತಶಾಸ್ತ್ರ	2	0	0	0	56	3	14	1	76
17	ರಸಾಯನಶಾಸ್ತ್ರ	2	0	1	0	66	3	12	1	85
18	ಜೈವಿಕ ರಸಾಯನ ಶಾಸ್ತ್ರ	0	0	0	0	5	0	0	0	5
19	ಗಣಿತಶಾಸ್ತ್ರ	3	0	0	0	49	3	19	1	75
20	ಸೂಕ್ಷ್ಮ ಜೀವಶಾಸ್ತ್ರ	0	0	0	0	5	0	0	0	5
21	ಪ್ರಾಣಿಶಾಸ್ತ್ರ	0	0	0	0	26	1	4	0	31
22	ಸಸ್ಯ ಶಾಸ್ತ್ರ	0	0	0	0	45	2	4	0	51
23	ಎಲೆಕ್ಟ್ರಾನಿಕ್ಸ್	0	0	0	0	4	0	0	0	4
24	ಗಣಕವಿಜ್ಞಾನ	12	0	16	0	33	2	0	0	63
25	ಸಂಖ್ಯಾ ಶಾಸ್ತ್ರ	0	0	0	0	6	0	0	0	6
26	ಫ್ಯಾಶನ್ ಟೆಕ್ನಾಲಜಿ	3	0	0	0	0	0	0	0	3
	ಒಟ್ಟು	**79**	**3**	**62**	**1**	**895**	**44**	**146**	**12**	**1242**

ಪ್ರವರ್ಗವಾರು ಮತ್ತು ವಿಷಯವಾರು ಹುದ್ದೆಗಳ ವಿವರಗಳನ್ನು ಹಾಗೂ ಕರ್ನಾಟಕ ರಾಜ್ಯಪತ್ರದಲ್ಲಿ (ಗೆಜೆಟ್) ಪ್ರಕಟಿಸಲಾಗುವುದು ಹಾಗು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿಯೂ ಸಹ ಪ್ರಚುರಪಡಿಸಲಾಗುವುದು.

8. **ಶೈಕ್ಷಣಿಕ ಅರ್ಹತೆ:**

ಎ. ಅಭ್ಯರ್ಥಿಯು ಭಾರತೀಯ ವಿಶ್ವವಿದ್ಯಾಲಯದಿಂದ ಸಂಬಂಧಪಟ್ಟ / ಸುಸಂಬಂಧಿತ / ಸಂಬಂಧಿಸಿದ ವಿಷಯದಲ್ಲಿ (ಶ್ರೇಣಿ ನೀಡಿಕೆ ಪದ್ಧತಿಯನ್ನು ಅನುಸರಿಸುವ ಕಡೆಗಳಲ್ಲಿ ಪಾಯಿಂಟ್ ಸ್ಕೇಲ್‌ನಲ್ಲಿ ಅದಕ್ಕೆ ತತ್ಸಮಾನದ ಶ್ರೇಣಿ) ಶೇಕಡಾ ಐವತ್ತೈದು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಅಥವಾ ಮಾನ್ಯತೆ ಪಡೆದಿರುವ / ಅಂಗೀಕೃತ ವಿದೇಶೀ ವಿಶ್ವವಿದ್ಯಾಲಯದಿಂದ ಪಡೆದ ತತ್ಸಮಾನದ ಪದವಿ ಪಡೆದಿರಬೇಕು (ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೆ ಹಿಂದುಳಿದ ವರ್ಗಗಳು (ಒಬಿಸಿ) (ಕೆನೆಪದರೇತರ) ಅಥವಾ ಗೊತ್ತುಪಡಿಸಿ ಪ್ರಮಾಣದ ಅಂಗವಿಕಲತೆ ಹೊಂದಿರುವ ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 (ಕೇಂದ್ರ ಅಧಿನಿಯಮ ಸಂಖ್ಯೆ 2016ರ 4ಎ) ರಲ್ಲಿ ಪರಿಭಾಷಿಸಲಾದ ಅಭ್ಯರ್ಥಿಗಳು ಶೇ. 50%).

ವಿದೇಶದ ಅಂಗೀಕೃತ ವಿಶ್ವವಿದ್ಯಾಲಯಗಳಿಂದ ಪದವಿ / ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಅಭ್ಯರ್ಥಿಗಳು, ಅಂತಹ ಪದವಿ / ಸ್ನಾತಕೋತ್ತರ ಪದವಿಯ ಹಾಗು ಅವುಗಳ ವಿಷಯಗಳ ಶೈಕ್ಷಣಿಕ ತತ್ಸಮಾನತೆಯ ಬಗ್ಗೆ ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟೀಸ್ ಸಂಸ್ಥೆಯ ವೆಬ್‌ಸೈಟ್ https://www.aiu.ac.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ತತ್ಸಮಾನ ಪದವಿ ಪ್ರಮಾಣ ಪತ್ರವನ್ನು ಪಡೆದು ನಂತರ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಅರ್ಜಿ ಸಲ್ಲಿಸಬೇಕು.

ಸೆಪ್ಟೆಂಬರ್ 19, 1991ಕ್ಕೆ ಮುಂಚೆ ತನ್ನ ಸ್ನಾತಕೋತ್ತರ ಪದವಿ ಪಡೆದಿರುವ ಪಿ.ಎಚ್‌ಡಿ ಪದವೀಧರರಿಗೆ (ಶೇಕಡಾ ಐವತ್ತೈದರಿಂದ ಶೇಕಡಾ ಐವತ್ತು ಅಂಕಗಳಿಗೆ) ಶೇಕಡಾ ಐದರಷ್ಟು ರಿಯಾಯಿತಿಯನ್ನು ನೀಡಲಾಗುವುದು.

ಸೂಚನೆ: ಶೇಕಡಾ 55 ಅರ್ಹತಾ ಅಂಕಗಳು (ಅಥವಾ ಗ್ರೇಡಿಂಗ್ ಸಿಸ್ಟಂ ಅನುಸರಿಸುತ್ತಿರುವಲ್ಲಿ ತತ್ಸಮಾನ ಗ್ರೇಡ್) ಮತ್ತು ಅರ್ಹತಾ ಅಂಕಗಳಲ್ಲಿ 5% ಸಡಿಲಿಕೆಗೆ ಮೇಲೆ ಸೂಚಿಸಿರುವ ವಿವಿಧ ಕೆಟಗರಿಗಳ ಅಭ್ಯರ್ಥಿಗಳಿಗೆ ಗ್ರೇಸ್ ಅಂಕಗಳನ್ನು ಹೊರತುಪಡಿಸಿದಂತೆ ಅವಕಾಶವಿದೆ. ಸ್ನಾತಕೋತ್ತರ ಮಟ್ಟದ ಪದವಿಯನ್ನು ಕಾನೂನು ರೀತ್ಯ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾಲಯದ ಮೂಲಕ ಶ್ರೇಣಿಪದ್ಧತಿ ನೀಡಿಕೆಯನ್ನು ಅನುಸರಿಸುವ ಕಡೆಗಳಲ್ಲಿ ಶೇಕಡಾ ಐವತ್ತೈದಕ್ಕೆ ಸಮನಾಗಿರುವಂತೆ ಸಂಬಂಧಿಸಿದ ಶ್ರೇಣಿಯನ್ನು ಮಾನ್ಯವಾಗಿರುವಂತೆಯೂ ಕೂಡ ಪರಿಗಣಿಸತಕ್ಕದ್ದು.

ಯಾವುದೇ ಕೃಪಾಂಕ ನೀಡಿಕೆ ಪ್ರಕ್ರಿಯೆಗಳನ್ನು ಒಳಗೊಳ್ಳದೆ ಕೇವಲ ಅರ್ಹತಾದಾಯಕ ಅಂಶಗಳನ್ನು ಮಾತ್ರ ಆಧರಿಸಿ ಪರಿಗಣಿಸಲಾಗುವುದು.

ಮತ್ತು

ಬಿ. ಯುಜಿಸಿ ಅಥವಾ ಸಿಎಸ್‌ಐಆರ್ ಮೂಲಕ ನಡೆಸಲಾದ "ರಾಷ್ಟ್ರೀಯ ಅರ್ಹತಾ ಪರೀಕ್ಷೆ"ಯಲ್ಲಿ ಅಥವಾ ಅಂಥ ಯುಜಿಸಿ "ರಾಜ್ಯ ಮಟ್ಟದ ಅರ್ಹತಾ ಪರೀಕ್ಷೆ" ಅಥವಾ "ಕೆಸೆಟ್" ಪರೀಕ್ಷೆಯಲ್ಲಿ ಯಶಸ್ವಿಯಾಗಿ ತೇರ್ಗಡೆಯಾಗಿರತಕ್ಕದ್ದು.

ಸಿ. ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಎಂಫಿಲ್/ಪಿಎಚ್‌ಡಿ ಪದವಿ ನೀಡಿಕೆಗಾಗಿ ಕನಿಷ್ಠ ಮಾನದಂಡಗಳು ಮತ್ತು ಪ್ರಕ್ರಿಯೆ) ವಿನಿಯಮಗಳು, 2009 ಅಥವಾ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಎಂಫಿಲ್/ಪಿಎಚ್‌ಡಿ ಪದವಿ ನೀಡಿಕೆಗಾಗಿ ಕನಿಷ್ಠ ಮಾನದಂಡಗಳು ಮತ್ತು ಪ್ರಕ್ರಿಯೆ) ವಿನಿಯಮಗಳು, 2016ರ ಮತ್ತು ಸಂದರ್ಭಾನುಸಾರ ತರುವಾಯ ಕಾಲಕಾಲಕ್ಕೆ ಅವುಗಳಿಗೆ ಮಾಡಲಾದ ತಿದ್ದುಪಡಿಗಳಿಗೆ ಅನುಸಾರವಾಗಿ ಪಿಎಚ್‌ಡಿ ಪದವಿಯನ್ನು ಪಡೆದಿರುವಂತಹ ಅಭ್ಯರ್ಥಿಗಳಿಗೆ, ಅಗತ್ಯವಿರುವ ಎನ್‌ಇಟಿ/ಎಸ್ ಎಲ್‌ಇಟಿ/ಎಸ್‌ಇಟಿಯ ಕನಿಷ್ಠ ಅರ್ಹತಾ ಷರತ್ತುಗಳ ಅಗತ್ಯದಿಂದ ವಿನಾಯಿತಿ ನೀಡಲಾಗುವುದು. ಆದರೆ,

ಜುಲೈ 11, 2009ಕ್ಕೆ ಮುಂಚೆ ಎಂಫಿಲ್ ಅಥವಾ ಪಿ.ಎಚ್‌ಡಿ ಪದವಿಗಾಗಿ ನೋಂದಾಯಿಸಿದ ಅಭ್ಯರ್ಥಿಗಳಿಗೆ ಆ ಪದವಿ ನೀಡುವ ಸಂಸ್ಥೆಗಳಲ್ಲಿ ಅಂದು ಜಾರಿಯಲ್ಲಿದ್ದ ಅಧ್ಯಾದೇಶಗಳು/ಉಪ–ವಿಧಿಗಳು/ವಿನಿಯಮಗಳು, ಉಪಬಂಧಗಳಿಗನುಸಾರವಾಗಿ ಪದವಿಯನ್ನು ಪಡೆದಿರತಕ್ಕದ್ದು ಮತ್ತು ಅಂತಹ ಪಿ.ಎಚ್‌ಡಿ ಅಭ್ಯರ್ಥಿಗಳಿಗೆ ಈ ಮುಂದಿನ ಷರತ್ತುಗಳನ್ನು ಪೂರೈಸುವ ಷರತ್ತಿಗೆ ಒಳಪಟ್ಟು ಅಗತ್ಯವಿರುವಂತಹ ಎನ್‌ಇಟಿ/ಎಸ್‌ಎಲ್‌ಇಟಿ/ಎಸ್‌ಇಟಿಯಿಂದ ವಿನಾಯಿತಿ ನೀಡತಕ್ಕದ್ದು.

(ಎ) ಅಭ್ಯರ್ಥಿಯು ಪಿ.ಎಚ್‌ಡಿ ಪದವಿಯನ್ನು ನಿಯಮಿತ (ರೆಗ್ಯುಲರ್) ರೀತಿಯಲ್ಲಿ ಪಡೆದಿರಬೇಕು;
(ಬಿ) ಪಿ.ಎಚ್‌ಡಿ ಪ್ರಬಂಧವು ಕನಿಷ್ಠ ಇಬ್ಬರು ಬಾಹ್ಯ ವಿಷಯ ಪರೀಕ್ಷಕರಿಂದ ಅನುಮೋದಿತವಾಗಿರತಕ್ಕದ್ದು;
(ಸಿ) ಪಿ.ಎಚ್‌ಡಿಗೆ ಸಂಬಂಧಿಸಿದಂತೆ ಮುಕ್ತ ಅಭ್ಯರ್ಥಿಯ ಮೌಖಿಕ ಸಂದರ್ಶನ ನಡೆಸಿರತಕ್ಕದ್ದು;
(ಡಿ) ಅಭ್ಯರ್ಥಿಯು ಆತನ ಪಿ.ಎಚ್‌ಡಿ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಸಂಶೋಧನಾ ಲೇಖನಗಳನ್ನು ಪ್ರಕಟಿಸತಕ್ಕದ್ದು. ಅದರಲ್ಲಿ ಒಂದು ಲೇಖನ ಪರಾಮರ್ಶನ ಜರ್ನಲ್‌ನಲ್ಲಿ ಪ್ರಕಟವಾಗತಕ್ಕದ್ದು;
(ಇ) ಅಭ್ಯರ್ಥಿಯು ತನ್ನ ಪಿ.ಎಚ್‌ಡಿ ಕಾರ್ಯವನ್ನು ಆಧರಿಸಿ ಕನಿಷ್ಠ ಪಕ್ಷ 2 ಪತ್ರಿಕೆಗಳನ್ನು ಯುಜಿಸಿ ಅಥವಾ ಐಸಿಎಸ್‌ಎಸ್‌ಆರ್ ಅಥವಾ ಸಿಎಸ್‌ಐಆರ್ ಅಥವಾ ಯಾವುದೇ ಅಂತಹುದೇ ಏಜೆನ್ಸಿಯ ಮೂಲಕ ಪ್ರಾಯೋಜಿಸಲಾದ ಅಥವಾ ಧನ ಸಹಾಯ ಮಾಡಲಾದ ಅಥವಾ ಬೆಂಬಲಿಸಿದ ಸಮ್ಮೇಳನಗಳು ಅಥವಾ ವಿಚಾರ ಸಂಕೀರಣಗಳಲ್ಲಿ ಮಂಡಿಸತಕ್ಕದ್ದು.

ಈ ಮೇಲಿನ ಷರತ್ತುಗಳನ್ನು ಪೂರೈಸಿರುವುದರ ಕುರಿತು ಸಂಬಂಧಪಟ್ಟ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಅಥವಾ ಡೀನ್ (ಶೈಕ್ಷಣಿಕ ವ್ಯವಹಾರಗಳು) ಇವರು ಪ್ರಮಾಣೀಕರಿಸಿರುವ ದಾಖಲೆಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಮತ್ತು ದಾಖಲಾತಿ ಪರಿಶೀಲನೆಯ ಸಮಯದಲ್ಲಿ ಸಲ್ಲಿಸಬೇಕು.

ಡಿ. ನೇಮಕಾತಿಗಾಗಿ ಅಗತ್ಯವಿರುವ ಎನ್‌ಇಟಿ/ಎಸ್‌ಎಲ್‌ಇಟಿ/ಎಸ್‌ಇಟಿಯಿಂದ ಈ ಕೆಳಗಿನಂತೆ ವಿನಾಯಿತಿ ನೀಡಲಾಗುವುದು.

i. ಕ್ವಾಸಿಕ್ವಾರಲ್ಲಿ ಸೈಮಂಡ್ಸ್ (QS);
ii. ದಿ ಟೈಮ್ಸ್ ಹೈಯರ್ ಎಜ್ಯುಕೇಷನ್ (THE) ಅಥವಾ;
iii. ಶಾಂಗೈ ಜಿಯೋ ಟಾಂಗ್ ವಿಶ್ವವಿದ್ಯಾಲಯ (ಶಾಂಗೈ)ದ ಜಾಗತೀಕ ವಿಶ್ವವಿದ್ಯಾಲಯಗಳ ಶೈಕ್ಷಣಿಕ ರ್‍ಯಾಂಕಿಂಗ್ ನಲ್ಲಿ (ಯಾವುದೇ ಸಮಯದಲ್ಲಿ) ಮೊದಲ 500 ರ್‍ಯಾಂಕ್ ನಲ್ಲಿರುವ ವಿದೇಶಿ ವಿಶ್ವವಿದ್ಯಾಲಯಗಳ/ ಸಂಸ್ಥೆಯಿಂದ ಪಿ.ಎಚ್.ಡಿ ಪದವಿಯನ್ನು ಪಡೆದಿದ್ದಲ್ಲಿ.

ಸೂಚನೆ:
1. ಯಾವ ವಿಷಯಗಳಲ್ಲಿ ಯುಜಿಸಿ ಅಥವಾ ಸಿಎಸ್‌ಐಆರ್, ಎನ್‌ಇಟಿ ಪರೀಕ್ಷೆಯನ್ನು ಅಥವಾ ಯುಜಿಸಿಯಿಂದ ಮಾನ್ಯತೆ ಪಡೆದ ಎನ್‌ಇಟಿ ಅಥವಾ ಕೆಎಸ್‌ಇಟಿ ಪರೀಕ್ಷೆಯನ್ನು ನಡೆಸಲಾಗುವುದಿಲ್ಲವೋ ಅಂಥ ವಿಷಯಗಳಿಗಾಗಿ ಎನ್‌ಇಟಿ ಅಥವಾ ಎಸ್‌ಎಲ್‌ಇಟಿ ಅಥವಾ ಕೆಎಸ್‌ಇಟಿಯನ್ನು ಅಗತ್ಯಪಡಿಸುವುದಿಲ್ಲ.
2. ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಕಾಲಕಾಲಕ್ಕೆ ಹೊರಡಿಸಲಾದ ವಿನಿಯಮಗಳು ಅಥವಾ ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆಗಳು ಅನ್ವಯವಾಗುತ್ತದೆ.

9. **ಸ್ಪರ್ಧಾತ್ಮಕ ಪರೀಕ್ಷೆಯ ವಿವರಗಳು:**

ಸ್ಪರ್ಧಾತ್ಮಕ ಪರೀಕ್ಷೆಯನ್ನು **ಬೆಂಗಳೂರು, ಮೈಸೂರು, ಶಿವಮೊಗ್ಗ, ಧಾರವಾಡ, ಬೆಳಗಾವಿ, ಕಲುಬರ್ಗಿ, ಮತ್ತು ಮಂಗಳೂರು ಸ್ಥಳಗಳಲ್ಲಿ** ನಡೆಸಲಾಗುವುದು. ಪರೀಕ್ಷೆಗಳ ದಿನಾಂಕಗಳನ್ನು ಅಧಿಸೂಚಿಸಿದಾಗ ಪ್ರವೇಶ ಪತ್ರಗಳನ್ನು ಪ್ರಾಧಿಕಾರದ ಅಂತರ್ಜಾಲದಿಂದ ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬೇಕು. ಅಭ್ಯರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಪ್ರತ್ಯೇಕವಾಗಿ ರವಾನಿಸಲಾಗುವುದಿಲ್ಲ. **ಸ್ಪರ್ಧಾತ್ಮಕ ಪರೀಕ್ಷೆಯನ್ನು 2021 ರ ಡಿಸೆಂಬರ್ ಮಾಹೆಯ ಮೂರನೆ ಅಥವಾ ನಾಲ್ಕನೇ ವಾರದ ಅವಧಿಯಲ್ಲಿ ನಡೆಸುವ ಸಾಧ್ಯತೆ ಇರುತ್ತದೆ. ಸ್ಪರ್ಧಾತ್ಮಕ ಪರೀಕ್ಷಾ ವೇಳಾಪಟ್ಟಿಯನ್ನು ಕೆಇಎ ವೆಬ್‌ಸೈಟ್ http://kea.kar.nic.in ನಲ್ಲಿ ನಂತರ ಪ್ರಕಟಿಸಲಾಗುತ್ತದೆ.**

ವಿವರಗಳು	ಪತ್ರಿಕೆ	ವಿಷಯ	ಅಂಕಗಳು	ಒಟ್ಟು ಪ್ರಶ್ನೆಗಳು	ಅವಧಿ
ಎ. ಕಡ್ಡಾಯ ಪತ್ರಿಕೆ	Paper-I	ಕನ್ನಡ	100	-	2 ಗಂಟೆಗಳು
	Paper-II	ENGLISH	100	-	2 ಗಂಟೆಗಳು
ಬಿ. ಕಡ್ಡಾಯ ಪತ್ರಿಕೆ	Paper-III	ಸಾಮಾನ್ಯ ಜ್ಞಾನ	50	50	2 ಗಂಟೆಗಳು
	Paper-IV	ಐಚ್ಛಿಕ ವಿಷಯ	250	125	3 ಗಂಟೆಗಳು

ಬಿ. ಕಡ್ಡಾಯ ಪತ್ರಿಕೆಯಲ್ಲಿ ಋಣಾತ್ಮಕ ಮೌಲ್ಯಮಾಪನವಿದ್ದು, ಪ್ರತಿ ತಪ್ಪು ಉತ್ತರಗಳಿಗೆ 1/4 ರಷ್ಟು ಅಂಕಗಳನ್ನು ಕಳೆಯಲಾಗುವುದು,ಒಂದು ಅಂಕಕ್ಕೆ 1/4 (0.25) ಅಂಕ, 2 ಅಂಕಕ್ಕೆ 1/2 (0.50) ಅಂಕವನ್ನು ಕಳೆಯಲಾಗುವುದು.

10. ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸಂಬಂಧಿಸಿದಂತೆ ಆಯಾ ವಿಷಯಗಳಿಗೆ ಅಗತ್ಯ ಅರ್ಹತೆ ವಿವರ, ಸ್ಪರ್ಧಾತ್ಮಕ ಪರೀಕ್ಷೆಯ ವಿಷಯಗಳು, ವಿಷಯಗಳ ವಿವರ ಮತ್ತು ಸಮಾನಾಂತರ ಶಿಕ್ಷಣಾರ್ಹತೆ, ಆಯ್ಕೆ ಪ್ರಕ್ರಿಯೆ ಮತ್ತು ನೇಮಕಾತಿಯ ವಿವರ ಹಾಗೂ ಪ್ರವರ್ಗವಾರು ಮತ್ತು ವಿಷಯವಾರು ಹುದ್ದೆಗಳ ವಿವರಗಳನ್ನು ಕೆಇಎ ವೆಬ್‌ಸೈಟ್ http://kea.kar.nic.in ಗೆ ಭೇಟಿ ನೀಡಲು ಹಾಗೂ ಕರ್ನಾಟಕ ರಾಜ್ಯ ಪತ್ರ (ಗೆಜೆಟ್) ವನ್ನು ನೋಡಲು ಕೋರಿದೆ.

ಗಮನಿಸಿ:
1. ಕೇವಲ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವುದು ಮತ್ತು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಮಾತ್ರಕ್ಕೆ ಅಭ್ಯರ್ಥಿಗಳಿಗೆ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ, ನೇಮಕಾತಿಯು ಸರ್ಕಾರವು ನಿಗದಿಪಡಿಸಬಹುದಾದ ಅರ್ಹತಾ ಮಾನದಂಡಗಳಿಗೆ ಒಳಪಟ್ಟಿರುತ್ತದೆ.
2. ಮೇಲಿನ ಯಾವುದೇ ನಿಯಮಗಳು / ಕಾರ್ಯವಿಧಾನಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸ ಅಥವಾ ಅಸ್ಪಷ್ಟತೆ ಕಂಡು ಬಂದಲ್ಲಿ, ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 (ತಿದ್ದುಪಡಿಗಳು) ರಲ್ಲಿರುವಂತೆ ಅನ್ವಯಿಸುತ್ತದೆ.

ಸಹಿ/–
(ಎಸ್. ರಮ್ಯ, ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ಬೆಂ.ನ/1741/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪಂಜಾಬ್ ಕಾಂಗ್ರೆಸ್ ಬಿಕ್ಕಟ್ಟು ಶಮನದ ಸುಳಿವು: ಅಧ್ಯಕ್ಷ ಸ್ಥಾನಕ್ಕೆ ನೀಡಿದ್ದ ರಾಜೀನಾಮೆ ಹಿಂಪಡೆಯಲು ಒಪ್ಪಿಗೆ

ಸಿಧು–ಚನ್ನಿ ಚರ್ಚೆ: ರಾಜಿ ಸೂತ್ರ ಸಿದ್ಧ

ಪ್ರಜಾವಾಣಿ ವಾರ್ತೆ

ಸಭೆ ಮುಗಿಸಿ ಪಂಜಾಬ್ ಭವನದಿಂದ ಹೊರಟ ಸಿಧು —ಪಿಟಿಐ ಚಿತ್ರ

ನವದೆಹಲಿ: ಕೆಲವು ನೇಮಕಾತಿಗಳ ವಿಚಾರದಲ್ಲಿ ಕೆರಳಿ ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ನವಜೋತ್ ಸಿಂಗ್ ಸಿಧು ಅವರ ಸಿಟ್ಟು ಗುರುವಾರ ಶಮನವಾಗಿದೆ ಎನ್ನಲಾಗಿದೆ. ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಸಿಧು ಭೇಟಿಯಾಗಿದ್ದಾರೆ. ಅವರ ಕೆಲವು ಬೇಡಿಕೆಗಳನ್ನು ಮುಖ್ಯಮಂತ್ರಿ ಒಪ್ಪಿದ್ದಾರೆ ಎಂದು ತಿಳಿದು ಬಂದಿದೆ.

ಸಚಿವ ಸಂಪುಟಕ್ಕೆ ಕೆಲವರ ಸೇರ್ಪಡೆ, ಪೊಲೀಸ್ ಮಹಾನಿರ್ದೇಶಕರು ಮತ್ತು ಅಡ್ವೊಕೇಟ್ ಜನರಲ್ ನೇಮಕ ವಿಚಾರದಲ್ಲಿ ಸಿಟ್ಟು ಮಾಡಿಕೊಂಡಿದ್ದ ಸಿಧು ಅವರು ಮಂಗಳವಾರ ರಾಜೀನಾಮೆ ನೀಡಿದ್ದರು. ಅವರು ತಮ್ಮ ರಾಜೀನಾಮೆ ಹಿಂತೆಗೆದುಕೊಳ್ಳಲಿದ್ದಾರೆ ಎಂದು ಹೇಳಲಾಗಿದೆ.

ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಪಕ್ಷ ತೊರೆಯುವುದಾಗಿ ಪ್ರಕಟಿಸಿದ ದಿನವೇ ಚನ್ನಿ ಮತ್ತು ಸಿಧು ಅವರು ಭೇಟಿಯಾಗಿ ಸುಮಾರು ಎರಡು ತಾಸು ಚರ್ಚಿಸಿದರು. ಪಂಜಾಬ್ ಹೌಸ್‌ನಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸುವುದಕ್ಕಾಗಿ ಸಿಧು ಅವರು ಪಟಿಯಾಲದಿಂದ ಚಂಡೀಗಡಕ್ಕೆ ಬಂದರು.

ಸಿಧು ರಾಜೀನಾಮೆಯಿಂದ ಸೃಷ್ಟಿಯಾಗಿರುವ ಬಿಕ್ಕಟ್ಟು ಪರಿಹರಿಸುವ ಹೊಣೆಯನ್ನು ಚನ್ನಿ ಅವರಿಗೆ ಪಕ್ಷದ ವರಿಷ್ಠರು ವಹಿಸಿದ್ದರು. ಅದರಂತೆ, ಸಿಧು ಅವರನ್ನು ಮಾತುಕತೆಗೆ ಚನ್ನಿ ಆಹ್ವಾನಿಸಿದ್ದರು. ಈ ಆಹ್ವಾನದ ಜತೆಗೆ ಪಕ್ಷವೇ ಸರ್ವೋಚ್ಚ ಎಂಬುದನ್ನು ಸಿಧು ಅವರಿಗೆ ನೆನಪಿಸಿದ್ದರು.

ಎ.ಪಿ.ಎಸ್. ಡಿಯೊಲ್ ಅವರನ್ನು ಅಡ್ವೊಕೇಟ್ ಜನರಲ್ ಆಗಿ ನೇಮಿಸಿದ್ದು ಮತ್ತು ಇಕ್ಬಾಲ್ ಪ್ರೀತ್ ಸಿಂಗ್ ಸಹೋಟ ಅವರಿಗೆ ಪೊಲೀಸ್ ಮಹಾ ನಿರ್ದೇಶಕರಾಗಿ ಹೆಚ್ಚುವರಿ ಹೊಣೆ ನೀಡಿದ್ದು ಸಿಧು ಅವರ ಸಿಟ್ಟಿಗೆ ಕಾರಣವಾಗಿತ್ತು. ಹಾಗಾಗಿಯೇ, ಸಭೆಗೆ ಕೆಲ ನಿಮಿಷ ಮೊದಲು ಸಿಧು ಹೀಗೆ ಟ್ವೀಟ್ ಮಾಡಿದ್ದರು: 'ಬಾದಲ್ ಸರ್ಕಾರವಿದ್ದಾಗ ಬಿಯಾಬ್ದಿ ಪ್ರಕರಣದ ವಿಶೇಷ ತನಿಖಾ ತಂಡದ ತನಿಖಾಧಿಕಾರಿಯಾಗಿ ಸಹೋಟ ಅವರಿದ್ದರು. ಬಾದಲ್‌ಗಳನ್ನು (ಮುಖ್ಯಮಂತ್ರಿಯಾಗಿದ್ದ ಪ್ರಕಾಶ್ ಸಿಂಗ್ ಬಾದಲ್ ಕುಟುಂಬದವರು) ದೋಷಮುಕ್ತರನ್ನಾಗಿ ಮಾಡಿದ ಸಹೋಟ, ಇಬ್ಬರು ಸಿಖ್ ನಿರಪರಾಧಿ ಯುವಕರು ತಪ್ಪಿತಸ್ಥರು ಎಂದಿದ್ದರು...'

ಕಾಂಗ್ರೆಸ್ ಮುಖಂಡ ಸುನಿಲ್ ಜಾಖಡ್ ಅವರನ್ನು ಈ ಟ್ವೀಟ್ ಕೆರಳಿಸಿದೆ. ಆಗಿದ್ದೇ ಸಾಕಾಗಿದೆ. ಮುಖ್ಯಮಂತ್ರಿಯ ಅಧಿಕಾರವನ್ನು ಪದೇ ಪದೇ ಅಲ್ಲಗಳೆಯುವ ಚಾಳಿಯನ್ನು ನಿಲ್ಲಿಸಿ ಎಂದು ಅವರು ಹೇಳಿದ್ದಾರೆ.

ಚನ್ನಿ ಅವರಿಗೆ ಪಕ್ಷದ ಹೈಕಮಾಂಡ್ ಪೂರ್ಣ ಸ್ವಾತಂತ್ರ್ಯ ಕೊಟ್ಟಿದೆ. ಇದು ಸಿಧು ಅವರಿಗೆ ಇಷ್ಟ ಆಗಿಲ್ಲ. ಆದರೆ, ಸಿಧು ಅವರ ಆತುರದ ವರ್ತನೆಯನ್ನು ದೀರ್ಘ ಕಾಲ ಸಹಿಸುವುದಿಲ್ಲ ಎಂಬ ಸಂದೇಶವನ್ನೂ ಹೈಕಮಾಂಡ್ ರವಾನಿಸಿದೆ. ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಇತರ ಹೆಸರುಗಳು ಪರಿಶೀಲನೆಯೂ ಆರಂಭವಾಗಿತ್ತು.

'ಕಾಂಗ್ರೆಸ್‌ನಲ್ಲಿ ಇರುವುದಿಲ್ಲ, ಬಿಜೆಪಿ ಸೇರುವುದಿಲ್ಲ'

ನವದೆಹಲಿ: ಕಾಂಗ್ರೆಸ್‌ನಲ್ಲಿ ಇರುವುದಿಲ್ಲ, ಆದರೆ ಬಿಜೆಪಿ ಸೇರುವುದಿಲ್ಲ ಎಂದು ಪಂಜಾಬ್ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರು ಗುರುವಾರ ಹೇಳಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ ಮರುದಿನ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ. ನಾಲ್ಕು ತಿಂಗಳಲ್ಲಿ ಪಂಜಾಬ್ ವಿಧಾನಸಭೆಗೆ ಚುನಾವಣೆ ನಡೆಯಲಿದೆ.

ಕಾಂಗ್ರೆಸ್ ನಾಯಕತ್ವದ ಮೇಲೆ ಆಕ್ರೋಶ ಹೊರಹಾಕಿದ ಅಮರಿಂದರ್, ಹಿರಿಯರನ್ನು ಪಕ್ಷ ಕಡೆಗಣಿಸುತ್ತಿದ್ದು, ದನಿಯೇ ಇಲ್ಲದಂತಾಗಿದೆ. ಹೀಗಾಗಿ ಪಕ್ಷ ಹಿನ್ನಡೆ ಅನುಭವಿಸುತ್ತಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ನಾನು ರಾಜೀನಾಮೆ ನೀಡುತ್ತೇನೆ. ನಾನು ಪಕ್ಷದಲ್ಲಿ ಉಳಿಯಲಾರೆ' ಎಂದಿರುವ ಅವರು, ತಮ್ಮ ಟ್ವಿಟರ್ ಖಾತೆಯಲ್ಲಿ ಕಾಂಗ್ರೆಸ್ ಬಗೆಗಿನ ಉಲ್ಲೇಖವನ್ನು ತೆಗೆದುಹಾಕಿದ್ದಾರೆ.

'ಪಕ್ಷಕ್ಕಾಗಿ ಐದು ದಶಕಗಳಿಂದ ಕೆಲಸ ಮಾಡಿದ ನಂತರವೂ ನನ್ನ ವಿಶ್ವಾಸಾರ್ಹತೆಯನ್ನು ಅನುಮಾನಿಸುವ ಹಾಗೂ ನನ್ನನ್ನು ನಂಬದ ಪಕ್ಷದಲ್ಲಿ ಉಳಿಯುವುದರಲ್ಲಿ ಯಾವುದೇ ಅರ್ಥವಿಲ್ಲ' ಎಂದು ಅವರು ಹೇಳಿದರು.

ಅಮರಿಂದರ್ ಅವರು ಪಂಜಾಬ್ ಮುಖ್ಯಮಂತ್ರಿ ಹುದ್ದೆಗೆ ಇತ್ತೀಚೆಗೆ ರಾಜೀನಾಮೆ ನೀಡಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗಿನ 50 ನಿಮಿಷಗಳ ಸಭೆಯಲ್ಲಿ ರೈತರ ಆಂದೋಲನದ ಬಗ್ಗೆ ಅಮರಿಂದರ್ ಚರ್ಚಿಸಿದರು. ಕೃಷಿ ಕಾನೂನುಗಳನ್ನು ರದ್ದುಗೊಳಿಸಿ, ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿಪಡಿಸುವ ಕಾನೂನು ಜಾರಿಗೊಳಿಸಿ ಬಿಕ್ಕಟ್ಟು ಪರಿಹರಿಸುವಂತೆ ಒತ್ತಾಯಿಸಿದರು.

ಅಮರಿಂದರ್ ಅವರು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರನ್ನು ಭೇಟಿ ಮಾಡಿ ರಾಷ್ಟ್ರೀಯ ಭದ್ರತಾ ಸಮಸ್ಯೆಗಳನ್ನು ಚರ್ಚಿಸಿದರು. ಮಾಜಿ ಸೇನಾ ಅಧಿಕಾರಿ ಅಮರಿಂದರ್ ಅವರಿಗೆ ರಾಷ್ಟ್ರೀಯ ಭದ್ರತಾ ಸಮಸ್ಯೆಗಳ ಕುರಿತು ಹೆಚ್ಚಿನ ಕಳಕಳಿ ಇದೆ. ಅಮರಿಂದರ್ ಅವರ ಈ ಗುಣ ರಾಷ್ಟ್ರೀಯ ಭದ್ರತೆ ಕುರಿತು ಮಾತನಾಡುವ ಎನ್‌ಡಿಎ ಸರ್ಕಾರದ ಕಾರ್ಯವಿಧಾನಕ್ಕೆ ಹೋಲುತ್ತದೆ ಎಂಬ ವಿಶ್ಲೇಷಣೆ ಇದೆ.

ಸಿಧು ಅವರ ನಡೆಯನ್ನು ಟೀಕಿಸಿರುವ ಅಮರಿಂದರ್, ಅವರೊಬ್ಬ ಅಪ್ರಬುದ್ಧ ಮತ್ತು ಅಸ್ಥಿರ ವ್ಯಕ್ತಿ ಎಂದಿದ್ದಾರೆ. 'ಸಿಧು ಸ್ಥಿರ ಮನಸ್ಸಿನ ವ್ಯಕ್ತಿಯಲ್ಲ ಎಂದು ನಾನು ಪದೇ ಪದೇ ಹೇಳಿದ್ದೇನೆ. ಆತ ತಂಡದ ಆಟಗಾರನಲ್ಲ, ಆತನದ್ದು ಏಕಾಂಗಿ ವ್ಯಕ್ತಿತ್ವ. ಹೀಗಿರುವಾಗ ಪಂಜಾಬ್ ಕಾಂಗ್ರೆಸ್ ಘಟಕದ ಮುಖ್ಯಸ್ಥರಾಗಿ ಅದನ್ನು ಹೇಗೆ ನಿಭಾಯಿಸುತ್ತಾರೆ? ಪಕ್ಷವನ್ನು ಮುನ್ನಡೆಸಬೇಕಾದರೆ, ತಂಡದ ಆಟಗಾರನಾಗಿರಬೇಕು. ಆದರೆ ಸಿಧು ಆ ರೀತಿ ಇಲ್ಲ' ಎಂದು ವಿವರಿಸಿದರು.

ಹೊಸ ಪಕ್ಷ?: ಮೂಲಗಳ ಪ್ರಕಾರ, ಅಮರಿಂದರ್ ಅವರು ಹೊಸ ಪ್ರಾದೇಶಿಕ ಪಕ್ಷವನ್ನು ಸ್ಥಾಪಿಸಲಿದ್ದು, ಮುಂಬರುವ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಅದು ಮಹತ್ವದ ಪಾತ್ರ ವಹಿಸಲಿದೆ ಎನ್ನಲಾಗಿದೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್ಎಸ್ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald--Prajavani Relief Trust' ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.fnc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್ಎಸ್ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ರಾಜ್ಯದಲ್ಲಿ ಕೆಜೆಪಿ ಮತ್ತೆ ಉದಯಿಸಲಿದೆ: ಕಿಮ್ಮನೆ

ಶಿವಮೊಗ್ಗ: 'ರಾಜ್ಯದ ರಾಜಕೀಯದಲ್ಲಿ ಕೆಜೆಪಿ (ಕರ್ನಾಟಕ ಜನತಾ ಪಾರ್ಟಿ) ಮತ್ತೆ ಉದಯಿಸಲಿದೆ. ಜೆಡಿಎಸ್ ಆ ಪಕ್ಷದ ಜತೆ ಕೈಜೋಡಿಸಲಿದೆ' ಎಂದು ಕೆಪಿಸಿಸಿ ವಕ್ತಾರ, ಮಾಜಿ ಸಚಿವ ಕಿಮ್ಮನೆ ರತ್ನಾಕರ ಹೊಸ ಬಾಂಬ್ ಸಿಡಿಸಿದರು.

ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಗುರುವಾರ ನಡೆದ ಪಕ್ಷದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ಸದ್ಯದಲ್ಲೇ ಕೆಜೆಪಿ ಪುನರ್ ಸ್ಥಾಪನೆಯಾಗಲಿದೆ. ಜೆಡಿಎಸ್ ಸಹಯೋಗದಲ್ಲಿ ಸರ್ಕಾರ ರಚಿಸಲು ಸಿದ್ಧತೆ ನಡೆದಿದೆ. ತೀರ್ಥಹಳ್ಳಿ ಕ್ಷೇತ್ರದಲ್ಲಿ ಈಚೆಗೆ ಕಾಂಗ್ರೆಸ್ ಸೇರಿದ ರಾಜಕೀಯ ಅಲೆಮಾರಿಗಳು (ಅಪೆಕ್ಸ್ ಬ್ಯಾಂಕ್ ಮಾಜಿ ಅಧ್ಯಕ್ಷ ಆರ್.ಎಂ. ಮಂಜುನಾಥ ಗೌಡ ಬಣ) ಕೆಜೆಪಿ ಸೇರಲಿದ್ದಾರೆ ಎಂದು ಚರ್ಚೆಗೆ ನಾಂದಿ ಹಾಡಿದರು.

'ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕಾಂಗ್ರೆಸ್ ಮುಖಂಡರು ಆಯೋಜಿಸುವ ಕಾರ್ಯಕ್ರಮಗಳಲ್ಲಿ ಜೆಡಿಎಸ್ ಮುಖಂಡರು ಕಾಣಿಸಿಕೊಳ್ಳುತ್ತಿದ್ದಾರೆ. ಈಚೆಗೆ ನಡೆದ ಶರಾವತಿ ಮುಳುಗಡೆ ಸಂತ್ರಸ್ತರ ಪಾದಯಾತ್ರೆಯಲ್ಲಿ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಎಂ. ಶ್ರೀಕಾಂತ್ ಭಾಗಿಯಾಗಿದ್ದರು. ಬಿದರಗೋಡಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ದೇವೇಗೌಡರು, ಕುಮಾರಸ್ವಾಮಿ ಭಾವಚಿತ್ರ ಬಳಸಲಾಗಿತ್ತು. ಪಕ್ಷದ ಅಭ್ಯರ್ಥಿಗಳ ವಿರುದ್ಧ ಸ್ಪರ್ಧಿಸಿದ್ದ ಬೇರೆ ಪಕ್ಷದವರಿಗೆ ಮಣೆ ಹಾಕುವುದರ ಹಿಂದಿನ ಮರ್ಮವೇನು? ನಾನೂ ಸಭೆ ಆಯೋಜಿಸಿ, ಬೇರೆ ಪಕ್ಷದ ಮುಖಂಡರನ್ನು ಆಹ್ವಾನಿಸಿದರೆ ಸಹಿಸುವಿರಾ' ಎಂದು ಪ್ರಶ್ನಿಸಿದರು.

ಕಿಮ್ಮನೆ ಮಾತಿಗೆ ಹಲವರು ಆಕ್ಷೇಪ ವ್ಯಕ್ತಪಡಿಸಿದರು. ಕೆಲಕಾಲ ಮಾತಿನ ಚಕಮಕಿ ನಡೆಯಿತು.

'ಯಾರನ್ನೋ ಕರೆತಂದು ನನ್ನನ್ನು ರಾಜಕೀಯವಾಗಿ ಮುಗಿಸಲು ಸಾಧ್ಯವಿಲ್ಲ' ಎನ್ನುತ್ತಾ ಕಿಮ್ಮನೆ ಮಧ್ಯದಲ್ಲೇ ಸಭೆಯಿಂದ ಹೊರನಡೆದರು.

ಕಪಿಲ್ ಸಿಬಲ್ ಮನೆ ಮೇಲೆ ದಾಳಿಗೆ ಖಂಡನೆ

ಪ್ರಜಾವಾಣಿ ವಾರ್ತೆ

ಸಿಬಲ್

ನವದೆಹಲಿ: ಕಾಂಗ್ರೆಸ್ ಮುಖಂಡ ಕಪಿಲ್ ಸಿಬಲ್ ಅವರ ನಿವಾಸದ ಎದುರು ಪ್ರತಿಭಟನೆ ನಡೆಸಲು ಕುಮ್ಮಕ್ಕು ನೀಡಿದವರ ವಿರುದ್ಧ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಕ್ರಮ ತೆಗೆದುಕೊಳ್ಳಬೇಕು ಎಂದು ಪಕ್ಷದ ಜಿ-23 ನಾಯಕರು ಒತ್ತಾಯಿಸಿದ್ದಾರೆ.

ಕಪಿಲ್ ಸಿಬಲ್ ಅವರಿಗೆ ಪಕ್ಷದ ಹಲವು ನಾಯಕರು ಬೆಂಬಲ ವ್ಯಕ್ತಪಡಿಸಿದ್ದಾರೆ. ಅವರ ಮೇಲೆ ನಡೆದ ದಾಳಿಯನ್ನು ಖಂಡಿಸಿದ್ದಾರೆ.

ಪಕ್ಷಕ್ಕೆ ಪೂರ್ಣಾವಧಿ ಅಧ್ಯಕ್ಷರನ್ನು ಶೀಘ್ರವೇ ಚುನಾವಣೆ ಮೂಲಕ ಆಯ್ಕೆ ಮಾಡಬೇಕು ಎಂದು ಒತ್ತಾಯಿಸಿ ಪತ್ರ ಬರೆದಿದ್ದ ಕಾಂಗ್ರೆಸ್‌ನ 23 ಹಿರಿಯ ನಾಯಕರನ್ನು ಜಿ-23 ನಾಯಕರು ಎಂದು ಕರೆಯಲಾಗುತ್ತಿದೆ. ಅವರಲ್ಲಿ ಒಬ್ಬರಾದ ಕಪಿಲ್ ಸಿಬಲ್ ಮತ್ತು ಗುಲಾಂ ನಬಿ ಆಜಾದ್ ಅವರು ಬುಧವಾರ ಮತ್ತೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದರು. 'ಪಕ್ಷದ ಕಾರ್ಯಕಾರಿ ಸಮಿತಿಯ ಸಭೆ ಕರೆಯಿರಿ ಮತ್ತು ಅಧ್ಯಕ್ಷರ ಚುನಾವಣೆ ನಡೆಸಿ' ಎಂದು ಒತ್ತಾಯಿಸಿದ್ದರು.

ಪತ್ರ ಬರೆದ ಕೆಲವೇ ಗಂಟೆಗಳಲ್ಲಿ ಕಪಿಲ್ ಅವರ ನಿವಾಸದ ಎದುರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಕಪಿಲ್ ಅವರ ಕಾರಿನ ಮೇಲೆ ದಾಳಿ ನಡೆಸಿದ್ದರು. ಟೊಮೆಟೊ ಎಸೆದಿದ್ದರು. ಈ ವಿಚಾರವು ಪಕ್ಷದ ನಾಯಕತ್ವದ ವಿರುದ್ಧ ಜಿ-23 ನಾಯಕರು ಮತ್ತೆ ಪ್ರಶ್ನೆ ಎತ್ತಲು ಆಸ್ಪದ ಮಾಡಿಕೊಟ್ಟಿದೆ.

ಪಕ್ಷದ ಜಿ-23 ನಾಯಕರಾದ ಆನಂದ್ ಸಿಂಗ್, ಮನೀಷ್ ತಿವಾರಿ, ಶಶಿ ತರೂರ್ ಅವರು ಈ ದಾಳಿಯನ್ನು ಖಂಡಿಸಿದ್ದಾರೆ. ದಾಳಿ ಸಂಚು ರೂಪಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಆಗ್ರಹಿಸಿದ್ದಾರೆ. ಪಕ್ಷದ ಹಿರಿಯ ನಾಯಕರಾದ ಪಿ.ಚಿದಂಬರಂ ಅವರು ಕಪಿಲ್ ಸಿಬಲ್ ಅವರ ಮೇಲೆ ನಡೆದ ದಾಳಿಯನ್ನು ಖಂಡಿಸಿದ್ದಾರೆ.

ಪಕ್ಷದಲ್ಲಿ ಭಿನ್ನಾಭಿಪ್ರಾಯಗಳಿಗೆ ಬೆಲೆ ಕೊಡಬೇಕು. ಪಕ್ಷವು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿಹಿಡಿಯಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಸದ್ಯದಲ್ಲೇ ಸಿಡಬ್ಲ್ಯುಸಿ ಸಭೆ

ನವದೆಹಲಿ (ಪಿಟಿಐ): ಶೀಘ್ರದಲ್ಲೇ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆ ನಡೆಸುವುದಾಗಿ ಕಾಂಗ್ರೆಸ್ ಗುರುವಾರ ಹೇಳಿದೆ. ಕಾಂಗ್ರೆಸ್ ಒಳಗೆ ಭಿನ್ನಮತ ಮತ್ತು ಪ್ರಕ್ಷುಬ್ಧತೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕೆಲವು ಮುಖಂಡರು ಸಿಡಬ್ಲ್ಯುಸಿ ಸಭೆ ನಡೆಸಬೇಕು ಎಂದು ಆಗ್ರಹಿಸಿದ್ದರು. ಅದಾಗಿ ಒಂದೇ ದಿನಕ್ಕೆ ಕಾಂಗ್ರೆಸ್ ಈ ಹೇಳಿಕೆ ನೀಡಿದೆ.

ಈ ಕುರಿತು ಮಾಹಿತಿ ನೀಡಿರುವ ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ, 'ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಶಿಮ್ಲಾಕ್ಕೆ ಹೊರಡುವ ಮುನ್ನವೇ ಅತಿ ಶೀಘ್ರದಲ್ಲಿ ಸಿಡಬ್ಲ್ಯುಸಿ ಸಭೆ ಕರೆಯುವುದಾಗಿ ಹೇಳಿದ್ದರು. ಅದರಂತೆ ಮುಂದಿನ ದಿನಗಳಲ್ಲಿ ಸಭೆ ಕರೆಯಲಾಗುವುದು' ಎಂದಿದ್ದಾರೆ.

'ಜಿ–23' ಗುಂಪಿನ ಸದಸ್ಯರು ಮತ್ತು ಪಕ್ಷದ ಹಿರಿಯ ಮುಖಂಡರಾದ ಗಲಾಬ್ ನಬಿ ಆಜಾದ್ ಮತ್ತು ಕಪಿಲ್ ಸಿಬಲ್ ಕೂಡಲೆ ಸಭೆ ನಡೆಸಲು ಆಗ್ರಹಿಸಿದ್ದರು.

ಸಿಬಲ್ ಮತ್ತು ಇತರರ ವರ್ತನೆಗೆ ಸುರ್ಜೇವಾಲಾ ತಿರುಗೇಟು ನೀಡಿದ್ದಾರೆ. 'ಈ ಬಿಕ್ಕಟ್ಟಿನ ಸಮಯದಲ್ಲಿ ತಮ್ಮ ಮಾತು, ವರ್ತನೆಯಿಂದ ಪಕ್ಷವನ್ನು ಮತ್ತಷ್ಟು ಕುಗ್ಗಿಸುವ ಕೆಲಸವನ್ನು ಮಾಡುತ್ತಿರುವ ಕುರಿತು ಪಕ್ಷದ ನಾಯಕರು ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದಿದ್ದಾರೆ.

ಭಿನ್ನಾಭಿಪ್ರಾಯಗಳಿಗೆ ಬೆಲೆ ಕೊಡಬೇಕು ಎಂಬುದು ಪಕ್ಷದ ಸಿದ್ಧಾಂತ. ಇಂತಹ ಹೇಯ ದಾಳಿ ನಡೆಸಿದವರ ವಿರುದ್ಧ ಪಕ್ಷವು ಕ್ರಮ ತೆಗೆದುಕೊಳ್ಳಬೇಕು
ಆನಂದ್ ಶರ್ಮಾ, ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನ ಉಪನಾಯಕ

ಕಪಿಲ್ ಸಿಬಲ್ ಅವರು ನಿಜವಾದ ಕಾಂಗ್ರೆಸ್ಸಿಗ. ಅವರು ಪಕ್ಷಕ್ಕಾಗಿ ನ್ಯಾಯಾಲಯದಲ್ಲಿ ಹಲವು ಪ್ರಕರಣಗಳನ್ನು ಗೆದ್ದಿದ್ದಾರೆ. ಅವರ ಮಾತನ್ನೂ ಕೇಳಿಸಿಕೊಳ್ಳುವ ವ್ಯವಧಾನ ಇರಬೇಕು
ಶಶಿ ತರೂರ್, ಕಾಂಗ್ರೆಸ್ ಸಂಸದ

ಪಕ್ಷದ ಯಾವುದೇ ಕಾರ್ಯಕರ್ತನಿಂದ ಬಂದ ಸಲಹೆಗಳನ್ನು ಹತ್ತಿಕ್ಕುವ ಬದಲು ಸ್ವಾಗತಿಸಬೇಕು. ಸಲಹೆ ನೀಡಿದವರ ಮೇಲೆ ದಾಳಿ ನಡೆಸುವುದು ಒಪ್ಪಿತವಲ್ಲ
ಗುಲಾಂ ನಬಿ ಆಜಾದ್

ಬಹು ಮಾಧ್ಯಮ ಪ್ರಜಾವಾಣಿ

www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಾಡ್‌ಕಾಸ್ಟ್: ಈದಿನದ ವಿಶೇಷ : ಸಂಜೆ 4 **ಸಿನಿ ಮ್ಯಾಟನಿ,** ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ,** ಬೆ. 7.30 **ದಿನದ ಸೂಕ್ತಿ,** ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್,** ಬೆಳಿಗ್ಗೆ 9.30 **ಸಂಪಾದಕೀಯ,** ಬೆಳಿಗ್ಗೆ 9 **ಪ್ರಚಲಿತ**

ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಕನ್ಹಯ್ಯ ಕುಮಾರ್ ಪಕ್ಷಾಂತರ ಸಿದ್ಧಾಂತಕ್ಕೆ ಸಂದ ಸೋಲು?
ಭಾಗವಹಿಸುವವರು:ಸಂದೀಪ್ ಶಾಸ್ತ್ರಿ, ರಾಜಕೀಯ ವಿಶ್ಲೇಷಕ.
ಮುನೀರ್ ಕಾಟಿಪಳ್ಳ, ಡಿವೈಎಫ್ಐ ರಾಜ್ಯ ಅಧ್ಯಕ್ಷ.
ಮಂಜುಳಾ ನಾಯ್ಡು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ.
ಬಿ.ಆರ್.ಮಂಜುನಾಥ್, ಸಾಮಾಜಿಕ ಕಾರ್ಯಕರ್ತ

ಸಂವಾದ ಬೆಳಿಗ್ಗೆ 11ರಿಂದ 12

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಶಿಮ್ಲಾದಲ್ಲಿ ಗುರುವಾರ ಸಂಜೆ ಸುರಿದ ಮಳೆಯಿಂದಾಗಿ ಉಂಟಾದ ಭೂಕುಸಿತದಿಂದ ಬಹುಮಹಡಿ ಕಟ್ಟಡ ಕುಸಿದಿರುವುದು – ಪಿಟಿಐ ಚಿತ್ರ

ಶಿಮ್ಲಾ: ಭೂಕುಸಿತ ಉರುಳಿದ ಬಹುಮಹಡಿ ಕಟ್ಟಡ

ಶಿಮ್ಲಾ (ಪಿಟಿಐ): ಶಿಮ್ಲಾದಲ್ಲಿ ಗುರುವಾರ ಸಂಜೆ ಸುರಿದ ಮಳೆಯಿಂದಾಗಿ ಉಂಟಾದಭೂಕುಸಿತದಿಂದ ಬಹುಮಹಡಿ ಕಟ್ಟಡವೊಂದು ಕುಸಿದಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಶಿಮ್ಲಾದ ಹಾಲಿ ಪ್ಯಾಲೇಸ್ ಬಳಿಯ ಘೋಡಾ ಚೌಕಿಯಲ್ಲಿ ಸಂಜೆ 5.45ರ ಹೊತ್ತಿಗೆ ಈ ಘಟನೆ ನಡೆದಿದೆ. ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ರಾಜ್ಯ ವಿಪತ್ತು ನಿರ್ವಹಣಾ ನಿರ್ದೇಶಕ ಸುದೇಶ್ ಕುಮಾರ್ ಮೊಖ್ತಾ ತಿಳಿಸಿದರು.

16 ನ್ಯಾಯಮೂರ್ತಿಗಳ ನೇಮಕ: ಕೊಲಿಜಿಯಂ ಅನುಮೋದನೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಕೊಲಿಜಿಯಂ, ವಿವಿಧ ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳಾಗಿ ನೇಮಿಸಲು 16 ಹೆಸರುಗಳಿಗೆ ಅನುಮೋದನೆ ನೀಡಿದೆ.

ಬಾಂಬೆ, ಗುಜರಾತ್, ಒಡಿಶಾ ಹಾಗೂ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ಗಳಿಗೆ ಈ ನ್ಯಾಯಮೂರ್ತಿಗಳ ನೇಮಕವಾಗಲಿದೆ. ಬುಧವಾರ ನಡೆದ ಕೊಲಿಜಿಯಂನ ಸಭೆಯು ಆರು ಮಂದಿ ನ್ಯಾಯಾಂಗ ಅಧಿಕಾರಿಗಳು, 10 ವಕೀಲರನ್ನು ನ್ಯಾಯಮೂರ್ತಿಗಳಾಗಿ ನಿಯೋಜಿಸಬೇಕು ಎಂಬ ಪ್ರಸ್ತಾವಕ್ಕೆ ಅನುಮೋದನೆ ನೀಡಿತು.

ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನ ಮಾಹಿತಿ ಅನುಸಾರ, ನ್ಯಾಯಾಂಗ ಅಧಿಕಾರಿಗಳಾದ ಎ.ಎಲ್.ಪಾನ್ಸಾರೆ, ಎಸ್.ಎಸ್.ಮೋರೆ, ಯು.ಎಸ್.ಜೋಶಿ ಫಾಲ್ಕೆ ಮತ್ತು ಬಿ.ಪಿ.ದೇಶಪಾಂಡೆ. ಇವರನ್ನು ಬಾಂಬೆ ಹೈಕೋರ್ಟ್‌ಗೆ ನೇಮಿಸಲು ಕೊಲಿಜಿಯಂ ಶಿಫಾರಸು ಮಾಡಿದೆ.

ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಇಂದು

ಹಿರಿಯರಿಗೆ ಗೌರವ: ಸಚಿವ ಹಾಲಪ್ಪ

ಬೆಂಗಳೂರು: 'ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಮಾಡಿರುವ ಹಿರಿಯರನ್ನು ವಿಶ್ವ ಹಿರಿಯ ನಾಗರಿಕರ ದಿನಾಚರಣೆಯಂದು ಗೌರವಿಸಲಾಗುವುದು' ಎಂದು ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಸಾಧಕರಿಗೆ ₹ 1 ಲಕ್ಷ ನಗದು ಪುರಸ್ಕಾರ, ನೆನಪಿನ ಕಾಣಿಕೆ, ಪ್ರಮಾಣಪತ್ರ ನೀಡಿ ಗೌರವಿಸಲಾಗುವುದು' ಎಂದರು.

'ಎಲ್ಲ ವಯೋಮಾನದವರಿಗೆ ಡಿಜಿಟಲ್ ಸಮಾನತೆ' ಎಂಬ ಘೋಷವಾಕ್ಯದೊಂದಿಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಶುಕ್ರವಾರ (ಅ.1) ನಡೆಯಲಿರುವ ಕಾರ್ಯಕ್ರಮದಲ್ಲಿ ಹಿರಿಯರನ್ನು ಮುಖ್ಯಮಂತ್ರಿ ಸನ್ಮಾನಿಸಲಿದ್ದಾರೆ' ಎಂದರು.

ವಿಶೇಷ ಸಾಧನೆ: '75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ನೆನಪಿಗಾಗಿ ಈ ಬಾರಿ ರಾಜ್ಯದ 4 ಕಂದಾಯ ವಿಭಾಗಗಳಲ್ಲಿ ಒಬ್ಬರಂತೆ ನಾಲ್ವರು ವಿಶೇಷ ಸಾಧಕರನ್ನು ಸನ್ಮಾನಿಸಲಾಗುವುದು. ಬೆಂಗಳೂರು ವಿಭಾಗದಿಂದ ಕನ್ನಡ ಗಣಕ ಪರಿಷತ್ – ವಾಗಾಕ್ಷರ ತಂತ್ರಜ್ಞಾನ ಅಭಿವೃದ್ಧಿಗೆ ಸಹಕರಿಸಿದ ಜಿ.ಎನ್. ನರಸಿಂಹಮೂರ್ತಿ, ಮೈಸೂರು ವಿಭಾಗದಿಂದ ಹಾಸನದ ನೃತ್ಯ- ಸಂಗೀತ ಕಲಾವಿದೆ ಉಷಾ ದಾತಾರ, ಬೆಳಗಾವಿ ವಿಭಾಗದಿಂದ ಬಾಗಲಕೋಟೆ ಜಿಲ್ಲೆ ಜಮಖಂಡಿಯ ಪಶುಶುಶ್ರೂಷಕರಾದ ಡಾ. ಹನುಮಂತಪ್ಪ ಭೀಮಪ್ಪ ಗಲಗಲಿ ಹಾಗೂ ಕಲಬುರ್ಗಿ ವಿಭಾಗದಿಂದ ಕೊಪ್ಪಳ ಜಿಲ್ಲೆಯ ತೊಗಲುಗೊಂಬೆ ಕಲಾವಿದೆ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ ಅವರನ್ನು ಸಹ ಸನ್ಮಾನಿಸಲಾಗುವುದು' ಎಂದರು.

'ರಾಜ್ಯದಾದ್ಯಂತ ಹಿರಿಯರಿಗೆ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಿ ಜಿಲ್ಲೆಯಲ್ಲಿ ವಿಜೇತರಾದವರನ್ನು ಆಯ್ಕೆ ಮಾಡಿ ಈ ಸಮಾರಂಭದಲ್ಲಿ ಹಿಂದೆ ಬಹುಮಾನ ವಿತರಿಸಲಾಗುತ್ತಿತ್ತು. ಆದರೆ, ಕೋವಿಡ್ ಕಾರಣ ಈ ವರ್ಷ ಜಿಲ್ಲಾ ಮಟ್ಟದಲ್ಲಿ ಬಹುಮಾನಗಳನ್ನು ವಿತರಿಸಲಾಗುತ್ತದೆ. ಬೆಂಗಳೂರು ನಗರ ಜಿಲ್ಲೆಯ ವಿಜೇತರಿಗೆ ಮಾತ್ರ ಈ ಕಾರ್ಯಕ್ರಮದಲ್ಲಿ ಬಹುಮಾನಗಳನ್ನು ವಿತರಿಸಲಾಗುವುದು' ಎಂದರು.

'ಕೋವಿಡ್ ಮಾರ್ಗಸೂಚಿ ಅನ್ವಯ ಕಾರ್ಯಕ್ರಮ ನಡೆಯಲಿದೆ. ಖುದ್ದಾಗಿ ಭಾಗವಹಿಸಲು ಸಾಧ್ಯವಾಗದವರು https://youtu.be/MohoAjzCoek ಲಿಂಕ್‌ನಲ್ಲಿ ವೀಕ್ಷಿಸಬಹುದು' ಎಂದು ತಿಳಿಸಿದರು.

'ಹಿರಿಯ ನಾಗರಿಕರ ಸಹಾಯವಾಣಿ'

'ಕಾರ್ಯಕ್ರಮದಲ್ಲಿ 'ರಾಷ್ಟ್ರೀಯ ಹಿರಿಯ ನಾಗರಿಕರ ಸಹಾಯವಾಣಿ'ಯನ್ನು (ಟೋಲ್ ಫ್ರೀ ಸಂಖ್ಯೆ– 14567) ಲೋಕಾರ್ಪಣೆ ಮಾಡಲಾಗುವುದು. ಹಿರಿಯ ನಾಗರಿಕರಿಗೆ 'ಮನೆ ಆರೈಕೆ' ಸೇವೆ (ಹೋಮ್‌ಕೇರ್ ಸರ್ವೀಸ್), ಆಸ್ಪತ್ರೆ ಮತ್ತು ಹಿರಿಯರ ಆರೈಕೆಯ ಸೌಲಭ್ಯ, ವೃದ್ಧಾಶ್ರಮ ಮತ್ತು ಕೋವಿಡ್ ಕುರಿತ ಮಾಹಿತಿ ಸೇರಿದಂತೆ ವಿವಿಧ ಮಾಹಿತಿ ಈ ಸಹಾಯವಾಣಿ ಮೂಲಕ ಲಭ್ಯವಾಗಲಿದೆ' ಎಂದು ಹಾಲಪ್ಪ ಆಚಾರ್ ತಿಳಿಸಿದರು.

'ಹಿರಿಯ ನಾಗರಿಕ ಪ್ರಶಸ್ತಿ'ಗೆ ಆಯ್ಕೆಯಾದವರು

ಹೆಸರು	ಕ್ಷೇತ್ರ
ಗುರುಪಾದಪ್ಪ ಅಂಚೇರ (ಹಾವೇರಿ)	ಶಿಕ್ಷಣ
ಕರವೀರಪ್ರಭು ಕ್ಯಾಲಕೊಂಡ (ಬಾಗಲಕೋಟೆ)	ಸಾಹಿತ್ಯ
ಶರಣಪ್ಪ ಗೋನಾಳ (ರಾಯಚೂರು)	ಕಲೆ
ಎಸ್. ಜನಾರ್ದನ (ಉಡುಪಿ)	ಸಮಾಜ ಸೇವೆ
ಅಂಚೆ ಅಶ್ವತ್ಥ (ಕೋಲಾರ)	ಕ್ರೀಡೆ
ಬಿ. ಕಿಷನ್ ರಾವ್ (ಕೊಪ್ಪಳ)	ಕಾನೂನು
ಬಿ.ಆರ್.ಅಂಬೇಡ್ಕರ್‌ಕಲ್ಚರಲ್‌ಆ್ಯಂಡ್‌ವೆಲ್ಫೇರ್‌ಸೊಸೈಟಿ (ಬೀದರ್)	ಸಂಸ್ಥೆ

ಸಂಜೆ 5 ಗಂಟೆವರೆಗೆ ಶೇ 53.32ರಷ್ಟು ಮತದಾನ

ಭವಾನಿಪುರ ಉಪಚುನಾವಣೆ ಶಾಂತ

ಕೋಲ್ಕತ್ತ: ವಿರಳ ಘರ್ಷಣೆಗಳನ್ನು ಹೊರತುಪಡಿಸಿದರೆ, ಭವಾನಿಪುರ ಕ್ಷೇತ್ರದ ಉಪಚುನಾವಣೆ ಶಾಂತಿಯುತವಾಗಿತ್ತು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತೃಣಮೂಲ ಕಾಂಗ್ರೆಸ್‌ನಿಂದ (ಟಿಎಂಸಿ) ಕಣಕ್ಕಿಳಿದಿರುವುದರಿಂದ, ಈ ಚುನಾವಣೆ ಗಮನ ಸೆಳೆದಿದೆ.

ವಾರ್ಡ್ ಸಂಖ್ಯೆ 72ರ ಮತಗಟ್ಟೆಯಲ್ಲಿ ಮತದಾನಕ್ಕೆ ಟಿಎಂಸಿ ತಡೆಯೊಡ್ಡಿದೆ ಎಂದು ಭವಾನಿಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಿಯಾಂಕಾ ಟಿಬ್ರೆವಾಲ್ ಆರೋಪಿಸಿದ್ದಾರೆ. ಟಿಎಂಸಿ ನಾಯಕರು ಮತ್ತು ಸಚಿವರು ಮತದಾರರ ಮೇಲೆ ಪ್ರಭಾವ ಬೀರಲು ಪ್ರಯತ್ನಿಸಿದ್ದಾರೆ ಎಂದು ಬಿಜೆಪಿ ಪ್ರತಿಪಾದಿಸಿದೆ. ಇಬ್ಬರು ಸಚಿವರ ವಿರುದ್ಧ ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ಸಲ್ಲಿಸಿದೆ.

'ರಸ್ತೆಬದಿಯ ಚಹಾ ಅಂಗಡಿಯನ್ನು ಮತದಾರರ ಮೇಲೆ ಪ್ರಭಾವ ಬೀರುವ ಪ್ರಯತ್ನವೆಂದು ಹೇಗೆ ಪರಿಗಣಿಸಬಹುದು? ಭವಾನಿಪುರದಲ್ಲಿ ಸೋಲಿನ ಸುಳಿವು ಬಿಜೆಪಿಗೆ ಸಿಕ್ಕಿದೆ. ಅದಕ್ಕಾಗಿಯೇ ಮುಖಂಡರು ಇಂತಹ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ' ಎಂದು ಹಕೀಮ್ ಎಂಬುವರು ಹೇಳಿದ್ದಾರೆ.

ಕೋಲ್ಕತ್ತದ ಶರತ್ ಬೋಸ್ ರಸ್ತೆಯಲ್ಲಿ ಬಿಜೆಪಿ ನಾಯಕ ಕಲ್ಯಾಣ್ ಚೌಬೆ ಅವರ ವಾಹನವನ್ನು ಅಪರಿಚಿತ ಗುಂಪು ಧ್ವಂಸಗೊಳಿಸಿದೆ.

ಭವಾನಿಪುರದಲ್ಲಿ ಓಡಾಡಲು ಚುನಾವಣಾ ಆಯೋಗದಿಂದ ನೋಂದಣಿ ಆಗಿರದ ವಾಹನದಲ್ಲಿ ಏಕೆ ಪ್ರಯಾಣಿಸುತ್ತಿದ್ದೀರಿ ಮತ್ತು ಉದ್ದೇಶವೇನು ಎಂಬ ಪ್ರಶ್ನೆಗೆ ಉತ್ತರಿಸಿದ ಚೌಬೆ, ತಾವು ಭವಾನಿಪುರದ ಹಿಂದೂಸ್ತಾನಿ ಅವಾಮಿ ಮೋರ್ಚಾದ ಅಭ್ಯರ್ಥಿಯ ಚುನಾವಣಾ ಏಜೆಂಟ್ ಎಂದು ಹೇಳಿದ್ದಾರೆ.

ಆಯೋಗವು ಘಟನೆಯ ವರದಿಯನ್ನು ಕೇಳಿದೆ. ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾದ ದೃಶ್ಯಗಳನ್ನು ಪರಿಶೀಲಿಸಿದ ಆಯೋಗವು, ಚೌಬೆ ಅವರ ವಾಹನ ಮತ್ತು ಬೈಕ್ ನಡುವೆ ಡಿಕ್ಕಿಯಾಗಿ ಈ ಘಟನೆ ಸಂಭವಿಸಿದೆ ಎಂದಿದ್ದು, ಇದರಲ್ಲಿ ರಾಜಕೀಯ ಇದೆ ಎಂಬುದನ್ನು ತಳ್ಳಿಹಾಕಿದೆ.

ಆಯುಷ್‌ನಿಂದ 'ಬಾಲ ರಕ್ಷಾ ಕಿಟ್'

ನವದೆಹಲಿ (ಪಿಟಿಐ): ಕೋವಿಡ್ 3ನೇ ಅಲೆಯು ಎದುರಾಗಬಹುದು ಎಂಬ ಭೀತಿಯ ನಡುವೆಯೇ, ಅಖಿಲ ಭಾರತ ಆಯುರ್ವೇದ ಸಂಸ್ಥೆಯು (ಎಐಐಎ) 16 ವರ್ಷದೊಳಗಿನ ಮಕ್ಕಳಿಗಾಗಿ, ದೇಹದಲ್ಲಿ ನಿರೋಧಕ ಶಕ್ತಿಯನ್ನು ಹೆಚ್ಚಿಸಲಿರುವ 'ಬಾಲ ರಕ್ಷಾ ಕಿಟ್' ಅನ್ನು ಅಭಿವೃದ್ಧಿಪಡಿಸಿದೆ. ಆಯುಷ್ ಸಚಿವಾಲಯದಡಿ ಎಐಐಎ ಕಾರ್ಯನಿರ್ವಹಿಸಲಿದೆ' ಎಂದು ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿಜ್ಞಾ ಪಂಚಾಯತ್ ಕೊನೇ ಕಾರ್ಯಕ್ರಮದಲ್ಲಿ ಬಸವ ಜಯಮೃತ್ಯುಂಜಯ ಶ್ರೀ

'2ಎ ನೀಡಿದರೆ ಸನ್ಮಾನ, ಇಲ್ಲದಿದ್ದರೆ ಸತ್ಯಾಗ್ರಹ'

ಪ್ರಜಾವಾಣಿ ವಾರ್ತೆ

ದಾವಣಗೆರೆಯಲ್ಲಿ ಪ್ರತಿಜ್ಞಾ ಪಂಚಾಯತ್ ಸಮಾವೇಶದ ಅಂಗವಾಗಿ ಗುರುವಾರ ನಡೆದ ಮೆರವಣಿಗೆಯಲ್ಲಿ ಕೂಡಲಸಂಗಮದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಭಕ್ತರೆಡೆಗೆ ಹೂವು ಚೆಲ್ಲಿದರು.

ದಾವಣಗೆರೆ: 'ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡಿದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಸನ್ಮಾನಿಸಲಾಗುವುದು. ಇಲ್ಲದೇ ಇದ್ದರೆ ಸತ್ಯಾಗ್ರಹ ಮುಂದುವರಿಸಲಾಗುವುದು' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಎಚ್ಚರಿಸಿದರು.

ನಗರದ ತ್ರಿಶೂಲ್ ಕಲಾ ಭವನದಲ್ಲಿ ಗುರುವಾರ ನಡೆದ ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್ ಕೊನೇ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪಂಚಮಸಾಲಿ ಸಮಾಜ ಎಲ್ಲರನ್ನೂ ನಂಬುವ ಸಮಾಜ. ಹಿಂದೆ ಬಿ.ಎಸ್. ಯಡಿಯೂರಪ್ಪ ಅವರನ್ನು ನಂಬಿತ್ತು. ಅವರು ಕೈಕೊಟ್ಟರು. ಈಗ ಬಸವರಾಜ ಬೊಮ್ಮಾಯಿ ಅವರನ್ನು ನಂಬಿದ್ದೇವೆ. ಪಂಚಮಸಾಲಿ, ಗೌಡ ಲಿಂಗಾಯತ, ಮಲೇಗೌಡ, ದೀಕ್ಷಾ ಲಿಂಗಾಯತರನ್ನು ಒಳಗೊಂಡ ಈ ಸಮಾಜಕ್ಕೆ 2ಎ ನೀಡಬೇಕು. ಅ.1ರಂದು ಬೆಂಗಳೂರಿನಲ್ಲಿ ಜೆ.ಎಚ್. ಪಟೇಲ್ ಜನ್ಮದಿನಾಚರಣೆ, ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲಿ ಮುಖ್ಯಮಂತ್ರಿ ಅಥವಾ ಅವರ ಪ್ರತಿನಿಧಿಗಳು ಬಂದು ಮೀಸಲಾತಿ ಬಗ್ಗೆ ಸ್ಪಷ್ಟಪಡಿಸಬೇಕು' ಎಂದರು. '2ಎ ಮೀಸಲಾತಿ ನೀಡಿದರೆ ಮುಖ್ಯಮಂತ್ರಿ ಅವರನ್ನು ಕಲ್ಲುಸಕ್ಕರೆಯಲ್ಲಿ ತುಲಾಭಾರ ಮಾಡಿ ಸನ್ಮಾನಿಸಲಾಗುವುದು. ಜತೆಗೆ ಕಿತ್ತೂರು ರಾಣಿ ಚನ್ನಮ್ಮರ ಫೋಟೊ ಜತೆಗೆ ಬೊಮ್ಮಾಯಿ ಅವರ ಫೋಟೊ ಇಟ್ಟು ಗೌರವಿಸಲಾಗುವುದು' ಎಂದರು.

'ಇಂದೇ ಘೋಷಣೆ ಕಷ್ಟ'

'ಮುಖ್ಯಮಂತ್ರಿ ಜತೆಗೆ ಸಂಪರ್ಕದಲ್ಲಿದ್ದೇನೆ. ಅ.1ರಂದೇ ಮೀಸಲಾತಿ ಘೋಷಣೆ ಆಗದು. ಹಿಂದುಳಿದ ವರ್ಗಗಳ ಆಯೋಗಕ್ಕೆ ಈ ಬಗ್ಗೆ ಪತ್ರ ಬರೆದಿದ್ದಾರೆ. ಈ ಬಗ್ಗೆ ಅವರು ವರದಿ ನೀಡಬೇಕು. ಬಳಿಕ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳಲು ಸಾಧ್ಯ' ಎಂದು ಶಾಸಕ ಅರವಿಂದ ಬೆಲ್ಲದ ತಿಳಿಸಿದರು.

ನಿರಂತರವಾಗಿ ಹೆದ್ದಾರಿ ತಡೆದು ಪ್ರತಿಭಟನೆ

'ಕಾಯ್ದೆ ಜಾರಿ ಹೊಣೆ ಕಾರ್ಯಾಂಗದ್ದು'

ನವದೆಹಲಿ (ಪಿಟಿಐ): ಹೆದ್ದಾರಿಗಳನ್ನು ಶಾಶ್ವತವಾಗಿ ಹೇಗೆ ತಡೆಯುವುದು ಸಾಧ್ಯ ಎಂದು ಆಶ್ಚರ್ಯ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಕಾಯ್ದೆಗಳನ್ನು ಜಾರಿಗೊಳಿಸುವುದು ಕಾರ್ಯಾಂಗದ ಹೊಣೆಗಾರಿಕೆ ಎಂದು ಹೇಳಿದೆ.

ಕೇಂದ್ರದ ಮೂರು ಕೃಷಿ ತಿದ್ದುಪಡಿ ಕಾಯ್ದೆಗಳನ್ನು ವಿರೋಧಿಸಿ ರೈತರು, ದೆಹಲಿಗೆ ಸಂಪರ್ಕ ಕಲ್ಪಿಸುವ ಹೆದ್ದಾರಿಗಳಲ್ಲಿ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿರುವುದನ್ನು ಉಲ್ಲೇಖಿಸಿ ಈ ಮಾತು ಹೇಳಿದೆ.

ಇಲ್ಲಿನ ದೆಹಲಿ–ಉತ್ತರ ಪ್ರದೇಶದ ಗಡಿಯಲ್ಲಿ ಹೆದ್ದಾರಿ ತಡೆಗಳನ್ನು ತೆರವುಗೊಳಿಸುವ ಸಂಬಂಧ ಅರ್ಜಿ ಸಲ್ಲಿಸಲು, ರೈತ ಸಂಘಟನೆಗಳನ್ನೂ ಪಾರ್ಟಿಯಾಗಿ ಹೆಸರಿಸಲು ಸುಪ್ರೀಂ ಕೋರ್ಟ್ ಕೇಂದ್ರಕ್ಕೆ ಅವಕಾಶ ಕಲ್ಪಿಸಿತು.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಎಂ.ಎಂ.ಸುಂದರೇಶ್ ಅವರಿದ್ದ ಪೀಠವು, ಸಮಸ್ಯೆಗಳಿಗೆ ಪರಿಹಾರವನ್ನು ನ್ಯಾಯಾಂಗ ವೇದಿಕೆ, ಪ್ರತಿಭಟನೆ ಅಥವಾ ಸಂಸದೀಯ ಕಲಾಪದ ಮೂಲಕ ಪಡೆಯಬಹುದು. ಆದರೆ, ಹೆದ್ದಾರಿ ತಡೆ ನಿರಂತರವಾಗಿ ಹೇಗೆ ಆಗುತ್ತದೆ. ಇದಕ್ಕೆ ಕೊನೆ ಎಲ್ಲಿ? ಎಂದೂ ಪ್ರಶ್ನಿಸಿತು.

ನೊಯ್ಡಾ ನಿವಾಸಿ ಮೋನಿಕಾ ಅಗರವಾಲ್ ಅವರು, ಹೆದ್ದಾರಿ ತಡೆಗಳನ್ನು ತೆರವುಗೊಳಿಸಲು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿತು. ಮೊದಲು ದೆಹಲಿ ತಲುಪಲು 20 ನಿಮಿಷ ಬೇಕಿತ್ತು. ಈಗ 2 ಗಂಟೆ ಬೇಕು. ಯು.ಪಿ. ಗೇಟ್ ಮತ್ತು ದೆಹಲಿ ಬಾರ್ಡರ್‌ನಲ್ಲಿ ಪ್ರತಿಭಟನೆಯಿಂದ ತೊಂದರೆಯಾಗಿದೆ ಎಂದು ಅರ್ಜಿದಾರರು ಹೇಳಿದ್ದರು.

ಸರ್ಕಾರ ಒಟ್ಟಾಗಿ ಈ ಕುರಿತು ಏನು ಮಾಡುತ್ತಿದೆ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಅವರನ್ನು ಸರ್ಕಾರ ಪ್ರಶ್ನಿಸಿತು. ಸರ್ಕಾರವು ಪ್ರತಿಭಟನನಿರತ ರೈತರ ಜೊತೆಗೆ ಮಾತುಕತೆ ನಡೆಸಿದೆ. ಅದರ ವಿವರಗಳನ್ನು ಪ್ರಮಾಣಪತ್ರದಲ್ಲಿ ನಮೂದಿಸಿದೆ ಎಂದರು.

‘ಸಲಗ’ ದುನಿಯಾ ವಿಜಯ್ ಹೊಸ ವರ್ಷನ್!



ದುನಿಯಾ ವಿಜಯ್

ನಟ ದುನಿಯಾ ವಿಜಯ್ ಇದೇ ಮೊದಲ ಬಾರಿಗೆ ಆ್ಯಕ್ಷನ್ ಕಟ್ ಹೇಳಿರುವ, ಶ್ರೀಕಾಂತ್ ಕೆ.ಪಿ. ನಿರ್ಮಾಣದ ಸಿನಿಮಾ ‘ಸಲಗ’ ಅ.14ಕ್ಕೆ ತೆರೆ ಕಾಣುತ್ತಿದೆ. ಈ ಸಂದರ್ಭದಲ್ಲಿ ನಿರ್ದೇಶನದ ಜವಾಬ್ದಾರಿ ಹಾಗೂ ಚಿತ್ರದ ಬಗ್ಗೆ ವಿವರಿಸುತ್ತಾ ‘ಪ್ರಜಾವಾಣಿ’ ಸಿನಿಮಾ ಪುರವಣಿ ಜೊತೆ ವಿಜಯ್ ಮಾತಿಗಿಳಿದರು...

ಅಭಿಲಾಷ್ ಪಿ.ಎಸ್.

- **ಕೋವಿಡ್‌ನಿಂದ ‘ಸಲಗ’ದ ರಿಲೀಸ್ ಗಜಪ್ರಸವದಂತೆ ಆಯಿತಲ್ಲವೇ?**

ಹೌದು. ಇಡೀ ಜಗತ್ತಿನಲ್ಲಿ ಎಲ್ಲರೂ ಅನುಭವಿಸಿದ ಸಂಕಷ್ಟ ಇದು. ಒಂದೂವರೆ ವರ್ಷ ಮೌನವಿತ್ತು. ನಾವು ಬದುಕುತ್ತೇವೆಯೋ ಇಲ್ಲವೋ ಎನ್ನುವುದೇ ಮನಸ್ಸಿನಲ್ಲಿ ಎಲ್ಲರಿಗೂ ಕಾಡುತ್ತಿತ್ತು. ಚಿತ್ರ ಬಿಡುಗಡೆಗೆ ಕಾದು ಕಾದು ಮಂಕಾಗಿದ್ದೆವು. ಇದೀಗ ಕೋವಿಡ್ ಪ್ರಕರಣಗಳು ಇಳಿಕೆಯಾದ ಮೇಲೆ, ಲಸಿಕೆಯನ್ನು ಪಡೆದ ಮೇಲೆ ಹೊಸ ಆಸೆ ಚಿಗುರಿದೆ. ಎಲ್ಲರಿಗೂ ಈಗ ಹೊಸ ಜನ್ಮ ಸಿಕ್ಕಿದೆ. ಸಿದ್ಧವಾಗಿದ್ದ ‘ಸಲಗ’ದ ಮೆರವಣಿಗೆ ಈಗ ಹೊರಟಿದೆ. ದೊಡ್ಡ ಮೆರವಣಿಗೆ ಅದ್ದೂರಿಯಾಗಿ ನಡೆಯಲಿದೆ.

- **ದಸರಾಗೆ ಜನರಿಗೆ ಡಬಲ್ ಧಮಾಕ. ಎರಡೆರಡು ಸ್ಟಾರ್ ನಟರ ಚಿತ್ರ ಒಂದೇ ದಿನ ಬಿಡುಗಡೆಯ ಬಗ್ಗೆ ಏನನ್ನುತ್ತೀರಿ?**

ಒಂದೂವರೆ ವರ್ಷ ಹೆಚ್ಚಿನ ಸಿನಿಮಾ ಬಿಡುಗಡೆ ಆಗಿಲ್ಲ. ದಸರಾ ಸಂದರ್ಭದಲ್ಲಿ ಕನ್ನಡದ ಒಂದೊಂದೇ ಸಿನಿಮಾ ಬಿಡುಗಡೆಯಾಗಿ ಪರಭಾಷಾ ಚಿತ್ರಗಳಿದ್ದರೂ ಜನ ಕನ್ನಡ ಸಿನಿಮಾ ನೋಡುತ್ತಿದ್ದರು. ರಜೆ ಇರುವುದರಿಂದ ಎರಡೂ ಸಿನಿಮಾಗಳನ್ನೂ ಜನ ನೋಡುತ್ತಾರೆ. ಈ ನಂಬಿಕೆ ಇದೆ. ಇದನ್ನು ಪ್ರೀತಿಯಿಂದ ಆಹ್ವಾನಿಸುತ್ತೇನೆ. ಖಂಡಿತವಾಗಿಯೂ ಆವತ್ತು ಹಬ್ಬದ ವಾತಾವರಣ ಚಿತ್ರಮಂದಿರಗಳಲ್ಲಿ ಇರಲಿದೆ.

- **ನಟನೆಯ ಜೊತೆಗೆ ನಿರ್ದೇಶನಕ್ಕೆ ಇಳಿದ ಕಾರಣವೇನು?**

ಕೆಲವೊಮ್ಮೆ ನಮ್ಮ ಕೆಲಸವನ್ನು ನಾವೇ ಮಾಡಬೇಕು. ಇನ್ನೊಬ್ಬರ ಮೇಲೆ ಅವಲಂಬಿತವಾಗಬಾರದು.

ಹೀಗಾಗಿ ‘ಸಲಗ’ದ ನಿರ್ದೇಶನ ಕೈಗೆತ್ತಿಕೊಂಡೆ. ಕೆಲವೊಮ್ಮೆ ಮೈಮರೆಯುತ್ತೇವೆ. ನಮ್ಮ ಕೆಲಸ ನಾವೇ ಮಾಡಿದರೆ ಎಲ್ಲವೂ ಸರಿಹೋಗುತ್ತದೆ. ಒಳ್ಳೆಯ ತಂಡ ನನಗೆ ದೊರಕಿತ್ತು. ನನ್ನ ಸಹಾಯಕ ನಿರ್ದೇಶಕ ಅಭಿ ಬಹಳ ಪ್ರಾಮಾಣಿಕ. ಚಿತ್ರತಂಡದ ಬೆಂಬಲ ನನಗೆ ಸದಾ ಇತ್ತು.

- **ವಿಭಿನ್ನ ಪಾತ್ರಗಳ ಪ್ರಯೋಗ ಮಾಡಿದಿರಿ. ನಂತರ ಇಂತಹ ಪಾತ್ರಗಳನ್ನು ಹುಡುಕಿಕೊಂಡು ಹೋಗಿಲ್ಲವೇ?**

‘ಜಾನಿ ಜಾನಿ ಯಸ್ ಪಾಪ...’ ಪ್ರಯತ್ನ ಮಾಡಿದೆವು. ಇದು ಅಂತಹ ಯಶಸ್ಸು ಕಾಣಲಿಲ್ಲ. ನಮ್ಮಲ್ಲಿ ಸತ್ಯವಾಗಲೂ ಬರವಣಿಗೆಗಾರರ ಕೊರತೆ ಇದೆ. ನಮ್ಮ ಕ್ಷೇತ್ರದಲ್ಲಿ ಮತ್ತಷ್ಟು ವಿದ್ಯಾವಂತರು ಬೇಕು. ಅವಿದ್ಯಾವಂತರೂ ಬಂದು ಗೆಲ್ಲಬಹುದು ಎಂದು ತುಂಬಾ ಜನ ಬಂದುಬಿಟ್ಟಿದ್ದಾರೆ. ವಿದ್ಯೆಯ ಜೊತೆಗೆ ಅನುಭವವೂ ಮಾತನಾಡಿಸುತ್ತದೆ. ವೀಣೆ ಇದ್ದರೆ ಸಾಲದು ಅದನ್ನು ನುಡಿಸಲು ವಿದ್ಯೆ ಬೇಕು. ಅಣ್ಣಾವ್ರು ಅಭಿನಯದಲ್ಲೇ ಯಾರೂ ಮಾಡಲಾಗದ ಅನುಭವ ಪಡೆದಿದ್ದರು. ಇದೂ ಒಂದು ರೀತಿಯ ಶಿಕ್ಷಣ. ಹೀಗಾಗಿ ಅವರು ಲೀಲಾಜಾಲವಾಗಿ ಪಾತ್ರ ಮಾಡುತ್ತಿದ್ದರು. ತಮಿಳು, ಮಲಯಾಳಂ ಸಿನಿಮಾ ಇಂಡಸ್ಟ್ರಿಯನ್ನು ಯಾಕೆ ಇಷ್ಟು ಹೊಗಳುತ್ತಿದ್ದೀರಾ ಎಂದರೆ ಅಲ್ಲಿ ಬರಹಗಾರರಿಗೆ ತುಂಬಾ ಬೆಲೆ ಇದೆ. ಇದು ಕನ್ನಡದಲ್ಲಿ ಇಲ್ಲ.

- **ಡಾಲಿ ಧನಂಜಯ್ ಅವರಿಗೆ ‘ಸಾಮ್ರಾಟ್’ ಪಾತ್ರ ನೀಡುವ ಹಿಂದಿನ ಸ್ಫೂರ್ತಿ ಯಾರು?**

ಡಾಲಿ ಧನಂಜಯ್ ಅವರು ಪೊಲೀಸ್ ಪಾತ್ರವನ್ನೂ ಮಾಡಬಹುದು. ಕೆಲವೊಮ್ಮೆ ಮುಳ್ಳನ್ನು ಮುಳ್ಳಿಂದಲೇ ತೆಗೆಯಬೇಕು. ಡಾಲಿ ಅವರ ಪಾತ್ರ ಪೊಲೀಸ್ ಆದರೆ ಇನ್ನೊಬ್ಬ ಎದುರಾಳಿ ರೌಡಿ ಆದರೆ ಮುಳ್ಳು ಮುಳ್ಳಲ್ಲೇ ತೆಗೆಯಲು ಸಾಧ್ಯ. ಹೀಗಾಗಿ ಧನಂಜಯ್ ಅವರನ್ನೇ ಆಯ್ಕೆ ಮಾಡಿದೆವು. ಕಥೆ ಬರೆಯುವಾಗಲೇ ಈ ಪಾತ್ರಕ್ಕೆ ಧನಂಜಯ್ ಅವರು ಸೂಕ್ತ ಎಂದು ನಾನು ನಿರ್ಧರಿಸಿದ್ದೆ. ‘ಸಾಮ್ರಾಟ್’ ಪಾತ್ರ ಬರೆಯುವಾಗ ನನಗೆ ಅಣ್ಣಾಮಲೈ, ರವಿ ಡಿ.ಚನ್ನಣ್ಣನವರ ಹಾಗೂ ಪ್ರಾಮಾಣಿಕವಾಗಿರುವ ಇಂತಹ ದಕ್ಷ ಅಧಿಕಾರಿಗಳೇ ಸ್ಫೂರ್ತಿ. ಇವರಿಂದ ನಾನು ಬಹಳ ಸ್ಫೂರ್ತಿ ಪಡೆದಿದ್ದೇನೆ.

- **ದುನಿಯಾ ವಿಜಯ್‌ಗೂ ಸಲಗ ವಿಜಯ್‌ಗೂ ಇರುವ ವ್ಯತ್ಯಾಸ?**

ದುನಿಯಾದಲ್ಲೂ ಶಿವಲಿಂಗ ಒಬ್ಬನೇ ಬರುತ್ತಾನೆ. ಇಲ್ಲೂ ಸಲಗ ಒಬ್ಬನೇ ಇರುತ್ತಾನೆ. ಶಿವಲಿಂಗ ತಾಯಿಯ ಗೋರಿ ಕಟ್ಟಿಸಲು ಬಂದ. ನಂತರದಲ್ಲಿ ಅವನೊಬ್ಬನೇ ನಿರ್ಧರಿಸಿ ನಡೆಸಿದ ಜೀವನದಲ್ಲಿ ಏನೇನೋ ನಡೆದು ಹೋಯಿತು. ‘ಸಲಗ’ನ ಕಥೆ ಚಿತ್ರಮಂದಿರದಲ್ಲೇ ಜನ ನೋಡಬೇಕು. ನನ್ನ 14 ವರ್ಷಗಳ ಸಿನಿ ಪಯಣದಲ್ಲಿ ‘ಸಲಗ’ವನ್ನು ದುನಿಯಾ ವಿಜಯ್ ಹೊಸ ವರ್ಷನ್ ಎನ್ನಬಹುದು.

- **ಅಮ್ಮನಿಗೆ ಸಲಗ ಎಷ್ಟು ಹತ್ತಿರವಾಗಿತ್ತು?**

ತಾಯಿ ಇದ್ದಿದ್ದರೆ ಖಂಡಿತಾ ಖುಷಿಪಡುತ್ತಿದ್ದಳು. ಪ್ರತಿಕ್ಷಣ ಮಕ್ಕಳ ಏಳಿಗೆ ಬಯಸುವುದು ತಾಯಿ. ನನ್ನ ಅಮ್ಮನೂ ಒಬ್ಬ ತಪಸ್ವಿ. ಇಲ್ಲ ಇವತ್ತು. ಅವರಿಗೆ ಸಿನಿಮಾ ನೋಡಲಾಗುವುದಿಲ್ಲ. ಈ ಬಗ್ಗೆ ನನಗೂ ಬೇಸರವಿದೆ. ಚಿತ್ರ ನೋಡುವ ಎಲ್ಲ ತಾಯಂದಿರ ಆಶೀರ್ವಾದ ನನಗೆ ಸಾಕು.

- **ಟಿಣಿಂಗ ಮಿಣಿಂಗ ಟಿಷ್ಯಾ... ಬಗ್ಗೆ ಹೇಳಿ?**

ಪ್ರೊಮೋಷನಲ್ ಹಾಡಿಗೆ ಏನಾದರೂ ವಿಭಿನ್ನವಾಗಿ ಮಾಡಬೇಕು ಎನ್ನುವ ಹುಡುಕಾಟ ನನ್ನದಾಗಿತ್ತು. ಏನಾದರೂ ಹೊಸದು ಮಾಡಬೇಕು ಎನ್ನುವ ಆಸೆ. ನಾನು ನಿರ್ದೇಶನ ಮಾಡುತ್ತೇನೆ ಎನ್ನುವುದೇ ವಿಶೇಷ. ಹೀಗಿರುವಾಗ ಈ ಹಾಡೂ ಮತ್ತಷ್ಟು ವಿಶೇಷವಾಗಿರಬೇಕು ಅಲ್ಲವೇ. ಹೀಗೆ ಹುಟ್ಟಿಕೊಂಡಿದ್ದು ಟಿಣಿಂಗ ಮಿಣಿಂಗ ಟಿಷ್ಯಾ...

- **ಜೀವನದಲ್ಲಿ, ಸಿನಿಮಾದಲ್ಲೂ ಏರಿಳಿತ ಇದ್ದೇ ಇರುತ್ತದೆ. ವಿಜಯ್ ಅವರು ಇದನ್ನು ಎದುರಿಸಿದ್ದು ಹೇಗೆ?**

ಒಮ್ಮೆ ನೀವು ಬೆಳೆಯುತ್ತಿದ್ದೀರಿ ಎಂದು ತಿಳಿದಕೂಡಲೇ ಹೊಟ್ಟೆಕಿಚ್ಚು ಪಡೋ ಜನ ಬಹಳಷ್ಟು ಇರುತ್ತಾರೆ. ಕಾಲೆಳೆಯುವರು ಹುಟ್ಟಿಕೊಳ್ಳುತ್ತಾರೆ. ಹೊಗಳುವವರಿಗೂ ಎರಡು ಮುಖ ಇರುತ್ತದೆ. ನಮ್ಮ ತಪ್ಪಿಲ್ಲ ಎಂದಿದ್ದರೆ ಎಂಥ ನೋವಿಂದಲೂ ಹೊರಬರಬಹುದು. ನನ್ನ ಜೀವನದ ಯಾವುದೇ ವಿವಾದಗಳಿರಲಿ, ನಾನು ತಪ್ಪು ಮಾಡಿದ್ದರೆ ಮಾತ್ರ ತಲೆಬಗ್ಗಿಸುತ್ತೇನೆ. ನಾನು ತಪ್ಪೇ ಮಾಡದಿದ್ದರೆ ದೇವರಿಗೂ ತಲೆಬಗ್ಗಿಸಲ್ಲ. ಕೋಗಿಲೆ ಕಪ್ಪಗಿದ್ದರೂ ಒಳ್ಳೆಯ ಧ್ವನಿ ಇದೆ ಅಲ್ಲವೇ. ಅದೇ ರೀತಿ ಮುಖಕ್ಕೆ ಮಸಿ ಬಳಿಯಬಹುದೇ ಹೊರತು ಕೆಲಸಕ್ಕಲ್ಲ. ಕೆಲಸ ಒಂದು ದಿನ ಮಾತನಾಡುತ್ತದೆ. ಮಾನಸಿಕವಾಗಿ ನಾನು ಅಷ್ಟು ಸದೃಢವಾಗಿರುತ್ತೇನೆ.

ಅಪ್ಪ ಬೆಂಗಳೂರಿಗೆ ವಲಸೆ ಬಂದು ದಿನಕ್ಕೆ ನೂರಿನ್ನೂರು ರೂಪಾಯಿ ಸಂಪಾದನೆ ಮಾಡಿಕೊಂಡು, 25 ರೂಪಾಯಿ ಮನೆ ಬಾಡಿಗೆ ಕಟ್ಟಿಕೊಂಡು ಜೀವನ ನಡೆಸುತ್ತಿದ್ದ ಕುಟುಂಬ ನಮ್ಮದು. ಎಲ್ಲರೂ ಬೆಂಗಳೂರಿಗೆ ವಲಸಿಗರೇ. ಜೀವನಕ್ಕೋಸ್ಕರ ಇಲ್ಲಿಗೆ ಬಂದಿದ್ದೇವೆ. ಸಿನಿಮಾ ಕ್ಷೇತ್ರಕ್ಕೆ ಇಳಿಯಲು ಇಚ್ಛಿಸುವ ಯುವಜನತೆ ಕೇವಲ ಅದೃಷ್ಟದ ಮೇಲೆ ನಂಬಿಕೆ ಇಡಬಾರದು. ಇದೊಂದು ಸುಳಿ. ಗುರಿ ತಲುಪಲು ಕಠಿಣ ಶ್ರಮ ಬೇಕು. ❖

ನೆಟ್‌ಫ್ಲಿಕ್ಸ್‌ನಲ್ಲಿ ಬಂದ್ರು ಬೆಂಗಳೂರು ಪೊಲೀಸರು

ಸಂತೋಷ ಜಿಗಳಿಕೊಪ್ಪ

‘ತಾಯಿಯನ್ನು ಕೊಂದ ಮಗಳು’, ‘ಬ್ಯಾಗ್‌ನಲ್ಲಿ ಮೃತದೇಹ’, ‘ಮಗು ಅಪಹರಣ’, ‘ರಕ್ಷಿಸಿಕೊಳ್ಳಲು ಸಾವು!’ ಇಂಥ ಹಲವು ಅಪರಾಧ ಪ್ರಕರಣಗಳೇ ಈ ಸರಣಿಯ ಶೀರ್ಷಿಕೆಗಳು. ಬೆಂಗಳೂರು ಪೊಲೀಸರು ಪ್ರಕರಣ ಭೇದಿಸುವ ಕಥಾನಕ ಈಗ ವೆಬ್ ಸರಣಿಯಾಗಿ ಮೂಡಿಬಂದಿದೆ. ನೈಜ ಘಟನೆಗಳು ಮತ್ತು ನೈಜ ಚಿತ್ರೀಕರಣ ಒಳಗೊಂಡಿದೆ. ‘ನೆಟ್‌ಫ್ಲಿಕ್ಸ್’ನಲ್ಲಿ ಈ ಸರಣಿ ಪ್ರಸಾರವಾಗುತ್ತಿದೆ.

ಒಟಿಟಿ

ಪೊಲೀಸರ ನೈಜ ತನಿಖೆಯನ್ನು ಆಧರಿಸಿ ‘ನೆಟ್‌ಫ್ಲಿಕ್ಸ್’ ಒಟಿಟಿ ವೇದಿಕೆಯಲ್ಲಿ ‘ಕ್ರೈಂ ಸ್ಟೋರಿಸ್; ಇಂಡಿಯಾ ಡಿಟೆಕ್ಟಿವ್ಸ್’ ಹೆಸರಿನಲ್ಲಿ ವಿಡಿಯೊ ಸರಣಿ ಆರಂಭವಾಗಿದೆ. ಅಪರಾಧ ನಡೆದ ಸ್ಥಳದ ಸೂಕ್ಷ್ಮ ಪರಿಶೀಲನೆ, ಸುಳಿವು ಬೆನ್ನತ್ತಿ ಆರೋಪಿಗಳ ಹೆಜ್ಜೆ ಗುರುತು ಪತ್ತೆ ಹಚ್ಚುವ ಚಾಕಚಕ್ಯತೆ ಹಾಗೂ ತನಿಖೆ ಪೂರ್ಣಗೊಳಿಸಿ ನೊಂದವರಿಗೆ ನ್ಯಾಯ ಒದಗಿಸಿದ ಪೊಲೀಸರ ಸಾರ್ಥಕತೆಯನ್ನು ವಿಡಿಯೊದಲ್ಲಿ ಸೆರೆ ಹಿಡಿಯಲಾಗಿದೆ.

ಹೆಚ್ಚು ಸುದ್ದಿಯಾಗಿದ್ದ ಅಪರಾಧ ಪ್ರಕರಣಗಳನ್ನು ಆಯ್ದುಕೊಂಡು ವಿಡಿಯೊ ನಿರ್ಮಿಸಲಾಗಿದೆ. ತನಿಖೆಯ ಪ್ರತಿಯೊಂದು ಮಜಲುಗಳನ್ನು ಪೊಲೀಸರ ಜೊತೆಯಲ್ಲೇ ಹಿಂಬಾಲಿಸಿ ವಿಭಿನ್ನವಾಗಿ ಕ್ಯಾಮೆರಾದಲ್ಲಿ ಚಿತ್ರೀಕರಿಸಲಾಗಿದೆ. ಪ್ರತಿಯೊಂದು ಪ್ರಕರಣದ ತನಿಖೆಯೂ ತೆರೆಮೇಲೆ ರೋಚಕವಾಗಿ ಮೂಡಿಬಂದಿದೆ.

ಘಟನೆ ಸಂಭವಿಸಿದ ದಿನದಿಂದ ತನಿಖೆ ಮುಗಿಯುವವರೆಗಿನ ಪ್ರತಿ ಸಂದರ್ಭಗಳನ್ನೂ ವಿಡಿಯೊದಲ್ಲಿ ತೋರಿಸುವಲ್ಲಿ ನೆಟ್‌ಫ್ಲಿಕ್ಸ್ ತಂಡ ಯಶಸ್ವಿಯಾಗಿದೆ. ವಿಡಿಯೊ ನೋಡುತ್ತ ಹೋದಂತೆ, ಕುತೂಹಲ ಹೆಚ್ಚುತ್ತದೆ.

ಐಪಿಎಸ್ ಅಧಿಕಾರಿಗಳಾದ ಎಂ.ಎನ್. ಅನುಚೇತ್ (ಸದ್ಯ ಬೆಂಗಳೂರು ಕೇಂದ್ರ ವಿಭಾಗದ ಡಿಸಿಪಿ), ಶಶಿಕುಮಾರ್ (ಸದ್ಯ ಮಂಗಳೂರು ಕಮಿಷನರ್), ಎಸಿಪಿ ಮನೋಜ್ ಕುಮಾರ್, ಇನ್‌ಸ್ಪೆಕ್ಟರ್ ಲೋಹಿತ್, ಪಿಎಸ್‌ಐ ಪ್ರತಾಪ್, ಮಹಿಳಾ ಪಿಎಸ್‌ಐ ಲತಾ ಮಹೇಶ್ ಹಾಗೂ ಇತರರು, ತನಿಖೆ ಅನುಭವಗಳನ್ನು ತೆರೆಮೇಲೆ ಬಿಚ್ಚಿಟ್ಟಿದ್ದಾರೆ.

ಎನ್. ಅಮಿತ್ ಮತ್ತು ಜಾಕ್ ರ್‍ಯಾಪ್ಲಿಂಗ್ ಈ ಸರಣಿಯ ನಿರ್ದೇಶಕರು.

ಕೆಲ ಪ್ರಕರಣಗಳ ತನಿಖೆ ನಡೆಸುವಾಗ ಪೊಲೀಸರು ಅನುಭವಿಸುವ ನೋವು, ಸಂಕಟ, ಭಾವೋದ್ವೇಗ ವಿಡಿಯೊದಲ್ಲಿ ಕಾಣಿಸಿದೆ. ಇನ್‌ಸ್ಪೆಕ್ಟರ್ ಲೋಹಿತ್ ಅವರು ಅಪರಾಧ ಘಟನೆಯನ್ನು ನೆನೆದು ಕಣ್ಣೀರು ಹಾಕಿರುವುದು ಪೊಲೀಸರ ಒಳಮನಸ್ಸಿನ ಮಾನವೀಯ ಮುಖವನ್ನು ನೋಡುಗರಿಗೆ ಪರಿಚಯಿಸಿದೆ.

ಅಪರಾಧ ನಡೆದ ಕೂಡಲೇ ಪೊಲೀಸರ ತನಿಖೆ ಹೇಗೆ ? ಪೊಲೀಸರ ಮೇಲೆ ಒತ್ತಡ ಎಷ್ಟಿರುತ್ತದೆ ? ದೋಷಾರೋಪ ಪಟ್ಟಿ ಸಲ್ಲಿಸುವವರೆಗೆ ನಡೆಯುವ ಪ್ರಕ್ರಿಯೆ ಏನು ? ಎಂಬ ಸಂಗತಿಯನ್ನೂ ವಿಡಿಯೊದಲ್ಲಿ ಎಳೆ ಎಳೆಯಾಗಿ ತೋರಿಸಲಾಗಿದೆ.

ಕನ್ನಡ, ಹಿಂದಿ, ತಮಿಳು, ತೆಲುಗು, ಇಂಗ್ಲಿಷ್ ಭಾಷೆಯಲ್ಲಿ ಈ ವಿಡಿಯೊ ನೋಡಲು ಅವಕಾಶವಿದೆ.

ವಿಡಿಯೊ ಟ್ರೈಲರ್ ಲಿಂಕ್: https://bit.ly/3zR88rr ❖

ಸರಿಗಮಪದಲ್ಲಿ 40 ವಾದ್ಯ ವೈವಿಧ್ಯ



ಹಂಸಲೇಖ

ವಿಜಯ್ ಪ್ರಕಾಶ್

ಅರ್ಜುನ್ ಜನ್ಯ

ಕಿರುತೆರೆ

ಝೀ ಕನ್ನಡ ವಾಹಿನಿಯ ಜನಪ್ರಿಯ ಸಂಗೀತ ಕಾರ್ಯಕ್ರಮ ಸರಿಗಮಪದಲ್ಲಿ 40 ಬಗೆಯ ವಾದ್ಯ ವೈವಿಧ್ಯ (ಸಿಂಫೋನಿ) ಪರಿಚಯಿಸಲಾಗಿದೆ ಎಂದಿದೆ ಈ ಕಾರ್ಯಕ್ರಮದ ನಿರ್ಮಾಣ ತಂಡ.

‘ಕನ್ನಡ ಟಿವಿ ವಾಹಿನಿಗಳ ರಿಯಾಲಿಟಿ ಷೋಗಳಲ್ಲೇ ಮೊದಲ ಪ್ರಯೋಗ ಇದು. ಸಂಗೀತ ಹಾಗೂ ಮನೋರಂಜನೆಯ ಗುಣಮಟ್ಟ ಹೆಚ್ಚಿಸಲು ಈ ಹೊಸ ಪ್ರಯೋಗ ನೆರವಾಗಲಿದೆ’ ಎಂದಿದೆ ವಾಹಿನಿ.

‘ಕರ್ನಾಟಕದಲ್ಲಿ ಹಾಡುಗಳ ಹಬ್ಬ ಶುರುವಾಗಿದೆ. ಸಂಸ್ಕೃತಿ, ಮನೋರಂಜನೆ ಮತ್ತು ಭಾವನಾತ್ಮಕವಾದ ಶ್ರೀಮಂತ ವೇದಿಕೆ ಸರಿಗಮಪ ಚಾಂಪಿಯನ್ ಶಿಪ್. ಅದ್ವಿತೀಯ ಪ್ರತಿಭೆಗಳ ಈ ಸ್ವರ ಸಮರದ ಕಾರ್ಯಕ್ರಮವಿದು’ ಎಂಬುದು ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಅವರ ಬಣ್ಣನೆ.

‘ತೀರ್ಪುಗಾರರಾಗಿ 36 ಹಾಡುಗಾರರನ್ನು 6 ತಂಡಗಳಾಗಿ ವಿಂಗಡಿಸುವುದು ಸವಾಲಾಗಿತ್ತು. ಹಂಸಲೇಖ ಅವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಿಭಾಯಿಸಿದ್ದೇವೆ’ ಎಂದು ಅರ್ಜುನ್ ಜನ್ಯ ಹೇಳಿದ್ದಾರೆ. ವಿಜಯ್ ಪ್ರಕಾಶ್ ಕೂಡಾ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆರು ಮಂದಿ ಮಾರ್ಗದರ್ಶಕರು, ಖ್ಯಾತ ಸಂಗೀತ ನಿರ್ದೇಶಕರಾದ ಹಂಸಲೇಖ, ಅರ್ಜುನ್ ಜನ್ಯ ಮತ್ತು ವಿಜಯ್ ಪ್ರಕಾಶ್ ಅವರು ತೀರ್ಪುಗಾರರಾಗಿದ್ದಾರೆ. ಅನುಶ್ರೀ ಅವರು ಕಾರ್ಯಕ್ರಮದ ನಿರೂಪಕಿ. ಪ್ರತಿ ಶನಿವಾರ ಹಾಗೂ ಭಾನುವಾರ ಸಂಜೆ 7.30ಕ್ಕೆ ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿದೆ. ❖

ಗಾಂಧೀಜಿ ಬಾಲ್ಯದ ಬಯೋಪಿಕ್

‘ಮೋಹನದಾಸ’ ಚಿತ್ರದಲ್ಲಿ ದತ್ತಣ್ಣ

ಇಂದು ತೆರೆಗೆ

ಖ್ಯಾತ ನಿರ್ದೇಶಕ ಪಿ.ಶೇಷಾದ್ರಿ ತಮ್ಮ 20 ವರ್ಷಗಳ ಸಿನಿಮಾ ಪಯಣದಲ್ಲಿ ಇದೇ ಮೊದಲ ಬಾರಿಗೆ ಬಯೋಪಿಕ್ ಒಂದನ್ನು ನಿರ್ದೇಶಿಸಿದ್ದಾರೆ. ಮಹಾತ್ಮ ಗಾಂಧಿ ಅವರ ಬಾಲ್ಯವನ್ನು ತೆರೆಯ ಮೇಲೆ ತಂದಿದ್ದಾರೆ ಶೇಷಾದ್ರಿ. ‘ಮೋಹನದಾಸ’ ಅವರ 12ನೇ ಸಿನಿಮಾ ಇದಾಗಿದ್ದು, ಕನ್ನಡ, ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಚಿತ್ರವು ಇಂದು ರಾಜ್ಯದಾದ್ಯಂತ ಬಿಡುಗಡೆಯಾಗಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶೇಷಾದ್ರಿ, ‘ಎಂಟು ವರ್ಷಗಳ ಹಿಂದೆಯೇ ಈ ಸಿನಿಮಾದ ಕಥೆ ಬರೆಯುವಾಗ ಅದಕ್ಕೆ ‘ಪಾಪುಗಾಂಧಿ’ ಎಂದು ಹೆಸರು ಇರಿಸಿದ್ದೆ. ಬೊಳುವಾರು ಅವರು ಬರೆದ ‘ಪಾಪುಗಾಂಧಿ ಬಾಪುಗಾಂಧಿ ಆದ ಕತೆ’ ಪುಸ್ತಕವೇ ಇದಕ್ಕೆ ಆಧಾರ. ಇಲ್ಲಿಯವರೆಗೆ ಗಾಂಧೀಜಿಯವರನ್ನು ಕುರಿತು ಎರಡು ಪ್ರಮುಖ ಚಲನಚಿತ್ರಗಳು ಬಂದಿವೆ. ಆದರೆ ಯಾರೂ ಅವರ ಬಾಲ್ಯವನ್ನು ಕುರಿತು ಚಿತ್ರವನ್ನೇಕೆ ಮಾಡಲಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿತ್ತು. ಅದೇ ಈ ಚಿತ್ರಕ್ಕೆ ಪ್ರೇರಣೆ’ ಎಂದು ಹೇಳಿದರು.



ಪಿ.ಶೇಷಾದ್ರಿ

‘ವಿಚಿತ್ರವೆಂದರೆ ಗಾಂಧಿ ಅವರು ತಮ್ಮ ಆತ್ಮಕಥೆಯಲ್ಲಿ ತಮ್ಮ ಬಾಲ್ಯದ ಬಗ್ಗೆ ಹೇಳಿರುವುದು ಕೇವಲ 30 ಪುಟಗಳಲ್ಲಿ ಮಾತ್ರ. ಇವತ್ತಿನ ಬಹುತೇಕ ಮಕ್ಕಳಿಗೆ ಗಾಂಧಿ ಎಂದರೆ ಅಕ್ಟೋಬರ್ 2ರಂದು ಬರುವ ಗಾಂಧಿ ಜಯಂತಿ ಮತ್ತೊಂದು ದಿನ ರಜೆ ಅಷ್ಟೆ. ಹರೆಯದವರಿಗೆ ಎಂ.ಜಿ.ರೋಡ್! ಸಾಮಾನ್ಯ ಮಗುವೂ ಮಹಾತ್ಮನೆಂದು ಕರೆಸಿಕೊಳ್ಳಲು ಹೇಗೆ ಬದುಕಿ ಬಾಳಬೇಕು ಎಂಬುವುದನ್ನು ಗಾಂಧೀಜಿ ಅವರ ಬಾಲ್ಯದ ಕೆಲವು ಘಟನೆಗಳನ್ನು ಆಧರಿಸಿ ಈ ಚಿತ್ರವನ್ನು ರೂಪಿಸಲಾಗಿದೆ. ಇದು ಪ್ರಪಂಚದ ಎಲ್ಲ ಮಕ್ಕಳಿಗೂ ಮಾಡಿದ ಸಿನಿಮಾ’ ಎಂದು ವಿವರಿಸಿದರು.

ಈ ಚಿತ್ರದಲ್ಲಿ ಮೋಹನದಾಸ ಪಾತ್ರದಲ್ಲಿ ಸಮರ್ಥ್ ಹೊಂಬಾಳ್ ನಟಿಸಿದ್ದು, ದತ್ತಣ್ಣ, ಶೃತಿ, ಅನಂತ್ ಮಹಾದೇವನ್, ಪರಂಸ್ವಾಮಿ ಸೇರಿದಂತೆ ಕರ್ನಾಟಕ, ಮುಂಬೈ ಹಾಗೂ ಗುಜರಾತ್‌ನ ಖ್ಯಾತ ಕಲಾವಿದರ ದಂಡೇ ಇದೆ. ಪ್ರವೀಣ್ ಗೋಡ್ಖಿಂಡಿ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಮಿತ್ರಚಿತ್ರವು ಈ ಚಿತ್ರವನ್ನು ನಿರ್ಮಾಣ ಮಾಡಿದೆ. ಗಾಂಧೀಜಿ ಜನ್ಮಸ್ಥಳ ಪೋರಬಂದರ್, ರಾಜ್‌ಕೋಟ್‌ನಲ್ಲಿ 19ನೇ ಶತಮಾನಕ್ಕೆ ತಕ್ಕಂತೆ ಸೆಟ್‌ಗಳನ್ನು ನಿರ್ಮಿಸಿ ಚಿತ್ರದ ಚಿತ್ರೀಕರಣ ನಡೆಸಿದೆ. ❖

ಅಪ್ಪನ ಸಿನಿಮಾಕ್ಕೆ ನಿರ್ದೇಶನ: ಜಗ್ಗೇಶ್ ಪುತ್ರನ ಅಭಿಲಾಷೆ

ಇಂದು ತೆರೆಗೆ

ಅಪ್ಪ ಜಗ್ಗೇಶ್ ಅವರಿಗಾಗಿ ಸಿನಿಮಾ ನಿರ್ದೇಶನ ಮಾಡುತ್ತಾರಂತೆ ಪುತ್ರ ಗುರುರಾಜ್. ‘ಕಾಗೆಮೊಟ್ಟೆ’ ಚಿತ್ರದ ಟ್ರೈಲರ್ ಪ್ರದರ್ಶನ ಸಂದರ್ಭದಲ್ಲಿ ಅವರು ಈ ವಿಚಾರ ಹಂಚಿಕೊಂಡರು. ಇಂದು (ಅ.1) ‘ ಕಾಗೆಮೊಟ್ಟೆ’ ತೆರೆಗೆ ಬರುತ್ತಿದೆ.

‘ಕಾಗೆಮೊಟ್ಟೆ’ ತೀರಾ ಕಚ್ಚಾ ಮಾದರಿಯ ಕಥಾಹಂದರದ ಆ್ಯಕ್ಷನ್ ಸಿನಿಮಾ. ಪ್ರೇಕ್ಷಕನಿಗೆ ಇಷ್ಟವಾಗುತ್ತದೆ ಎಂದಿರುವ ಗುರುರಾಜ್, ‘ಒಂದು ಕಥೆ ಬರೆದಿದ್ದೇನೆ. ಅದಕ್ಕೆ ಅಪ್ಪನನ್ನೇ ಹಾಕಿಕೊಂಡು ಆ ಚಿತ್ರವನ್ನು ನಾನೇ ನಿರ್ದೇಶನ ಮಾಡುತ್ತೇನೆ. ಮುಂದಿನ ಜೂನ್ ವೇಳೆಗೆ ಸಿನಿಮಾ ಸೆಟ್ಟೇರಲಿದೆ’ ಎಂದರು.

ಜಗ್ಗೇಶ್

ಮಗನ ಮಾತಿಗೆ ಪ್ರತಿಕ್ರಿಯಿಸಿದ ಜಗ್ಗೇಶ್, ‘ಹೌದು. ಗುರು ನನಗೆ ಕತೆ ಹೇಳಿದಾಗ ನಾನು ದಂಗಾಗಿಬಿಟ್ಟೆ. ತುಂಬಾ ಚೆನ್ನಾಗಿದೆ. ಆದರೆ, ನನಗೆ ಒಳ್ಳೊಳ್ಳೆಯ ಡೈಲಾಗ್ಸ್ ಬೇಕು ಎಂದು ತಾಕೀತು ಮಾಡಿದ್ದೇನೆ. ಸ್ಕ್ರಿಪ್ಟ್‌ನ್ನು ಚೆನ್ನಾಗಿ ಮಾಡಬೇಕು. ಆಗ ನಾನು ಅಭಿನಯಿಸುತ್ತೇನೆ’ ಎಂದು ಮಗನ ಬಗ್ಗೆ ಹೆಮ್ಮೆಯ ಮಾತುಗಳನ್ನಾಡಿದರು.

‘ನನ್ನ ಮಗನಿಗೆ ಬುಧಾದಿತ್ಯ ಯೋಗ ಇದೆ. ಎರಡೂ ಗ್ರಹಗಳು ಒಟ್ಟಿಗೇ ಸೇರಿರುವ ಯೋಗ ಬರುವುದು ಅಪರೂಪ. ಅದು ಗುರುರಾಜನಿಗೆ ಇದೆ. ಹಾಗಾಗಿ ಅವನ ಕೆಲಸಗಳೆಲ್ಲವೂ ಯಶಸ್ವಿಯಾಗುತ್ತವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು. ‘ಅವನಿಗೆ ಬೇರೆ ಭಾಷೆಗಳಲ್ಲೂ ಅವಕಾಶಗಳು ಬಂದಿವೆ. ಆದರೆ ಅತ್ತ ಹೋಗದಂತೆ ನಾನೇ ತಡೆದಿದ್ದೆ. ನಾನು ಹಾಗೆ ಮಾಡಬಾರದಿತ್ತು’ ಎಂದು ಬೇಸರಿಸಿದರು ಜಗ್ಗೇಶ್.

‘ಕಾಗೆಮೊಟ್ಟೆ’ ಚಿತ್ರದ ನಿರ್ದೇಶಕ ಚಂದ್ರಹಾಸ ಮಾತನಾಡಿ, ‘ಚಿತ್ರವು ನೈಜತೆಗೆ ಹತ್ತಿರ ಇರುವಂತೆ ಸಹಜವಾದ ಸನ್ನಿವೇಶಗಳಲ್ಲಿ ಚಿತ್ರಿಸಿದ್ದೇವೆ. ಪ್ರೇಕ್ಷಕರು ಸ್ವೀಕರಿಸುತ್ತಾರೆ ಎಂಬ ಭರವಸೆ ಇದೆ’ ಎಂದರು. ❖

ಗುರುರಾಜ್ ಜಗ್ಗೇಶ್

‘ಲವ್ ಮಾಡ್ತಿದ್ದೆ, ಅದನ್ನೇ ಸಿನಿಮಾ ಮಾಡಿದೆ’

ಸಿನಿ ಸಂಕ್ಷಿಪ್ತ

ನಿಶ್ವಿಕಾ ನಾಯ್ಡು, ಡಾರ್ಲಿಂಗ್ ಕೃಷ್ಣ ಹಾಗೂ ಮೇಘ ಶೆಟ್ಟಿ

ರೊಮ್ಯಾಂಟಿಕ್ ಕಥೆಗಳು ಇತ್ತೀಚೆಗೆ ಯಾಕೋ ನಟ ಡಾರ್ಲಿಂಗ್ ಕೃಷ್ಣ ಅವರ ಮನೆಯ ಕದವನ್ನು ಹೆಚ್ಚು ತಟ್ಟುತ್ತಿವೆ. ಲವ್ ಮಾಕ್ಟೇಲ್ ಬಳಿಕ ಇದೇ ರೀತಿಯ ಕಥಾಹಂದರ ಹೊಂದಿರುವ ಸಾಲು ಸಾಲು ಚಿತ್ರಗಳಲ್ಲಿ ಅವರು ನಟಿಸುತ್ತಿದ್ದಾರೆ. ಇದೀಗ ಶಿವತೇಜಸ್ ನಿರ್ದೇಶನದ ರೊಮ್ಯಾಂಟಿಕ್ ಸಿನಿಮಾ ‘ದಿಲ್‌ಪಸಂದ್’ ಸವಿಯಲು ಹೊರಟಿದ್ದಾರೆ ಡಾರ್ಲಿಂಗ್ ಕೃಷ್ಣ.

ಅ.4ರಿಂದ ಚಿತ್ರದ ಚಿತ್ರೀಕರಣ ಆರಂಭವಾಗಲಿದ್ದು, ಸಿಐಡಿ ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ.ಚನ್ನಣ್ಣವರ ಅವರು ಚಿತ್ರದ ಶೀರ್ಷಿಕೆ ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಡಾರ್ಲಿಂಗ್ ಕೃಷ್ಣ, ‘ನನಗೆ ಪೊಲೀಸ್ ಇಲಾಖೆ ಮೇಲೆ ಬಹಳ ಪ್ರೀತಿ. ಏಕೆಂದರೆ ನನ್ನ ತಂದೆ ಇದೇ ಇಲಾಖೆಯಲ್ಲಿದ್ದರು. ನನಗೆ ಐಪಿಎಸ್ ಮಾಡು ಎಂದು ಒತ್ತಡ ಹಾಕುತ್ತಿದ್ದರು. ನನಗೆ ಓದಲು ಇಷ್ಟವಿಲ್ಲದ ಕಾರಣ ಸಿನಿಮಾಗೆ ಬಂದೆ. ಲೈಫ್‌ನಲ್ಲಿ ಲವ್ ಮಾಡಿಕೊಂಡು ಇದ್ದೆ. ಕೊನೆಗೆ ಅದನ್ನೇ ಸಿನಿಮಾ ಮಾಡಿದೆ. ಮಿಲನಾ ನನ್ನ ಜೀವನಕ್ಕೆ ಬಂದ ಮೇಲೆ ಆಗಿದ್ದ ತಿಳಿವಳಿಕೆಗಳನ್ನು ಸಿನಿಮಾ ಮಾಡಿದೆ. ‘ದಿಲ್‌ಪಸಂದ್’ ಇಡೀ ಕಥೆ ಕೇಳುವಾಗ ಮುಖದ ತುಂಬಾ ನಗುವಿತ್ತು. ಒಳ್ಳೆಯ ಸಿನಿಮಾ ಕೊಡುವ ಪ್ರಯತ್ನ ನಮ್ಮದು’ ಎಂದರು.

‘ನನಗೆ ದಿಲ್‌ಪಸಂದ್ ಸ್ವೀಟ್ ಎಂದರೆ ಇಷ್ಟ. ಇನ್ನು ಈ ಕಥೆ ಕೇಳುವಾಗಲೇ ನಾನು ಬಹಳ ಹುಮ್ಮಸ್ಸಿನಿಂದ ಒಪ್ಪಿಕೊಂಡೆ. ಕಲಾವಿದರೇ ಈ ಸಿನಿಮಾ ಬಗ್ಗೆ ಬಹಳ ಉತ್ಸುಕರಾಗಿದ್ದೇವೆ. ಇನ್ನು ಪ್ರೇಕ್ಷಕರಿಗೂ ಇದು ಮನರಂಜನೆಯ ರಸದೌತಣ ನೀಡಲಿದೆ’ ಎಂದರು ನಾಯಕಿ ಮೇಘ ಶೆಟ್ಟಿ. ‘ಈ ಶೀರ್ಷಿಕೆಯನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಇದೊಂದು ಪ್ರೇಮಕಥೆಯಾಗಿದ್ದು. ಈ ಚಿತ್ರದಲ್ಲಿ ಬಹಳ ಗ್ಲ್ಯಾಮರಸ್ ಆಗಿ ನಾನು ಕಾಣಿಸಿಕೊಳ್ಳಲಿದ್ದೇನೆ. ಇದೇ ಮೊದಲ ಬಾರಿಗೆ ಪೂರ್ಣಪ್ರಮಾಣದ ಪ್ರೇಮಕಥೆಯೊಂದರಲ್ಲಿ ನಟಿಸುತ್ತಿದ್ದೇನೆ’ ಎಂದರು ನಟಿ ನಿಶ್ವಿಕಾ ನಾಯ್ಡು.

ರಶ್ಮಿ ಫಿಲಂಸ್ ಲಾಂಛನದಲ್ಲಿ ಸುಮಂತ್ ಕ್ರಾಂತಿ ಅವರು ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ಸಾಧುಕೋಕಿಲ, ರಂಗಾಯಣ ರಘು, ತಬಲ ನಾಣಿ ಮುಂತಾದ ಕಲಾವಿದರಿದ್ದಾರೆ. ಚಿತ್ರಕ್ಕೆ ಅರ್ಜುನ್ ಜನ್ಯರ ಸಂಗೀತ ನಿರ್ದೇಶನವಿದ್ದು, ಶೇಖರ್ ಚಂದ್ರ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ರವಿವರ್ಮರ ಸಾಹಸ ನಿರ್ದೇಶನವಿದೆ. ❖



❦ ಸುಭಾಷಿತ ❦
ಪದಗಳನ್ನೇ ಬಳಸದ ಧ್ವನಿಯೊಂದು ಇರುತ್ತದೆ. ಕೇಳಿಸಿಕೊಳ್ಳಿ.
-ರೂಮಿ

ಪಂಜಾಬ್ ಕಾಂಗ್ರೆಸ್‌ನ ಆಂತರಿಕ ಬಿಕ್ಕಟ್ಟು: ಪಕ್ಷದ ಶಿಥಿಲ ಸ್ಥಿತಿಗೆ ಕೈಗನ್ನಡಿ

ಕಾಂಗ್ರೆಸ್ ಪಕ್ಷ ಸ್ವಂತ ಬಲದಿಂದ ಅಧಿಕಾರದಲ್ಲಿರುವ ಮೂರು ರಾಜ್ಯಗಳಲ್ಲಿ ಒಂದಾದ ಪಂಜಾಬ್‌ನಲ್ಲಿ ಪಕ್ಷದ ಆಂತರಿಕ ಸಮಸ್ಯೆಗಳು ಶಮನವಾಗುವ ಹಂತಕ್ಕೆ ಬಂದಿವೆ ಎಂದು ಯೋಚಿಸುವುದಕ್ಕೂ ಮೊದಲೇ ಪಕ್ಷ ಇನ್ನೂ ತೀವ್ರವಾದ ಬಿಕ್ಕಟ್ಟಿಗೆ ತನ್ನನ್ನು ಒಡ್ಡಿಕೊಂಡಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಮತ್ತು ಇತರ ಕೆಲ ಶಾಸಕರ ಒತ್ತಡದ ಮೇರೆಗೆ ಪಕ್ಷದ ಹಿರಿಯ ನಾಯಕ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಕ್ಕೆ ಇಳಿಸಲಾಗಿದೆ. ಅಮರಿಂದರ್ ಅವರ ಪ್ರಬಲ ವಿರೋಧದ ನಡುವೆಯೇ ಸಿಧು ಅವರನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಜುಲೈ ತಿಂಗಳಲ್ಲಿ ನೇಮಿಸಲಾಗಿತ್ತು. ಪಂಜಾಬ್ ಮುಖ್ಯಮಂತ್ರಿಯಾಗಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ನೇಮಿಸಲಾಗಿದೆ. ಚನ್ನಿ ಅವರು ಸಿಧು ಆಪ್ತ ಬಳಗದಲ್ಲಿ ಗುರುತಿಸಿಕೊಂಡವರು. ಆದರೆ, ತಮಗೆ ಇಷ್ಟವಿಲ್ಲದ ವ್ಯಕ್ತಿಗಳಿಗೆ ಸಚಿವ ಸ್ಥಾನ ಮತ್ತು ತಮಗೆ ಬೇಡದ ಅಧಿಕಾರಿಗಳಿಗೆ ಉನ್ನತ ಹುದ್ದೆ ನೀಡಲಾಗಿದೆ ಎಂದು ಆರೋಪಿಸಿದ ಸಿಧು ಅವರು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಮುಂದಿನ ಚುನಾವಣೆಗೆ ಕೆಲವೇ ತಿಂಗಳಿರುವಾಗ ಈ ಎಲ್ಲ ವಿದ್ಯಮಾನಗಳು ನಡೆದಿವೆ. ಸಿಧು ಅವರಿಗೆ ಮುಖ್ಯಮಂತ್ರಿ ಹುದ್ದೆ ನೀಡಲು ವಿವಿಧ ಕಾರಣಗಳಿಂದ ಆಗುತ್ತಿಲ್ಲ, ಹಾಗಾಗಿ, ಚನ್ನಿ ಅವರಿಗೆ ಆ ಹುದ್ದೆ ನೀಡಲಾಗಿದೆ. ಚನ್ನಿ ಅವರು ಸಿಧು ಅವರ ಕೈಗೊಂಬೆ ರೀತಿಯಲ್ಲಿ ಅಧಿಕಾರ ನಡೆಸಲಿದ್ದಾರೆ ಎಂಬ ಮಾತುಗಳು ಚನ್ನಿ ಅವರ ಆಯ್ಕೆಯ ಸಂದರ್ಭದಲ್ಲಿ ಕೇಳಿಬಂದಿದ್ದವು. ತಾವು ಯಾರ ಕೈಗೊಂಬೆಯೂ ಅಲ್ಲ ಎಂಬ ರೀತಿಯಲ್ಲಿ ಚನ್ನಿ ಅವರು ನಂತರದ ದಿನಗಳಲ್ಲಿ ನಡೆದುಕೊಂಡಿದ್ದಾರೆ ಎಂಬುದು ಸಿಧು ವರ್ತನೆಯಿಂದ ತಿಳಿದುಬರುತ್ತದೆ. ಚುನಾಯಿತ ಮುಖ್ಯಮಂತ್ರಿಯೊಬ್ಬರು ತಮ್ಮ ಇಷ್ಟಾನಿಷ್ಟಗಳಿಗೆ ತಕ್ಕಂತೆ ಕುಣಿಯಬೇಕು ಎಂದು ಪಕ್ಷದ ಅಧ್ಯಕ್ಷ ಬಯಸುವುದು ಪ್ರಜಾಸತ್ತಾತ್ಮಕ ವರ್ತನೆಯಂತೂ ಅಲ್ಲ. ತಮ್ಮ ಒತ್ತಡಕ್ಕೆ ಮಣಿದು ಪಕ್ಷವು ಮುಖ್ಯಮಂತ್ರಿಯನ್ನು ಬದಲಿಸಿದೆ, ತಮಗೆ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ನೀಡಿದೆ ಎಂಬುದನ್ನೆಲ್ಲ ಸಿಧು ಅವರು ಅಷ್ಟು ಬೇಗ ಮರೆತರೆ ಹೇಗೆ? ಒಂದೆರಡು ನೇಮಕದ ವಿಚಾರದಲ್ಲಿ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಪಕ್ಷಕ್ಕೆ ಮುಜುಗರ ಉಂಟು ಮಾಡಿ, ಪಕ್ಷದ ಹೈಕಮಾಂಡ್ ಭಾರಿ ದುರ್ಬಲ ಎಂದು ಸಾರಿದರೆ ಪಕ್ಷವನ್ನು ಗೆಲುವಿನತ್ತ ಮುನ್ನಡೆಸಲು ಸಾಧ್ಯವೇ?

ಪಂಜಾಬ್ ಮತ್ತು ದೇಶದ ಇತರ ಹಲವು ರಾಜ್ಯಗಳಲ್ಲಿಯೂ ಆಂತರಿಕ ಕಚ್ಚಾಟದಿಂದಾಗಿ ಕಾಂಗ್ರೆಸ್ ಕಂಗೆಟ್ಟಿದೆ. ಸಮಸ್ಯೆಗಳನ್ನು ಪಕ್ಷವು ಬಗೆಹರಿಸುವ ಧೋರಣೆಯೇ ಪ್ರಶ್ನಾರ್ಹವಾಗಿದೆ

ಪಂಜಾಬ್ ಮತ್ತು ದೇಶದ ಇತರ ಹಲವು ರಾಜ್ಯಗಳಲ್ಲಿಯೂ ಆಂತರಿಕ ಕಚ್ಚಾಟದಿಂದಾಗಿ ಕಾಂಗ್ರೆಸ್ ಕಂಗೆಟ್ಟಿದೆ. ಸಮಸ್ಯೆಗಳನ್ನು ಪಕ್ಷವು ಬಗೆಹರಿಸುವ ಧೋರಣೆಯೇ ಪ್ರಶ್ನಾರ್ಹವಾಗಿದೆ. ಅಮರಿಂದರ್ ಅವರ ಬಗ್ಗೆ ಶಾಸಕರ ದೊಡ್ಡ ವರ್ಗದಲ್ಲಿ ಭಾರಿ ಅಸಮಾಧಾನವಿದೆ ಎಂಬುದು ಪಕ್ಷದ ಹೈಕಮಾಂಡ್‌ಗೆ ಬಹಳ ಹಿಂದಿನಿಂದಲೇ ಅರಿವಿತ್ತು. ನಿರ್ಧಾರ ಕೈಗೊಳ್ಳುವಿಕೆಯನ್ನು ಮುಂದೂಡುತ್ತಲೇ ಬಂದ ಪಕ್ಷವು ಇನ್ನೇನು ಚುನಾವಣೆ ನಡೆಯಲಿದೆ ಎಂಬ ಸಂದರ್ಭದಲ್ಲಿ ನಾಯಕತ್ವ ಬದಲಿಸಿದೆ. ದೇಶದ ಎಲ್ಲೆಡೆ ಹಿನ್ನಡೆಯನ್ನೇ ಕಾಣುತ್ತಿರುವ ಕಾಂಗ್ರೆಸ್ ಪಕ್ಷವು ಪಂಜಾಬ್‌ನಲ್ಲಿ ಅಧಿಕಾರ ಉಳಿಸಿಕೊಳ್ಳುವ ಸಾಧ್ಯತೆ ಇತ್ತು. ಪಕ್ಷದ ಅಸ್ತಿತ್ವದ ದೃಷ್ಟಿಯಿಂದ ಇದು ಅನಿವಾರ್ಯವೂ ಆಗಿತ್ತು. ಆದರೆ, ಚುನಾವಣೆಯ ಹೊಸ್ತಿಲಲ್ಲಿ ತೆಗೆದುಕೊಂಡ ನಿರ್ಧಾರವು ಪಕ್ಷವನ್ನು ವಿಭಜನೆಯ ಅಂಚಿಗೆ ತಂದು ನಿಲ್ಲಿಸಿದೆ. ಪಕ್ಷದ ಒಳಗೆ ಬಣಗಳ ಸಂಖ್ಯೆಯನ್ನು ಹೆಚ್ಚಿಸಿದೆ. ಪಂಜಾಬ್ ಮಾತ್ರವಲ್ಲ, ನಿರ್ಧಾರ ಕೈಗೊಳ್ಳಲು ಹಿಂದೆ ಮುಂದೆ ನೋಡಿದ್ದರಿಂದಾಗಿ ಬೇರೆ ರಾಜ್ಯಗಳನ್ನೂ ಕಾಂಗ್ರೆಸ್ ಕಳೆದುಕೊಂಡಿದೆ. ಅದಕ್ಕೆ ಇತ್ತೀಚಿನ ಉದಾಹರಣೆ ಮಧ್ಯಪ್ರದೇಶ. ಇನ್ನೂ ಹಿಂದಕ್ಕೆ ಹೋದರೆ ಉದಾಹರಣೆಗಳು ಇನ್ನಷ್ಟು ಸಿಗುತ್ತವೆ. ಪಂಜಾಬ್‌ನಲ್ಲಿ ಪಕ್ಷಕ್ಕೆ ಮತ್ತೆ ಬಿಕ್ಕಟ್ಟು ಎದುರಾಗಿರುವಾಗಲೂ ರಾಹುಲ್ ಗಾಂಧಿ- ಪ್ರಿಯಾಂಕಾ ಗಾಂಧಿ ಅವರನ್ನು ಒಳಗೊಂಡ ಹೈಕಮಾಂಡ್ ಹೆಚ್ಚು ತಲೆಕೆಡಿಸಿಕೊಂಡಂತೆ ಕಾಣಿಸುತ್ತಿಲ್ಲ. ಪಕ್ಷದ ನೇತೃತ್ವದ ಸರ್ಕಾರ ಕಳಚಿ ಬೀಳುವ ಹಂತದಲ್ಲಿದೆ ಎನ್ನುವಾಗಲೂ ರಾಹುಲ್ ಅವರು ಪಂಜಾಬ್‌ನಿಂದ ದೂರದ ಕೇರಳದಲ್ಲಿಯೂ ಪ್ರಿಯಾಂಕಾ ಅವರು ಉತ್ತರಪ್ರದೇಶದಲ್ಲಿಯೂ ಇದ್ದರು. ರಾಜಕಾರಣದಲ್ಲಿ ಇರುವವರು ಪದ್ಮಪತ್ರೆಯ ಮೇಲಿನ ಜಲಬಿಂದುವಿನಂತೆ ತಾವು ಯಾವುದಕ್ಕೂ ಅಂಟಿಕೊಂಡವರಲ್ಲ ಎಂದು ಈಗಿನ ಸಂದರ್ಭದಲ್ಲಿಯಂತೂ ಇರಲು ಸಾಧ್ಯವಿಲ್ಲ. ನಾಯಕರು ಹಾಗೆ ಇರುವುದೇ ಕಾಂಗ್ರೆಸ್‌ನ ಈಗಿನ ಸ್ಥಿತಿಗೆ ಕಾರಣವೂ ಆಗಿರಬಹುದು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಬಲ ಮತ್ತು ಪರಿಣಾಮಕಾರಿ ವಿರೋಧ ಪಕ್ಷದ ಅಗತ್ಯವೇನೂ ಇಲ್ಲ ಎಂದು ಕಾಂಗ್ರೆಸ್ ಭಾವಿಸಿದಂತೆ ಕಾಣಿಸುತ್ತಿದೆ. ರಾಜಕೀಯ ಅಧಿಕಾರಕ್ಕೆ ಏರುವುದು ಯಾವುದೇ ಪಕ್ಷದ ಗುರಿ ಎಂಬುದರಲ್ಲಿ ಅನುಮಾನ ಇಲ್ಲ. ಆದರೆ, ಎಲ್ಲ ಪಕ್ಷಗಳೂ ಅಧಿಕಾರದಲ್ಲಿದ್ದರೆ ಅಧಿಕಾರದಲ್ಲಿ ಇದ್ದವರು ತಪ್ಪು ಮಾಡಿದಾಗ ಅವರ ಕಿವಿ ಹಿಂಡಿ ಸರಿದಾರಿಗೆ ತರುವವರು ಯಾರು? ಸುದೀರ್ಘ ಕಾಲ ಅಧಿಕಾರವನ್ನು ಅನುಭವಿಸಿದ್ದೇ ಕಾಂಗ್ರೆಸ್ ಪಕ್ಷ ಈಗ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ಒಂದು. ಸತತವಾಗಿ ಎರಡು ಲೋಕಸಭಾ ಚುನಾವಣೆಗಳಲ್ಲಿ ಹೀನಾಯವಾಗಿ ಸೋತಿರುವ ಕಾಂಗ್ರೆಸ್ ಮುಂದಿನ ಚುನಾವಣೆಯಲ್ಲಿಯೂ ಬಿಜೆಪಿ ಗೆಲ್ಲಲಿ ಎಂದು ಬಯಸುತ್ತಿರುವಂತೆ ಕಾಣಿಸುತ್ತಿದೆ. ಇಲ್ಲದೇ ಇದ್ದರೆ, ಪಕ್ಷದಲ್ಲಿ ಒಂದರ ಹಿಂದೆ ಒಂದರಂತೆ ಬಿಕ್ಕಟ್ಟುಗಳು ಸೃಷ್ಟಿಯಾಗಲು ನಾಯಕರು ಅವಕಾಶ ಕೊಡುತ್ತಿರಲಿಲ್ಲ. ಪಕ್ಷವು ಶಿಥಿಲವಾಗುತ್ತಲೇ ಸಾಗುವಾಗ, ಒಳಕುಸಿತವನ್ನು ತಡೆಯುವ ಸಣ್ಣ ಪ್ರಯತ್ನವನ್ನಾದರೂ ಮಾಡದೇ ಇರುತ್ತಿರಲಿಲ್ಲ. ಕೈಗೊಂಡ ನಿರ್ಧಾರಗಳು ತಿರುಗೇಟು ನೀಡಿದಾಗ ಆತ್ಮಾವಲೋಕನದಿಂದ ತಪ್ಪಿಸಿಕೊಳ್ಳುತ್ತಿರಲಿಲ್ಲ. ಸುದೀರ್ಘ ಕಾಲ ನಿರ್ಧಾರ ಕೈಗೊಳ್ಳದೇ ಇದ್ದುದು, ಸಿಧುಗೆ ಅಧ್ಯಕ್ಷ ಸ್ಥಾನ, ಅಮರಿಂದರ್ ವಜಾ, ಚನ್ನಿ ನೇಮಕದಂತಹ ನಿರ್ಧಾರಗಳನ್ನು ಕೈಗೊಂಡ ರಾಹುಲ್–ಪ್ರಿಯಾಂಕಾ ಜೋಡಿಗೆ ಪಂಜಾಬ್‌ನ ಈಗಿನ ಸ್ಥಿತಿ ದೊಡ್ಡ ಹೊಡೆತ. ಜತೆಗೆ, ದೇಶದಲ್ಲಿ ಪಕ್ಷದ ಒಟ್ಟು ಸ್ಥಿತಿಯು ಅವರ ನಾಯಕತ್ವ ಮತ್ತು ನಿರ್ಧಾರ ಕೈಗೊಳ್ಳುವಿಕೆ ಸಾಮರ್ಥ್ಯದ ಮುಂದೆ ಸೃಷ್ಟಿಯಾಗಿರುವ ಅತ್ಯಂತ ದೊಡ್ಡ ಪ್ರಶ್ನಾರ್ಥಕ ಚಿಹ್ನೆ.

ದಿನದ ಟ್ವೀಟ್

ಬೇಕಾಗಿದೆ ಮಹಿಳಾ ಮೀಸಲಾತಿ

ಅಂಗೆಲಾ ಮರ್ಕೆಲ್ ಸತತ 16 ವರ್ಷಗಳ ಕಾಲ ಜರ್ಮನಿ ದೇಶವನ್ನು ಮುನ್ನಡೆಸಿ, ಸುಭದ್ರ ಮತ್ತು ಸಮಗ್ರ ಅಭಿವೃದ್ಧಿಯ ಆಡಳಿತ ನೀಡಿ ಜನತೆಯ ಮನವನ್ನು ಗೆದ್ದು ಇತಿಹಾಸ ಸೃಷ್ಟಿಸಿದ್ದಾರೆ. ಇಂತಹ ವೈಭವಗಳು ಭಾರತದಲ್ಲೂ ನಡೆದಿವೆ. ಆದರೆ ನಮ್ಮಲ್ಲಿ ಮಹಿಳೆಯರಿಗೆ ರಾಜಕಾರಣದಲ್ಲಿ ಸಲ್ಲಬೇಕಾದ ನ್ಯಾಯ ಇನ್ನೂ ದೊರಕಿಲ್ಲ. ಮಹಿಳೆಯರಿಗೆ 50% ಮೀಸಲಾತಿ ಸಿಗುವಂತಾಗಲಿ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿಲ್ಲ. ಆದರೆ ಸ್ಪಷ್ಟ ನಿರ್ಧಾರ ತೆಗೆದುಕೊಂಡಿದ್ದೇನೆ. ನನ್ನನ್ನು ನಡೆಸಿಕೊಂಡ ರೀತಿ ಸರಿಯಿಲ್ಲ. ನಂಬಿಕೆಯೇ ಇಲ್ಲದಿದ್ದರೆ ಅಲ್ಲಿ ಮುಂದುವರಿಯಲು ಸಾಧ್ಯವಿಲ್ಲ.

ಅಮರಿಂದರ್ ಸಿಂಗ್, ಕಾಂಗ್ರೆಸ್ ಮುಖಂಡ
ಪಂಜಾಬ್ ಮಾಜಿ ಮುಖ್ಯಮಂತ್ರಿ

25 ವರ್ಷಗಳ ಹಿಂದೆ
ಮಂಗಳವಾರ, 1-10-1996

• ವಂಚನೆ ಹಗರಣ: ರಾವ್ ಖುದ್ದು ಹಾಜರಿಗೆ ಕೋರ್ಟ್ ವಿನಾಯಿತಿ

ನವದೆಹಲಿ, ಸೆ. 30(ಪಿಟಿಐ)– ಲಕ್ಕೂಭಾಯ್ ಪಾಠಕ್ ವಂಚನೆ ಪ್ರಕರಣದಲ್ಲಿ ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರು ಖುದ್ದಾಗಿ ಸಿಬಿಐ ನ್ಯಾಯಾಧೀಶರ ಎದುರು ಹಾಜರಾಗುವುದಕ್ಕೆ ಇಂದು ಸುಪ್ರೀಂ ಕೋರ್ಟ್ ವಿನಾಯಿತಿ ನೀಡಿತು.

ರಾವ್ ಅವರ ಭದ್ರತೆಗೆ ಗಂಭೀರ ಅಪಾಯವಿದೆ ಎಂಬ ಕಾರಣವೊಡ್ಡಿ ಇಂದು ಮುಂಜಾನೆ ದೆಹಲಿ ಪೊಲೀಸ್ ಕಮಿಷನರ್ ನಿಖಿಲ್ ಕುಮಾರ್ ಅವರು ವಿಚಾರಣೆಯ ಸ್ಥಳವನ್ನು ತೀಸ್ ಹಜಾರಿ ಕೋರ್ಟಿನಿಂದ ಇನ್ನೊಂದು ಸುರಕ್ಷಿತ ಸ್ಥಳಕ್ಕೆ ವರ್ಗಾಯಿಸಬೇಕೆಂದು ಕೋರಿ ಸಲ್ಲಿಸಿದ್ದ ವಿಶೇಷ ಮನವಿಯನ್ನು ಪರಿಶೀಲಿಸಿದ ವಿಭಾಗೀಯ ಪೀಠ, ಮುಂದಿನ ಆದೇಶ ನೀಡುವವರೆಗೆ ಈ ವಿನಾಯಿತಿ ನೀಡಿತು. ಈ ವಿಶೇಷ ಮನವಿಯ ವಿಚಾರಣೆಯನ್ನು ಅ.7ಕ್ಕೆ ಕೋರ್ಟ್ ಮುಂದೂಡಿತು.

50 ವರ್ಷಗಳ ಹಿಂದೆ
ಶುಕ್ರವಾರ, 1-10-1971

• ವಿ.ವಿ. ವ್ಯವಹಾರ: ತನಿಖೆಗೆ ಒತ್ತಾಯ

ಬೆಂಗಳೂರು, ಸೆ. 30– ಡಾ.ವಿ. ರಾಜಮನ್ನಾರ್ ಅಥವಾ ಡಾ.ವಿ. ಲಕ್ಷ್ಮಣಸ್ವಾಮಿ ಮೊದಲಿಯಾರ್ ಅವರಂಥ ಸ್ಥಾನಮಾನವುಳ್ಳ ವ್ಯಕ್ತಿಯೊಬ್ಬರಿಂದ ಬೆಂಗಳೂರು ವಿಶ್ವವಿದ್ಯಾಲಯ ವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಬೇಕೆಂದು ರಾಜ್ಯದ ಎಂಟು ಮಂದಿ ಸಂಸತ್ ಸದಸ್ಯರು ರಾಜ್ಯಪಾಲರನ್ನು ಒತ್ತಾಯ ಮಾಡಿದ್ದಾರೆ.

ಕೆ.ಲಕ್ಕಪ್ಪ, ಡಿ.ಬಿ.ಚಂದ್ರೇಗೌಡ, ಕೆ.ಮಲ್ಲಣ್ಣ, ಎಸ್.ಎಂ.ಕೃಷ್ಣ, ಎನ್.ಶಿವಪ್ಪ ಮುಂತಾದವರು ರಾಜ್ಯಪಾಲರಿಗೆ ಮನವಿ ಅರ್ಪಿಸಿ, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಬ್ಬರಿಗೆ 'ಕಿರುಕುಳ'ವಾಗಿರುವ ರಿಜಿಸ್ಟ್ರಾರ್ ಅವರನ್ನು ತತ್‌ಕ್ಷಣ ವಿಶ್ವವಿದ್ಯಾಲಯದಿಂದ ವಾಪಸು ಪಡೆಯಬೇಕೆಂದು ಒತ್ತಿ ಹೇಳಿದ್ದಾರೆ.

ಎರಡು ಬಿಂದುಗಳ ನಡುವಿನ ಚಲನೆ ಮರ್ಕೆಲ್ ಅವರಿಗೆ ಸುಲಭವಾಗಿರಲಿಲ್ಲ

ಸವಾಲು ಗೆದ್ದು, ಮಿನುಗಿದ ಮರ್ಕೆಲ್



ಸೀಮೋಲ್ಲಂಘನ
ಸುಧೀಂದ್ರ ಬುಧ್ಯ

ಜರ್ಮನಿಯ ಚಾನ್ಸಲರ್ ಆಗಿ 16 ವರ್ಷಗಳ ಕಾಲ ಆ ಪ್ರಭಾವಿ ಹುದ್ದೆ ಅಲಂಕರಿಸಿದ ಅಂಗೆಲಾ ಮರ್ಕೆಲ್ ತಮ್ಮ ಅವಧಿಯ ಕೊನೆಯ ಚರಣಕ್ಕೆ ಬಂದು ನಿಂತಿದ್ದಾರೆ. ಸೆಪ್ಟೆಂಬರ್ 26ರಂದು ನಡೆದ ಚುನಾವಣೆಯಲ್ಲಿ ಜರ್ಮನಿಯ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಜನರ ವಿಶ್ವಾಸವನ್ನು ಗಳಿಸಿಕೊಂಡಿದೆ. ಕೆಲವು ದಿನಗಳಲ್ಲಿ ಸರ್ಕಾರ ರಚನೆಯ ಕಸರತ್ತು ಮುಗಿದು ನೂತನ ಚಾನ್ಸಲರ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ವಿಶ್ವದ ನಾಲ್ಕನೇ ದೊಡ್ಡ ಆರ್ಥಿಕತೆಯನ್ನು ನಿಭಾಯಿಸುವ ಹೊಣೆಗಾರಿಕೆ ಅವರ ಮೇಲಿರುತ್ತದೆ.

ದೀರ್ಘಾವಧಿಗೆ ಜರ್ಮನಿಯನ್ನು ಆಳಿದ ಚಾನ್ಸಲರುಗಳ ಪೈಕಿ ಎರಡನೆಯವರಾದ ಮರ್ಕೆಲ್, ಮೊದಲ ಮಹಿಳಾ ಚಾನ್ಸಲರ್ ಎನಿಸಿಕೊಂಡವರು. ಬರ್ಲಿನ್ ಗೋಡೆ ಪತನದ ಬಳಿಕ ಪೂರ್ವ ಜರ್ಮನಿ ಭಾಗದಿಂದ ಆ ಉನ್ನತ ಹುದ್ದೆಗೇರಿದ ಮೊದಲ ವ್ಯಕ್ತಿ. ಮರ್ಕೆಲ್ ಅವರ ಚಾನ್ಸಲರ್ ಅವಧಿಯಲ್ಲಿ ಇಂಗ್ಲೆಂಡ್ ಐವರು ಪ್ರಧಾನಿಗಳನ್ನು, ಫ್ರಾನ್ಸ್ ನಾಲ್ವರು ಅಧ್ಯಕ್ಷರನ್ನು, ಇಟಲಿ ಏಳು ಪ್ರಧಾನಿಗಳನ್ನು, ಅಮೆರಿಕ ನಾಲ್ವರು ಅಧ್ಯಕ್ಷರನ್ನು ಕಂಡಿತು.

ಕ್ವಾಂಟಂ ಕೆಮಿಸ್ಟ್ರಿಯಲ್ಲಿ ಡಾಕ್ಟರೇಟ್ ಪಡೆದು ವಿಜ್ಞಾನ ಸಂಸ್ಥೆಯೊಂದರಲ್ಲಿ ಸಂಶೋಧಕಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಮರ್ಕೆಲ್, ತಮ್ಮ ಆ ದಿನಗಳ ಬಗ್ಗೆ ಭಾಷಣವೊಂದರಲ್ಲಿ ಪ್ರಸ್ತಾಪಿಸಿದ್ದರು. 'ಪೂರ್ವ ಮತ್ತು ಪಶ್ಚಿಮವನ್ನು ಬೇರ್ಪಡಿಸಿದ್ದ ಬರ್ಲಿನ್ ಗೋಡೆ ಅವಕಾಶಗಳಿಗೆ ಮಿತಿಯೊಡ್ಡಿತ್ತು. ಅಕ್ಷರಶಃ ನನ್ನ ಪಾಲಿಗೆ ತಡೆಗೋಡೆಯಾಗಿತ್ತು. ಪ್ರತಿದಿನ ಕೆಲಸದಿಂದ ಮನೆಗೆ ಹಿಂದಿರುಗುವಾಗ ಆ ಗೋಡೆಯ ಬಳಿ ಹೋಗಿ ನಿಂತು ಬರುತ್ತಿದ್ದೆ' ಎಂದು ಮೆಲುಕು ಹಾಕಿದ್ದರು.

1989ರಲ್ಲಿ ಬರ್ಲಿನ್ ಗೋಡೆ ಪತನಗೊಂಡಾಗ ಮರ್ಕೆಲ್ ಅವರಿಗೆ 35 ವರ್ಷ. ಮರ್ಕೆಲ್ ತಮ್ಮ ಕೆಲಸ ತೊರೆದು ರಾಜಕೀಯಕ್ಕೆ ಧುಮುಕಿದರು. 1990ರಲ್ಲಿ ಕ್ರಿಶ್ಚಿಯನ್ ಡೆಮಾಕ್ರಟಿಕ್ ಪಕ್ಷದಿಂದ ಸ್ಪರ್ಧಿಸಿ ಜರ್ಮನಿಯ ಸಂಸತ್ತಿಗೆ ಆಯ್ಕೆಯಾದರು. ಮರುವರ್ಷ ಮಹಿಳಾ ಮತ್ತು ಯುವಜನ ಖಾತೆಯ ಸಚಿವರಾದರು. ಪಕ್ಷದ ಉಪಾಧ್ಯಕ್ಷೆಯ ಸ್ಥಾನಕ್ಕೆ ಏರಿದರು. 1982ರಿಂದ 1998ರವರೆಗೆ ಜರ್ಮನಿಯ ಚಾನ್ಸಲರ್ ಆಗಿದ್ದ ಹೆಲ್ಮಟ್ ಕೋಲ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡ ಮರ್ಕೆಲ್, ರಾಜಕೀಯವಾಗಿ ಒಂದೊಂದೇ ಮೆಟ್ಟಿಲು ಏರುತ್ತಾ ಹೋದರು.

1999ರ ಹೊತ್ತಿಗೆ ಕೋಲ್ ಅವರ ಕೊರಳಿಗೆ ಅಕ್ರಮ ದೇಣಿಗೆಯ ಹಗರಣ ಸುತ್ತಿಕೊಂಡಿತು. ಆಗ ಮರ್ಕೆಲ್, ತಮ್ಮ ರಾಜಕೀಯ ಗುರುವಿನ ವಿರುದ್ಧವೇ ಪತ್ರಿಕೆಯೊಂದರಲ್ಲಿ ಬರೆದು ರಾಜೀನಾಮೆಗೆ ಒತ್ತಾಯಿಸಿದರು. 'ನನ್ನ ಸಾವನ್ನು ನಾನೇ ತಂದುಕೊಂಡೆ, ಸರ್ಪವನ್ನು ಹೆಗಲಿಗೇರಿಸಿಕೊಂಡೆ' ಎಂದು ಮರ್ಕೆಲ್ ಕುರಿತು ಕೋಲ್ ಪ್ರತಿಕ್ರಿಯಿಸಿದರೆ, ಜರ್ಮನಿಯ ಜನ ಮರ್ಕೆಲ್ ಅವರ ಪ್ರಾಮಾಣಿಕತೆಯನ್ನು, ದಿಟ್ಟತನವನ್ನು ಮೆಚ್ಚಿಕೊಂಡರು. 2005ರಲ್ಲಿ ಮರ್ಕೆಲ್ ಚಾನ್ಸಲರ್ ಹುದ್ದೆಯಲ್ಲಿ ಕುಳಿತರು.

ಮರ್ಕೆಲ್ ಎದುರು ಸವಾಲು ಸರತಿಯಲ್ಲಿ ನಿಂತಿದ್ದವು. 2007-08ರಲ್ಲಿ ಜಾಗತಿಕ ಆರ್ಥಿಕ ಹಿಂಜರಿತ ಎದುರಾಯಿತು. 2009ರಲ್ಲಿ ಯುರೋ ವಲಯದ ಬಿಕ್ಕಟ್ಟು ಉದ್ಭವಿಸಿತು. ಆಗ ಜರ್ಮನಿಯ ಆಚೆ ಮರ್ಕೆಲ್ ತಮ್ಮ ಪ್ರಭಾವವನ್ನು ವಿಸ್ತರಿಸಿಕೊಂಡರು. ಗ್ರೀಸ್ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಮಾತುಕತೆಗೆ ಕೊಂಡಿಯಾದರು. 'If the euro fails, Europe fails' ಎನ್ನುವ ವಾದ ಮುಂದಿಟ್ಟರು. ಕಠಿಣ ನಿಲುವು ತಳೆದದ್ದರಿಂದ ಅವರನ್ನು 'ಹಿಟ್ಲರ್' ಎಂದು ಕರೆಯಲಾಯಿತು.

2015ರಲ್ಲಿ ಸಿರಿಯಾ ಬಿಕ್ಕಟ್ಟು ಉಲ್ಬಣಿಸಿ ಆ ಭಾಗದಿಂದ ದೊಡ್ಡ ಮಟ್ಟದ ವಲಸೆ ಆರಂಭವಾದಾಗ ಐರೋಪ್ಯ ರಾಷ್ಟ್ರಗಳು ತತ್ತರಿಸಿದವು. ಆದರೆ ಜರ್ಮನಿ 10 ಲಕ್ಷ ವಲಸಿಗರನ್ನು ಒಳಗೆ ಕರೆದುಕೊಂಡಿತು. ಅದಾಗಲೇ ದುಡಿಯುವ ಪ್ರಾಯದ ಜನರ ಸಂಖ್ಯೆ ಜರ್ಮನಿಯಲ್ಲಿ ಕಡಿಮೆಯಾಗಿತ್ತು. ವಲಸಿಗರನ್ನು ದೇಶದೊಳಕ್ಕೆ ಕರೆದುಕೊಳ್ಳುವ ನಿರ್ಧಾರದ ಹಿಂದೆ ಆ ವರ್ಗವನ್ನು ಸಮರ್ಥವಾಗಿ ದುಡಿಮೆಗೆ ಬಳಸಿಕೊಂಡು ಆರ್ಥಿಕತೆಗೆ ಪುಷ್ಟಿ ನೀಡುವ ಲೆಕ್ಕಾಚಾರ ಇತ್ತು. ತಮಗೆ ಇದರಿಂದ ರಾಜಕೀಯವಾಗಿ ಹಿನ್ನಡೆಯಾಗಲಿದೆ ಎಂದು ತಿಳಿದೂ ಮರ್ಕೆಲ್ ವಲಸಿಗರನ್ನು ಒಳಕರೆದುಕೊಂಡರು.

ಮರ್ಕೆಲ್ ಅವರ ಅವಧಿಯಲ್ಲಿ ಜರ್ಮನಿ ಮತ್ತು ಅಮೆರಿಕ ನಡುವಿನ ಸಂಬಂಧ ಏರಿಳಿತ ಕಂಡಿತು. ರಷ್ಯಾದೊಂದಿಗಿನ ವಿವಾದಿತ ನಾರ್ಡ್ ಸ್ಟ್ರೀಮ್-2 ನೈಸರ್ಗಿಕ ಅನಿಲ ಕೊಳವೆ ಮಾರ್ಗ ಯೋಜನೆ ಕೈಬಿಡುವಂತೆ ಜರ್ಮನಿಯ ಮೇಲೆ ಅಮೆರಿಕ ಒತ್ತಡ ಹೇರಿತ್ತು. ಯಾವುದೇ ಬಿಕ್ಕಟ್ಟಿನ ಸಮಯದಲ್ಲಿ ಈ ಕೊಳವೆ ಮಾರ್ಗವನ್ನು ಉಪಯೋಗಿಸಿಕೊಂಡು ಜರ್ಮನಿಯ ಮೇಲೆ ಹಿಡಿತ ಹೊಂದುವುದು ರಷ್ಯಾಕ್ಕೆ ಸುಲಭವಾಗುತ್ತದೆ ಎಂದು ಅಮೆರಿಕ ವಾದಿಸಿತ್ತು. ಆದರೆ ಮರ್ಕೆಲ್ ಅಮೆರಿಕದ ವಾದಕ್ಕೆ ಸೊಪ್ಪುಹಾಕಲಿಲ್ಲ. ಚೀನಾದ ವಿರುದ್ಧ ಕಠಿಣ ನಿಲುವು ತಳೆಯಲು ಅಮೆರಿಕ ಒತ್ತಡ ಹಾಕಿದಾಗಲೂ ಮರ್ಕೆಲ್ ಅದಕ್ಕೆ ಮಣಿಯಲಿಲ್ಲ. ಒಂದು ಹಂತದಲ್ಲಿ ಪುಟಿನ್ ಜೊತೆಗೆ ಮರ್ಕೆಲ್ ವೈಮನಸ್ಯ ಹೊಂದಿದ್ದರಾದರೂ ಸಂವಹನದ ಎಲ್ಲ ಹಾದಿಗಳನ್ನು ಮುಚ್ಚಲಿಲ್ಲ. ಈ ಹಿಂದೆ ಅಮೆರಿಕ ಮತ್ತು ಸೋವಿಯತ್ ನಡುವಿನ ಶೀತಲ ಸಮರ ಮತ್ತು ಅದರ ಬೇಗೆಯನ್ನು ಸ್ವತಃ ಅನುಭವಿಸಿದ್ದ ಮರ್ಕೆಲ್, ಜರ್ಮನಿ ಪುನಃ ಯಾರೊಬ್ಬರ ದಾಳವಾಗಬಾರದು ಎಂಬ ನಿಲುವು ತಳೆದರು.

ಮರ್ಕೆಲ್ ಕೆಲವು ವಿಷಯಗಳಲ್ಲಿ ಹಿನ್ನಡೆ ಅನುಭವಿಸಿದ್ದು ಇದೆ. ಐರೋಪ್ಯ ಒಕ್ಕೂಟದ ಅಧ್ಯಕ್ಷೆಯಾಗಿದ್ದ ಅವಧಿಯಲ್ಲಿ ಒಕ್ಕೂಟದ ನಿಯಮಗಳಿಗೆ ಬದ್ಧವಾಗುವಂತೆ ಹಂಗೆರಿ ಮತ್ತು ಪೋಲೆಂಡ್ ಮನವೊಲಿಸುವುದು ಅವರಿಗೆ ಕಷ್ಟವಾಯಿತು. ಹವಾಮಾನ ಬದಲಾವಣೆ ವಿಷಯದಲ್ಲಿ ಹೆಚ್ಚು ಮುಂದುವರಿಯಲು ಸಾಧ್ಯವಾಗಲಿಲ್ಲ. ಯಾವುದೇ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಹೆಜ್ಜೆ ಇಡುತ್ತಿದ್ದ ಕಾರಣ ಅವರನ್ನು 'ಕಾಲಹರಣ ಚತುರೆ' ಎಂದು ಕರೆದ ಪ್ರಸಂಗಗಳಿವೆ.

ಇತರ ದೇಶಗಳ ಪುರುಷ ನಾಯಕರು ಆಕೆಯ ನಾಯಕತ್ವ ಗುಣದ ಬಗ್ಗೆ ಅಸೂಯೆಪಟ್ಟಿದ್ದರೋ ಗೊತ್ತಿಲ್ಲ. ಆದರೆ ಕೆಲವರು ಆಕೆಯನ್ನು ಅಗೌರವದಿಂದ ನೋಡುವ ಕೆಲಸವನ್ನಂತೂ ಮಾಡಿದರು. ಮರ್ಕೆಲ್ ಅವರಿಗೆ ನಾಯಿಗಳನ್ನು ಕಂಡರೆ ಭಯ ಎಂಬುದು ತಿಳಿದಿದ್ದರೂ ಮರ್ಕೆಲ್ ಭೇಟಿಯ ವೇಳೆ ರಷ್ಯಾದ ಪುಟಿನ್ ತಮ್ಮ ಸಾಕು ನಾಯಿಯನ್ನು ಕರೆತಂದಿದ್ದರು. ತಮ್ಮನ್ನು ಹೆದರಿಸುವ ಸಲುವಾಗಿಯೇ ಪುಟಿನ್ ಈ ಕೆಲಸ ಮಾಡಿದ್ದಾರೆ ಎಂದು ಮರ್ಕೆಲ್ ಆರೋಪಿಸಿದ್ದರು. ಅಮೆರಿಕದ ಹಿಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅವಿವೇಕಿ ಎಂಬ ಪದವನ್ನು ಮರ್ಕೆಲ್ ಕುರಿತು ಬಳಸಿದ್ದರು. ಇಟಲಿಯ ಪ್ರಧಾನಿ ಸಿಲ್ವಿಯೋ ಬೆರುಸ್ಕೋನಿ ಆಕೆಯನ್ನು ಎದುರಿಗೆ ಕುಳ್ಳಿರಿಸಿಕೊಂಡು 15 ನಿಮಿಷಗಳ ಕಾಲ ಬೇರೊಬ್ಬರ ಜೊತೆ ಫೋನಿನಲ್ಲಿ ಮಾತನಾಡುತ್ತಾ ಮರ್ಕೆಲ್ ಅವರನ್ನು ಕಡೆಗಣಿಸುವ ಕೆಲಸ ಮಾಡಿದ್ದರು.

ಮರ್ಕೆಲ್ ಅಧಿಕಾರಕ್ಕೇರಿದಾಗ ಜರ್ಮನಿಯ ಪ್ರಸಿದ್ಧ ಪತ್ರಿಕೆ ಅವರ ಫೋಟೊ ಪ್ರಕಟಿಸಿ ಅದಕ್ಕೆ 'ಮಿಸ್ ಜರ್ಮನಿ' ಎಂಬ ಶೀರ್ಷಿಕೆ ಕೊಟ್ಟಿತ್ತು. ಅನನುಭವಿ, ಕೋಲ್ ಅವರ ಮೆಚ್ಚಿನ ಹುಡುಗಿ, ತಾತ್ಕಾಲಿಕ ಚಾನ್ಸಲರ್ ಎಂದೆಲ್ಲಾ ಕರೆಯಲಾಗಿತ್ತು. ಅವರು ಚಾನ್ಸಲರ್ ಹುದ್ದೆಯಿಂದ ಹೊರನಡೆಯುತ್ತಿರುವ ಈ ಸಂದರ್ಭದಲ್ಲಿ ಅವರನ್ನು 'ಸ್ಥಿರತೆಯ ಪ್ರತೀಕ' ಎಂದು ಕರೆಯಲಾಗುತ್ತಿದೆ. ಈ ಎರಡು ಬಿಂದುಗಳ ನಡುವಿನ ಚಲನೆ ಮರ್ಕೆಲ್ ಅವರಿಗೆ ಸುಲಭವಾಗಿರಲಿಲ್ಲ.

ಮರ್ಕೆಲ್ ಚಾನ್ಸಲರ್ ಹುದ್ದೆಯಲ್ಲಿರುವಷ್ಟು ಕಾಲ ಜನಾಕರ್ಷಣೆಯ, ವರ್ಚಸ್ವಿ ನಾಯಕಿ ಎನಿಸಿಕೊಳ್ಳದಿದ್ದರೂ ನಂಬಿಕಸ್ಥ, ಪ್ರಾಮಾಣಿಕ ನಾಯಕಿ ಎಂಬ ಭಾವವನ್ನು ಜನರಲ್ಲಿ ಮೂಡಿಸಿದರು. ಭಾರತದ ಇಂದಿರಾ ಗಾಂಧಿ ಸೇರಿದಂತೆ ಹಲವು ಮಹಿಳೆಯರು ವಿವಿಧ ದೇಶಗಳನ್ನು ಮುನ್ನಡೆಸಿ ಮಹಿಳೆಯ ಸಾಮರ್ಥ್ಯವನ್ನು ಜಗತ್ತಿಗೆ ಈಗಾಗಲೇ ಮನವರಿಕೆ ಮಾಡಿಕೊಟ್ಟಿದ್ದಾರೆ. ಆ ಸಾಲಿಗೆ ಮರ್ಕೆಲ್ ಕೂಡ ಸೇರುತ್ತಾರೆ ಮತ್ತು ಇತಿಹಾಸದ ಪುಟಗಳಲ್ಲಿ ಕಂಗೊಳಿಸುತ್ತಾರೆ.

2019ರಲ್ಲಿ ಪತ್ರಕರ್ತನೊಬ್ಬ '50 ವರ್ಷಗಳ ನಂತರ ಮಕ್ಕಳು ನಿಮ್ಮ ಕುರಿತು ಇತಿಹಾಸ ಪುಸ್ತಕದಲ್ಲಿ ಏನನ್ನು ಓದಬೇಕು ಎಂಬುದು ನಿಮ್ಮ ಅಪೇಕ್ಷೆ?' ಎಂದು ಪ್ರಶ್ನಿಸಿದಾಗ ಮರ್ಕೆಲ್, 'ಆಕೆ ಪ್ರಯತ್ನಿಸಿದಳು' ಎಂಬುದನ್ನು ಓದಿದರೆ ಸಾಕು ಎಂದಿದ್ದರು. ಚಾನ್ಸಲರ್ ಅವಧಿಯ ಆಕೆಯ ಪ್ರಯತ್ನಗಳನ್ನು ಮುಂದಿನ ಪೀಳಿಗೆಯ ಜರ್ಮನಿ ವಿದ್ಯಾರ್ಥಿಗಳು ಶ್ಲಾಘಿಸುತ್ತಾರೆ ಎಂಬುದಂತೂ ದಿಟ.

ಚುರುಮುರಿ

99 ವೆರೈಟಿ ದೋಸೆ

• ಆನಂದ

'ಕಾವಲಿ ಒಂದು, ದೋಸೆ ನೂರು ಮೈನಸ್ ಒಂದು...' ಎಂದು ಪ್ರಾಸಬದ್ಧವಾಗಿ ಹೆಂಡತಿಯ ಮುಂದೆ ಹೇಳಿದಾಗ ಆಕೆ ಪ್ರಶ್ನಾರ್ಥಕವಾಗಿ ನೋಡಿದಳು. 'ಅದೇ ತಳ್ಳೊಗಾಡೀಲಿ ದೋಸೆ ಮಾರೋನು 99 ವೆರೈಟಿ ದೋಸೆ ಹಾಕ್ತಾನೆ' ಎಂದು ವಿವರಿಸಿದೆ.

'ಮೊದಲು ಮಸಾಲೆ ದೋಸೆ ಒಂದೇ ಇತ್ತು. ಆಮೇಲೆ ಬೆಣ್ಣೆ ಮಸಾಲೆ, ನಂತರ ಸಾಗು ಮಸಾಲೆ ಹಾಗೇ ದೋಸೆ ಸಂತತಿ ಬೆಳೆದು ಈಗ 99 ಮುಟ್ಟಿದೆ' ಎಂದು ಬಾಯಿಯಲ್ಲಿ ನೀರೂರಿಸಿಕೊಂಡಳು.

'ವೆರೈಟಿ ಈಸ್ ದಿ ಸ್ಪೈಸ್ ಆಫ್ ಲೈಫ್'.

'ಹೌದ್ರೀ, ಹಿಂದೆ ಅಂಬಾಸಿಡರ್ ಕಾರೊಂದೇ ಇತ್ತು. ಪ್ರಧಾನಿಗಳೂ ಅದನ್ನೇ ಉಪಯೋಗಿಸುತ್ತಿದ್ದರು. ಈಗ ಪಂಚಾಯಿತಿ ಮೆಂಬರ್‌ಗೂ ಬೆಂಜ್ ಕಾರೇ ಬೇಕು'.

'ದೇಶದಲ್ಲಿ 15 ಕಾರ್ ಫ್ಯಾಕ್ಟರಿಗಳೇ ಇದ್ದು ಹಲವಾರು ಮಾಡೆಲ್‌ಗಳು ರಸ್ತೆ ಗುಂಡಿಗಳ ಮೇಲೆ ಓಡಾಡ್ತಿವೆ. ಪಕ್ಕದವರು ಗಾಡಿ ಬದಲಾಯಿಸಿದರೆ ನಾವೂ ಬದಲಾಯಿಸಬೇಕು. ಪ್ರೆಸ್ಟೀಜ್ ಪ್ರಶ್ನೆ ನೋಡು'.

'ಟೀವೀನೂ ಅಷ್ಟೆ. 80ರ ದಶಕದಲ್ಲಿ ಪ್ಲೇಟ್‌ಮೀಲ್ ತರಹ ಒಂದು ಚಾನೆಲ್, 4-5 ಬ್ರ್ಯಾಂಡ್ ಟೀವಿ ಇದ್ದವು. ಈಗ ದೊಡ್ಡ ಥಾಲಿ. ಸೆಟ್ ಆಯ್ಕೆಯೂ ಚಿಟ್ಟು ಹಿಡಿಸುವಷ್ಟಿದೆ'.

'ಮತದಾರರಿಗೂ ಚಿಟ್ಟು ಹಿಡಿದಿದೆ. 1952ರಲ್ಲಿ 52 ಪಕ್ಷಗಳಿದ್ದು, ಈಗ 1,700 ಪಕ್ಷಗಳಿವೆಯಂತೆ. ಜನಸೇವೆ ಮಾಡೋದಿಕ್ಕೆ ಎಷ್ಟು ಕಾತರ. ನನ್ನಂತಹ ಮತದಾರನಿಗೆ ಗೊಂದಲ. ಯಾರನ್ನು ಆಯ್ಕೆ ಮಾಡುವುದು? ಯಾರು ಸಾಚಾ? ಯಾರು ಬೋಗಸ್?'

'ಗೊಂದಲ ಎಲ್ಲದರಲ್ಲೂ ಇದೆ. ದೋಸೆ ಆಯ್ಕೆಯಲ್ಲಿ ಸಹ. 99 ವೆರೈಟಿ ಇದ್ದರೆ ಯಾವುದನ್ನು ಹುಯ್ಯಲು ಹೇಳುವುದು. ನಾವು ತಿಂತಾ ಇದ್ದಾಗ ಪಕ್ಕದವನ ಪ್ಲೇಟ್ ನೋಡಿ 'ಅಯ್ಯೋ ಆ ದೋಸೆ ಹೇಳಬೇಕಿತ್ತು' ಎಂದೆನಿಸದೇ?'

'ಅದಕ್ಕೇ ತತ್ವಜ್ಞಾನಿ ಜಿಡ್ಡು ಕೃಷ್ಣಮೂರ್ತಿಗಳು ಹೇಳಿದ್ದು, ಎಲ್ಲಿ ಆಯ್ಕೆ ಇದೆಯೋ ಅಲ್ಲಿ ಟೆನ್ಷನ್ ಇದೆ ಅಂತ. ಏಳಿ, ನಾನು ಒಂದೇ ವೆರೈಟಿ ದೋಸೆ ಹುಯ್ಯೋದು' ಎಂದು ವಾದಕ್ಕೆ ಮುಕ್ತಾಯ ಹಾಡಿದಳು.

ಸಂಗತ

ಬೇಕಾಗಿದೆ ಬಂಧುತ್ವ ಸುಖ

ಕೌಟುಂಬಿಕ ಜೀವನದ ಆತ್ಮೀಯತೆಗೊಂದು ವ್ಯಾಖ್ಯೆ ಬರೆಯಬೇಕಾಗಿದೆ

• ಪ. ರಾಮಕೃಷ್ಣ ಶಾಸ್ತ್ರಿ

ಅಮೆರಿಕದಿಂದ ಊರಿಗೆ ಮರಳಿದ್ದ ಬಂಧುವನ್ನು ಕಾಣಲು ಹೋಗಿದ್ದೆ. ಅವರ ಮಗನನ್ನು ಕರೆದು, 'ಇವರು ನಿನ್ನ ಚಿಕ್ಕಪ್ಪ' ಎಂದು ಹೇಳಿದರು. ಅವನಿಗೆ ಕನ್ನಡ ಅಷ್ಟೊಂದು ಬರುತ್ತಿರಲಿಲ್ಲ. 'ಅಂದರೆ ನನ್ನ ಸೆಕೆಂಡ್ ಫಾದರ್ರಾ?' ಎಂದು ಕೇಳಿದ. ಸಂಬಂಧವನ್ನು ಮಗನಿಗೆ ಅರ್ಥ ಮಾಡಿಸಲು ಅವರು ಹೆಣಗಾಡಿದರು.

ದಂಪತಿ ಉದ್ಯೋಗಕ್ಕೆ ಹೋಗುತ್ತಾರೆ. ಮರಳಿ ಬಂದ ಮೇಲೆ ಮಕ್ಕಳೊಂದಿಗೆ ನಡೆಯುವ ಮಾತುಕತೆ ಅವರ ಶಿಕ್ಷಣದ ಕುರಿತಾಗಿಯೇ ಇರುತ್ತದೆ. ಸಂಬಂಧಗಳನ್ನು ವಿವರಿಸುವ ವ್ಯವಧಾನವೂ ಇರುವುದಿಲ್ಲ. ಅಂತಹ ಸಂಬಂಧಗಳ ಮುಖದರ್ಶನವೂ ಮಕ್ಕಳಿಗೆ ಆಗುವುದಿಲ್ಲ.

ಶಾಲೆಯಲ್ಲಿ ಕಲಿಯುತ್ತಿದ್ದಾಗ ನಮ್ಮ ಮೇಷ್ಟರು ಒಂದು ಪದ್ಯ ಹೇಳುತ್ತಿದ್ದರು. 'ದಧಿಯಿಂದ ಹೊರಬಂದು ನವನೀತ ತಕ್ರದೊಳು| ನೆಲೆಸಿದರೂ ಬೆರೆಯದೆ ಸುಮ್ಮನಿರುವಂತೆ| ಮಾನವರ ಜೊತೆಜೊತೆಗೆ ಬದುಕಿದರೂ ಬಾಂಧವ್ಯ ಸಮರಸದಿ ಕರಗದಿರೆ ಬದುಕು ವ್ಯರ್ಥ'- ಮೊಸರಿನಿಂದ ತೆಗೆದ ಬೆಣ್ಣೆಯನ್ನು ಮಜ್ಜಿಗೆಯೊಳಗಿರಿಸಿದಾಗ, ತಾನು ಅದೇ ಮಜ್ಜಿಗೆಯಿಂದ ಹೊರಬಂದವನೆಂಬುದನ್ನು ಅರಿಯದೆ ಪ್ರತ್ಯೇಕ ಉಳಿಯುವ ಹಾಗೆ ಮನುಷ್ಯ ಇರಬಾರದು ಎಂದು ಅವರು ವಿವರಿಸುತ್ತಿದ್ದರು.

ವರ್ತಮಾನದ ಬದುಕು ಮಾತ್ರ ಮಜ್ಜಿಗೆಯ ನಡುವೆ ಕುಳಿತಿರುವ ಬೆಣ್ಣೆಯ ಹಾಗೆಯೇ ದೂರ ಉಳಿಯುತ್ತಿದೆ. ಒಂದು ಕುಟುಂಬಕ್ಕೆ ಒಂದೇ ಮಗು ಎಂಬ ಸಂಕಲ್ಪ ಹೊತ್ತು ಹೆತ್ತವರು ತಮ್ಮ ಪೂರ್ಣ ಶಕ್ತಿ, ಸಂಪತ್ತು ಎಲ್ಲವನ್ನೂ ಇದ್ದೊಬ್ಬ ಮಗನ ಶ್ರೇಯೋಭಿವೃದ್ಧಿಗೇ ಮೀಸಲಿಡುತ್ತಾರೆ. ಮಗ ಅತ್ಯುನ್ನತವಾದ ನೌಕರಿ ಸಂಪಾದಿಸಬೇಕೆಂಬ ತಮ್ಮ ಕನಸನ್ನು ನನಸು ಮಾಡುವ ಯಂತ್ರವಾಗಿ ಅವನನ್ನು ರೂಪಿಸುತ್ತಾರೆ.

ನಾವು ಚಿಕ್ಕವರಿರುವಾಗ ಶಾಲೆಗೆ ಬೇಸಿಗೆ ರಜೆ ಸಿಗುವುದನ್ನೇ ಕಾಯುತ್ತಿದ್ದೆವು. ಅಜ್ಜಿ ಮನೆಗೆ ಹೋಗಿ ಕೆಲವು ದಿನ ಅಲ್ಲಿದ್ದು, ಕಾಟು ಮಾವಿನಹಣ್ಣು ಹೆಕ್ಕುವುದು, ಹಳ್ಳದ ನೀರಿನಲ್ಲಿ ಈಜುವುದೇ ಮೊದಲಾದ ಸ್ವಚ್ಛಂದ ವಿಹಾರ ಮಾಡುತ್ತ ಕಾಲ ಕಳೆಯುತ್ತಿದ್ದೆವು. ಚಿಕ್ಕಮ್ಮ, ದೊಡ್ಡಮ್ಮ, ಭಾವ, ಅತ್ತಿಗೆ, ಪುಟ್ಟತ್ತೆ ಹೀಗೆ ಸಂಬಂಧಗಳ ಸರಪಣಿ ಹಿಡಿದುಕೊಂಡು ಹೋಗಿ ಅವರ ಮಕ್ಕಳೊಂದಿಗೆ ಒಡನಾಡಿ, ಬೆಟ್ಟದ ಹಣ್ಣು ತಿಂದು, ಹಾರುವ ಪತಂಗದ ಬಾಲಕ್ಕೆ ನೂಲು ಕಟ್ಟಿ ಗಾಳಿಪಟದಂತೆ ಹಾರಿಸುವ ಆಟದಲ್ಲಿ ಸ್ವರ್ಗೀಯ ಸುಖ ಅನುಭವಿಸುತ್ತಿದ್ದೆವು.

ಈಗ ರಜೆಯ ಕಾಲದಲ್ಲೂ ಮಕ್ಕಳಿಗೆ ಬಾಂಧವ್ಯದ ಜಾಡು ಹಿಡಿದು ಹೋಗಲು ಅನುಕೂಲವಿಲ್ಲ. ಆತ ಕಲಿಯುವ ತರಗತಿಗೆ ಹೆತ್ತವರು ಲಕ್ಷಾಂತರ ರೂಪಾಯಿ ಹೂಡಿಕೆ ಮಾಡಿದ್ದಾರೆ. ಅವನು ಪ್ರತಿಯೊಂದು ಕ್ಷಣವೂ ಅಧ್ಯಯನ ನಿರತನಾಗಿರಬೇಕು. ಕತೆ ಹೇಳುವ ಕಾಲ ಇದಲ್ಲ. ಪಠ್ಯದ ಹೊರತು ಬೇರೆ ಪುಸ್ತಕ ಮುಟ್ಟಿಯೂ ನೋಡಬಾರದು. ಸಂಬಂಧಿಕರ ಮನೆಗೆ ರಜೆಯಲ್ಲಿ ಹೋಗಿ ಬರುವುದು ದಂತಕತೆ. ಯಾಕೆಂದರೆ ಮಗು ಹೋಗಬೇಕಾದ ಸಂಬಂಧಿಕರ ಮನೆಯಲ್ಲಿಯೂ ಮಕ್ಕಳಿರುತ್ತಾರೆ, ಅವರದೂ ಇದೇ ಯಶೋಗಾಥೆ.

ವಿದ್ಯೆ ಕಲಿತು ಕೈತುಂಬ ಸಂಬಳ ತಂದರೆ ಮಾತ್ರ ಗೌರವದಿಂದ ಬದುಕಲು ಸಾಧ್ಯವೆಂಬ ಭಾವ ಹೇಗೆ ಮೊಳೆಯಿತೋ ತಿಳಿಯದು. ಅದು ಮುಗ್ಧ ಮಗುವೊಂದರ ಭಾವಲೋಕವನ್ನು ಹೊಸಕಿ ಹಾಕುವಷ್ಟು ಪ್ರಬಲವಾಯಿತು. ಕೌಟುಂಬಿಕ ಸಂಬಂಧಗಳು ವ್ಯಾವಹಾರಿಕವಾದವು. ಮನೆಗಳಲ್ಲಿ ನಡೆಯುತ್ತಿದ್ದ ಮದುವೆಗಳು ಕಲ್ಯಾಣ ಮಂಟಪಗಳಲ್ಲಿ ನಡೆಯತೊಡಗಿದ ಬಳಿಕ, ಹಿಂದಿನ ದಿನವೇ ಸಂಬಂಧಿಕರು ಮದುವೆ ಮನೆಗೆ ಹೋಗಿ ತರಕಾರಿ ಹೆಚ್ಚಿ ಕೊಟ್ಟು, ಮರುದಿನ ಅಭ್ಯಾಗತರಿಗೆ ಬಡಿಸಿ, ನಕ್ಕು ನಲಿದು ಬರುವ ಭಾವ ಸಂಗಮದ ಕ್ಷಣಗಳು ಸಾಹಿತ್ಯದಲ್ಲಿ ಮಾತ್ರ ಉಳಿದುಕೊಂಡವು.

ಈಗ ಅತಿಥಿ ಸತ್ಕಾರ ಮಾಡಲು ಸಂಬಳದ ಜನರಿದ್ದಾರೆ. ಊಟದ ಸಮಯಕ್ಕೆ ಬಂಧುಗಳು ಬರುತ್ತಾರೆ. ಮಕ್ಕಳನ್ನು ಸಮಾರಂಭಗಳಿಗೆ ಕರೆತರುವ ವಾಡಿಕೆ ಕಡಿಮೆ. ಅವರಿಗೆ ಪರೀಕ್ಷೆ, ತುಂಬ ಓದಲಿಕ್ಕಿದೆ ಎಂಬುದು ಕಾರಣ. ಹತ್ತಿರದಲ್ಲೇ ಇದ್ದರೂ ಮಗಳ ಮಕ್ಕಳನ್ನು ವರ್ಷಗಟ್ಟಲೆಯಿಂದ ನೋಡದ ಅಜ್ಜ, ಅಜ್ಜಿಯರಿದ್ದಾರೆ. ಮೊಮ್ಮಕ್ಕಳು ಬರುವುದಿಲ್ಲ. ಅವರೊಂದಿಗೆ ಇದ್ದು ಕತೆ ಹೇಳಬೇಕಾದ ಹಿರಿಯ ಜೀವಗಳು ವೃದ್ಧಾಶ್ರಮದ ಒಳಗೆ ಶುಷ್ಕ ಕಣ್ಣುಗಳಿಂದ ಬರಡು ಸಾಮ್ರಾಜ್ಯದಲ್ಲೇ ಕನವರಿಕೆ ಮಾಡುತ್ತಿವೆ.

ಮಗು ಕಲಿಯುತ್ತಿರುವ ಇಂಗ್ಲಿಷ್ ಭಾಷೆ ಶುದ್ಧವಾದ ಮಾತೃಭಾಷೆಯ ಕೊರಳು ಹಿಸುಕಿದೆ. ಅಪ್ಪ, ಅಮ್ಮ, ಚಿಕ್ಕಮ್ಮ, ಅತ್ತೆ ಮೊದಲಾದ ಮೃದು ಮಧುರವಾದ ಬಾಂಧವ್ಯದ ಜೇನು ತೊಟ್ಟಿಕ್ಕುವ ಪದಗಳನ್ನು ಕೇಳಿ ಮಗುವಿಗೆ ಗೊತ್ತಿಲ್ಲ. ಅಂತಹ ಸಂಬಂಧಿಕರನ್ನು ನೋಡಿ ತಿಳಿದಿಲ್ಲ. 'ಭಾವ ಸಕ್ಕರೆಯೆಸಳು, ಬಾಂಧವ್ಯ ಹಾಲುಕೆನೆ, ಬೆರೆತರದು ಸವಿ ಸುಖದ ಒಲುಮೆಯೊಸಗೆ, ಭಾವ ಬಡವಾದಾಗ ಎಲ್ಲವೂ ರಸಹೀನ, ಕಾಲವನು ದೂಷಿಸದೆ ತಿದ್ದಿಕೋ ಮನುಜ' ಎಂಬಂತೆ, ಸಂಬಂಧಗಳನ್ನು ನೆನಪಿಡುವ, ಬಾಂಧವ್ಯವನ್ನು ಬೆಳೆಸುವ, ಉಳಿಸುವ ಮನೋಧರ್ಮವನ್ನು ಮಕ್ಕಳಿಗಾಗಿ ಮತ್ತೆ ಬಿತ್ತನೆ ಮಾಡುವ ಸತ್ಕಾರ್ಯ ನಡೆಯಲೇಬೇಕಾಗಿದೆ.

ಉಳಿದ ಎಲ್ಲ ದೇಶಗಳಂತೆ ಭಾರತದ ಸಂಸ್ಕೃತಿ ಇರುವುದಲ್ಲ. ಕೌಟುಂಬಿಕ ಜೀವನದ ಆತ್ಮೀಯತೆಗೆ ಒಂದು ವ್ಯಾಖ್ಯೆ ಬರೆಯುವುದಾದರೆ ಇಲ್ಲಿರುವವರಿಗೆ ಮಾತ್ರ ಸಾಧ್ಯ. ಬಿದ್ದರೆತ್ತುವರಿಲ್ಲ, ಬೆನ್ನ ಬಳಸುವರಿಲ್ಲ, ನಾನಿದ್ದೇನೆಂಬ ಹಿತರಿಲ್ಲದ ಸಮಾಜವನ್ನು ಸೃಷ್ಟಿಸಿ ನಾವಿಬ್ಬರು, ನಮಗೊಂದು ಮಗು ಎಂಬ ಅರ್ಥವ್ಯಾಪ್ತಿಯನ್ನೂ ದಾಟಿ ಸಂಬಂಧಗಳ ಪರಿಧಿಯೊಳಗೆ ಮಗುವನ್ನು ಕರೆತರುವ ಮೂಲಕ, ಕಳೆದುಕೊಳ್ಳುತ್ತಿರುವ ಬಂಧುತ್ವ ಸುಖದ ಪುನರುತ್ಥಾನ ಮಾಡಬೇಕಾಗಿದೆ.

ವಾಚಕರ ವಾಣಿ

ರೈತ ಹೋರಾಟ: ಅಪಪ್ರಚಾರ ಸಲ್ಲ

'ರೈತ ಹೋರಾಟಕ್ಕೆ 10 ತಿಂಗಳು' ಎಂಬ ಲೇಖನ (ಪ್ರ.ವಾ., ಸೆ. 28) ವಾಸ್ತವವನ್ನು ವಸ್ತುನಿಷ್ಠವಾಗಿ ಹಿಡಿದಿಡುವಂತೆ ಇರುವುದು ಶ್ಲಾಘನೀಯ. ಆದರೆ ಈ ವರ್ಷದ ಜ. 26ರಂದು ದೆಹಲಿಯಲ್ಲಿ ನಡೆದ 'ರೈತ ಗಣರಾಜ್ಯೋತ್ಸವ ಪರೇಡ್' ಹೋರಾಟ ಕುರಿತಂತೆ ಇಲ್ಲಿ ಬರೆದಿರುವುದರಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವಾಗಿದೆ. ಜ. 26ರ ಗಲಾಟೆ, ಗೊಂದಲ ರೈತರಿಂದ ನಡೆದದ್ದಲ್ಲ. ಹೋರಾಟನಿರತರಾದ ನಿಜವಾದ ರೈತರು ಮತ್ತು ಅವರ ಸಂಘಟನೆಗಳು ತಾವು ಪೊಲೀಸರ ಜೊತೆ ಒಡಂಬಡಿಕೆ ಮಾಡಿಕೊಂಡಿದ್ದ ಮಾರ್ಗದಲ್ಲೇ ಪೂರ್ವನಿಗದಿತ ಸಮಯದಲ್ಲೇ ರ‍್ಯಾಲಿ ನಡೆಸಿದ್ದಾರೆ. ಅವರಿಗೆ ತಿಳಿಯದಂತೆಯೇ ನಡೆದ ಈ ಗಲಾಟೆಯೆಲ್ಲ ಪೊಲೀಸರಿಂದ ಪ್ರಾಯೋಜಿತ ಅನ್ನುವುದು ಕೇವಲ ಊಹೆಯಲ್ಲ, ಬರೀ ಸಂಘಟನೆಗಳ ಆಪಾದನೆಯೂ ಅಲ್ಲ. ಅದು ಆವಾಗಲೇ, ಆ ಘಟನಾವಳಿಗೆ ಕಾರಣನಾದ ಸಿಧು ಎಂಬ ಬಿಜೆಪಿಯ ತುಂಡು ನಾಯಕನನ್ನು ಬಂಧಿಸಿ ಜೈಲಿಗಟ್ಟಿದ ಪೊಲೀಸ್ ಕೇಸಿನಿಂದ ಸಾರ್ವಜನಿಕವಾಗಿ ಸಾಬೀತಾಗಿಹೋಗಿದೆ. ಅದರಿಂದ ರೈತರಲ್ಲಿ ಒಂದೆರಡು ದಿನ ಸ್ವಲ್ಪ ಗೊಂದಲ ಉಂಟಾಗಿದ್ದು ನಿಜ.

ಹೀಗೆ, ಇದು ಪೊಲೀಸರಿಂದಲೇ ಪ್ರೇರಿತವಾದ ಪೂರ್ವಯೋಜಿತ ಗಲಾಟೆ ಎನ್ನುವುದು ಮೇಲ್ನೋಟಕ್ಕೇ ಸಾಬೀತಾಗುವಂತಿದ್ದರೂ ಬಹುಪಾಲು ಮಾಧ್ಯಮಗಳು ಈಗಲೂ ಅದನ್ನು ಬೇಕೆಂದೇ ರೈತರ ತಲೆಗೆ ಕಟ್ಟಿ ಅಪಪ್ರಚಾರ ಮಾಡುತ್ತಿವೆ. ಇದು ಜನರಿಗೆ ತಪ್ಪು ಮಾಹಿತಿ ಕೊಟ್ಟು ಅವರನ್ನು ದಾರಿ ತಪ್ಪಿಸುತ್ತದೆ.

ಅನಸೂಯಮ್ಮ ಅರಳಾಳಸಂದ್ರ, ಶಾರದಾ ಗೋಪಾಲ, ನಂದಿನಿ ಜಯರಾಮ್, ವಿ.ಗಾಯತ್ರಿ, ಸ್ವರ್ಣ ಭಟ್

ನೈತಿಕ ಪೊಲೀಸ್‌ಗಿರಿ: ಅಧಿಕಾರ ಕೊಟ್ಟವರಾರು?

ನೈತಿಕ ಪೊಲೀಸ್‌ಗಿರಿ ಹೆಸರಿನಲ್ಲಿ ಪುಂಡಾಟಿಕೆ ಈಗ ಎಲ್ಲೆಡೆ ಹೆಚ್ಚಾಗುತ್ತಿದೆ. ಬೆಂಗಳೂರಿನಲ್ಲಿ ಇತ್ತೀಚೆಗೆ ತನ್ನ ಮಹಿಳಾ ಸಹೋದ್ಯೋಗಿಯೊಬ್ಬರನ್ನು ಮನೆಗೆ ಬಿಡಲು ಯುವಕನೊಬ್ಬ ಕರೆದುಕೊಂಡು ಹೋಗುತ್ತಿದ್ದಾಗ ಆ ಮಹಿಳೆಯ ಕೋಮಿನವರು ಅಡ್ಡಗಟ್ಟಿ ಗಲಾಟೆ ಮಾಡಿದ್ದರು. ಮೊನ್ನೆ ಮಂಗಳೂರಿನಲ್ಲೂ ವೈದ್ಯಕೀಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಒಟ್ಟಿಗೆ ಹೋಗುತ್ತಿರುವಾಗ ಅವರಿಗೆ ಹೊಡೆದಿದ್ದಾರೆ. ಪಬ್ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಯುವಕ ಯುವತಿಯರು ಒಟ್ಟಾಗಿರುವಾಗ ಅಲ್ಲಿ ಬೇರೆಯವರು ನುಗ್ಗಿ ಗಲಾಟೆ ಮಾಡುವಂಥ ಪ್ರಕರಣಗಳು ಆಗಾಗ್ಗೆ ವರದಿಯಾಗುತ್ತಲೇ ಇರುತ್ತವೆ.

ಇಂತಹ ಸಂದರ್ಭಗಳಲ್ಲಿ ಕಾನೂನನ್ನು ಕೈಗೆತ್ತಿಕೊಳ್ಳಲು ಇವರಿಗೆ ಅಧಿಕಾರ ಕೊಟ್ಟವರಾರು? ಅಲ್ಲೇನಾದರೂ ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದರೆ ಅವರಿಗೆ ಬುದ್ಧಿ ಹೇಳುವುದೋ ಅವರ ಪೋಷಕರಿಗೆ ತಿಳಿಸುವುದೋ ಅಥವಾ ಪೊಲೀಸರಿಗೆ ಮಾಹಿತಿ ನೀಡುವುದೋ ಬಿಟ್ಟು ಅವರಿಗೆ ಮನಬಂದಂತೆ ಥಳಿಸುವುದಕ್ಕೆ ಇವರಿಗೆ ಏನು ಹಕ್ಕಿದೆ? ಅಂಥ ಪುಂಡಾಟಿಕೆ ಮೆರೆದವರು ಯಾರೇ ಆಗಿರಲಿ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಮಾರಕ ಪಟಾಕಿ: ನಡೆಯಲಿ ಪರಾಮರ್ಶೆ

ಪಟಾಕಿ ತಯಾರಿಕೆಯಲ್ಲಿ ವಿಷಕಾರಿ ರಾಸಾಯನಿಕಗಳ ಬಳಕೆ ಗಂಭೀರವಾದದ್ದು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ (ಪ್ರ.ವಾ., ಸೆ. 30). ಸರಿಯೇ, ನಮ್ಮ ದೇಶದಲ್ಲಿ ವರ್ಷದುದ್ದಕ್ಕೂ ವಿವಿಧ ಕಾರಣಗಳಿಗಾಗಿ ಪಟಾಕಿ ಸುಡುವ ವಿಚಿತ್ರ ಖಯಾಲಿಯೊಂದು ಇತ್ತೀಚೆಗೆ ಸಾಂಕ್ರಾಮಿಕವಾಗಿದೆ. ಹಬ್ಬ, ಜಾತ್ರೆ, ಮದುವೆ, ಶವಯಾತ್ರೆ, ಚುನಾವಣಾ ಗೆಲುವು ಅಲ್ಲದೆ ಕೆಲವು ವೇಳೆ ಪ್ರಾಣಿಪಕ್ಷಿಗಳನ್ನು ಹೆದರಿಸಲು ಸಹ ಪಟಾಕಿ ಸುಡುವುದು ಸರ್ವೇಸಾಮಾನ್ಯ ಎಂಬಂತಾಗಿದೆ. ಈ ಪಟಾಕಿಗಳು ಯಾವ ರಾಸಾಯನಿಕ ವಸ್ತುಗಳಿಂದ ಮಾಡಲ್ಪಟ್ಟಿವೆ? ಅವುಗಳ ಬಳಕೆ ಸುರಕ್ಷಿತವೇ? ಪಟಾಕಿ ಬಳಕೆ ಪರಿಸರಕ್ಕೆ ಮಾರಕವೇ ಎನ್ನುವುದೆಲ್ಲಾ ಸಾಮಾನ್ಯ ಜನರಿಗೆ ಬೇಡದ ವಿಚಾರ. ಅವರ ನಿರೀಕ್ಷೆ ಒಂದೇ, ತಾವು ಖರೀದಿಸುವ ಪಟಾಕಿ ಕಡಿಮೆ ಬೆಲೆಯದ್ದಾಗಿರಬೇಕು ಜೊತೆಗೆ ಅಕ್ಕಪಕ್ಕದವರ ಕಿವಿ ತಮಟೆ ಹರಿದುಹೋಗುವಂತೆ ಶಬ್ದ ಹೊರಡಿಸಬೇಕು!

ಜನಸಾಮಾನ್ಯರ ಈ ಬೇಡಿಕೆಯನ್ನೇ ಬಂಡವಾಳವಾಗಿಸಿಕೊಂಡು ಅನೇಕ ವಿಷಕಾರಿ ಪಟಾಕಿಗಳು ರೂಪುಗೊಳ್ಳುತ್ತವೆ ಮತ್ತು ಇವುಗಳ ಬಳಕೆ ತೀವ್ರತರ ಪಾರಿಸರಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಇದರ ಅರಿವು ನಮ್ಮವರಿಗೆ ಬರುವುದು ಯಾವಾಗ? ಇಂತಹ ಶಿಕ್ಷಣವನ್ನು ಶಾಲೆಗಳಲ್ಲಿ ಕೊಡಲು ಸೋತಿದ್ದೇವೆಯೇ ಎಂದು ಪರಾಮರ್ಶಿಸಿಕೊಳ್ಳಬೇಕಿದೆ. ನೆಲ-ಜಲ-ವಾಯುವನ್ನು ವಿಷಮಯಗೊಳಿಸುವ ಪಟಾಕಿಗಳನ್ನು ನಿಷೇಧಿಸುವ ಮೂಲಕ ಸರ್ಕಾರಗಳು ಜನರ ಮತ್ತು ಪರಿಸರದ ಆರೋಗ್ಯವನ್ನು ಕಾಪಾಡುವ ಪ್ರಾಮಾಣಿಕ ಪ್ರಯತ್ನ ಮಾಡಲಿ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಕೃಷಿ ಉತ್ಪನ್ನ: ಎಲ್ಲೆಡೆ ಒಂದೇ ಸ್ಥಿತಿ ಇಲ್ಲ

ಇದೇ 27ರಂದು ನಡೆದ ಭಾರತ್ ಬಂದ್ ಭಾಗಶಃ ಯಶಸ್ಸನ್ನಷ್ಟೇ ಕಂಡಿದೆ. ಸರ್ಕಾರ ಮತ್ತು ಚಳವಳಿಕಾರರು ರೈತ ಸಂಬಂಧಿ ಕಾನೂನುಗಳ ವಿಷಯದಲ್ಲಿ ಹಟಮಾರಿತನ ತೊರೆದು, ವ್ಯಾವಹಾರಿಕತೆ ತೋರಬೇಕಾಗಿದೆ. ಸುಪ್ರೀಂ ಕೋರ್ಟ್ ಸಮಿತಿಯೊಂದನ್ನು ರಚಿಸಿ ವರದಿ ಪಡೆದಿದ್ದರೂ ಇದು ನೀತಿಯ ವಿಷಯ ಆಗಿರುವುದರಿಂದ ನಿರ್ದೇಶನ ಸ್ವರೂಪದ ಆದೇಶ- ತೀರ್ಪು ನೀಡುವುದು ಕಷ್ಟ.

ಕೃಷಿ ಉತ್ಪನ್ನಗಳ ಮಾರಾಟದ ವಿಷಯದಲ್ಲಿ ದೇಶದ ಎಲ್ಲ ರಾಜ್ಯಗಳಲ್ಲಿ ಒಂದೇ ಸ್ಥಿತಿ ಇಲ್ಲ (ಉದಾಹರಣೆಗೆ, ಕರ್ನಾಟಕ ಮತ್ತು ಪಂಜಾಬ್). ಈಗಾಗಲೇ ಇರುವ ವ್ಯವಸ್ಥೆಗೆ ಸಾರ್ವಜನಿಕ ಹಣ ಖರ್ಚಾಗಿದೆ, ಅದನ್ನು ಮುಂದುವರಿಸುತ್ತೇವೆ ಎನ್ನುವುದಾದರೆ ಪ್ರತೀ ವರ್ಷ ಬಜೆಟ್ ನೀಡಬೇಕು. ಕೊಳೆತುಹೋಗುವ ಸಂಭವದ ದೃಷ್ಟಿಯಿಂದ ಹೂವು, ತರಕಾರಿ, ಹಣ್ಣು ಈ ಅನುಕ್ರಮದಲ್ಲಿ ಸ್ಥಳೀಯ ಮಾರುಕಟ್ಟೆಯಲ್ಲಿ ತ್ವರಿತ ವ್ಯವಸ್ಥೆ ಬೇಕು. ಅಲ್ಲಿಂದ ತಾಲ್ಲೂಕು ಕೇಂದ್ರ ಅಥವಾ ರಾಜಧಾನಿ ಸೇರಲು ಸಾರಿಗೆ ಹಾಗೂ ಸಂರಕ್ಷಣಾ ಸಾಧನ ಇರಬೇಕಾಗುತ್ತದೆ. ಮಾತುಕತೆಗೆ ಸಿದ್ಧ, ತಿದ್ದುಪಡಿ ಪರಿಶೀಲಿಸುತ್ತೇವೆ, ಆದರೆ ಕಾನೂನು ರದ್ದು ಅಸಾಧ್ಯ- ಈ ನಿಲುವು ಎಲ್ಲಿಗೂ ತಲುಪದು. ಹಾಗೆಯೇ ಸರ್ಕಾರಗಳು ಎಲ್ಲ ಉತ್ಪನ್ನಗಳ ಬೆಲೆ, ಮಾರಾಟಕ್ಕೆ ಹೊಣೆ ಎನ್ನುವುದೂ ಸರಿಯಲ್ಲ (ವೆಲ್‌ಫೇರ್ ಸ್ಟೇಟ್ ಹಳೆಯ ಪರಿಕಲ್ಪನೆ).

ಎಚ್.ಎಸ್.ಮಂಜುನಾಥ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಭಾರತ ಬಯಲು ಶೌಚ ಮುಕ್ತ’ ಎಂಬ ಮಿಥ್ಯೆಗೆ ಎರಡು ವರ್ಷ

ಭಾರತವು ಬಯಲು ಶೌಚ ಮುಕ್ತ ದೇಶವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು 2019ರ ಅಕ್ಟೋಬರ್ 2ರಂದು ಘೋಷಿಸಿದ್ದರು. ಆ ಘೋಷಣೆಯಾಗಿ ಇದೇ ಅಕ್ಟೋಬರ್ 2ಕ್ಕೆ ಎರಡು ವರ್ಷವಾಗಲಿದೆ. ಆದರೆ ದೇಶದ ಹಲವು ರಾಜ್ಯಗಳ ಶೇ 100ರಷ್ಟು ಮನೆಗಳಲ್ಲಿ ಪ್ರತ್ಯೇಕ ಶೌಚಾಲಯ ಇನ್ನೂ ನಿರ್ಮಾಣವಾಗಿಲ್ಲ. ದೇಶದ ಎಲ್ಲಾ ರಾಜ್ಯಗಳೂ, ಎಲ್ಲಾ ಗ್ರಾಮಗಳನ್ನೂ ಶೇ 100ರಷ್ಟು ಬಯಲು ಶೌಚ ಮುಕ್ತ ಎಂದು ಘೋಷಿಸಿಲ್ಲ. ಬಯಲು ಶೌಚ ಮುಕ್ತ ಎಂದು ಘೋಷಿಸಿಕೊಂಡಿರುವ ಎಲ್ಲಾ ಗ್ರಾಮಗಳ ಪರಿಶೀಲನೆಯೂ ನಡೆದಿಲ್ಲ. ದೇಶದ 35,000ಕ್ಕೂ ಹೆಚ್ಚು ಹಳ್ಳಿಗಳು ಇನ್ನೂ ಬಯಲು ಶೌಚ ಮುಕ್ತ ಎಂಬ ಪ್ರಮಾಣಪತ್ರ ಪಡೆದಿಲ್ಲ. ಆದರೆ ಸರ್ಕಾರವು ಮಾತ್ರ ಎರಡು ವರ್ಷಗಳ ಹಿಂದೆಯೇ, ‘ಭಾರತವು ಬಯಲು ಶೌಚ ಮುಕ್ತ ದೇಶವಾಗಿದೆ’ ಎಂದು ಘೋಷಿಸಿದೆ. ಅದಾಗಿ ಎರಡು ವರ್ಷ ಕಳೆದರೂ ಘೋಷಣೆಯು ಸಂಪೂರ್ಣ ಸತ್ಯವಾಗಿಲ್ಲ

ಐದು ರಾಜ್ಯಗಳು ಬಯಲು ಶೌಚ ಮುಕ್ತವಲ್ಲ



ಗ್ರಾಮೀಣ ಭಾಗದಲ್ಲಿ ಶೌಚಾಲಯ ನಿರ್ಮಾಣ ಪ್ರಗತಿ



ಶೇಕಡವಾರು ಪ್ರಗತಿ (2019–20;ಮಾಹಿತಿ ಲಭ್ಯವಿಲ್ಲ)



35 ಸಾವಿರ ಹಳ್ಳಿಗಳಲ್ಲಿ ಇನ್ನೂ ಬಯಲು ಶೌಚ

6,38,588
2011ರ ಜನಗಣತಿ ಪ್ರಕಾರ ದೇಶದಲ್ಲಿರುವ ಗ್ರಾಮಗಳ ಸಂಖ್ಯೆ

6,03,004 (96%)
2021ರ ಸೆಪ್ಟೆಂಬರ್ ಅಂತ್ಯದ ವೇಳೆಗೆ ಬಯಲು ಶೌಚ ಮುಕ್ತ ಎಂದು ಘೋಷಿಸಿಕೊಂಡಿದ್ದ ಗ್ರಾಮಗಳು

6,01,780 (93%)
2021ರ ಸೆಪ್ಟೆಂಬರ್ ಅಂತ್ಯದ ವೇಳೆಗೆ ಬಯಲು ಶೌಚ ಮುಕ್ತ ಎಂಬುದು ದೃಢಪಟ್ಟ ಗ್ರಾಮಗಳ ಸಂಖ್ಯೆ

35,361 (6%)
ಬಯಲು ಶೌಚ ಮುಕ್ತ ಎಂದು ಘೋಷಿಸಿಕೊಳ್ಳದೇ ಇರುವ ಗ್ರಾಮಗಳ ಸಂಖ್ಯೆ

1,224 (0.30%)
ಬಯಲು ಶೌಚ ಮುಕ್ತ ಎಂದು ಘೋಷಿಸಿಕೊಳ್ಳದೇ ಇರುವ ಗ್ರಾಮಗಳ ಸಂಖ್ಯೆ

4,520
ದೇಶದಲ್ಲಿರುವ ಒಟ್ಟು ನಗರಗಳ ಸಂಖ್ಯೆ

- 2014ರಿಂದ ಆರಂಭಿಸಿ ಇಲ್ಲಿವರೆಗೆ ಗ್ರಾಮೀಣ ಭಾಗದಲ್ಲಿ ಒಟ್ಟು 10,71,04,710 (10.71 ಕೋಟಿ) ಶೌಚಾಲಯಗಳನ್ನು ನಿರ್ಮಿಸಲಾಗಿದೆ
- 2014–15ನೇ ಸಾಲಿನಲ್ಲಿ ಸುಮಾರು 48 ಲಕ್ಷ ಶೌಚಾಲಯ ನಿರ್ಮಿಸಲಾಗಿತ್ತು. ಇದು 2015–16ರ ವೇಳೆಗೆ ಮೂರು ಪಟ್ಟು ಹೆಚ್ಚಿತು
- ಶೌಚಾಲಯ ನಿರ್ಮಾಣದಲ್ಲಿ ಈವರೆಗೆ ಒಟ್ಟು ಶೇ 99.94ರಷ್ಟು ಪ್ರಗತಿ ದಾಖಲಾಗಿದೆ ಎಂದು ಸ್ವಚ್ಛ ಭಾರತ ಮಿಷನ್ ವೆಬ್‌ಸೈಟ್‌ನಲ್ಲಿ ಉಲ್ಲೇಖಿಸಲಾಗಿದೆ

स्वच्छ भारत

ವರದಿ: ಜಯಸಿಂಹ ಆರ್, ಅಮೃತಕಿರಣ್ ಬಿ.ಎಂ.

ಶೇ 27ರಷ್ಟು ನಗರಗಳಲ್ಲಿನ್ನೂ ಬಯಲು ಶೌಚ ರೂಢಿ

4,369 (97%)
ಬಯಲು ಶೌಚ ಮುಕ್ತ ಎಂದು ಘೋಷಿಸಿಕೊಂಡಿರುವ ನಗರಗಳು

4,316 (95%)
ಬಯಲು ಶೌಚ ಮುಕ್ತ ಎಂಬ ಘೋಷಣೆ ಪರಿಶೀಲನೆಗೆ ಒಳಪಟ್ಟ ನಗರಗಳು

3,305 (73%)
ಬಯಲು ಶೌಚ ಮುಕ್ತ ಎಂಬ ಪ್ರಮಾಣಪತ್ರ ಪಡೆದ ನಗರಗಳ ಸಂಖ್ಯೆ

1,011 (23%)
ಬಯಲು ಶೌಚ ಮುಕ್ತ ಎಂಬ ಘೋಷಣೆ ತಿರಸ್ಕರಿಸಲ್ಪಟ್ಟ ನಗರಗಳು

1,215 (27%)
ಬಯಲು ಶೌಚ ಮುಕ್ತವಲ್ಲದ ನಗರಗಳ ಸಂಖ್ಯೆ

ದೇಶದಲ್ಲಿರುವ ಒಟ್ಟು ನಗರಗಳಲ್ಲಿ ಶೇ 97ರಷ್ಟು ನಗರಗಳಷ್ಟೇ ಬಯಲು ಶೌಚ ಮುಕ್ತ ಎಂದು ಘೋಷಿಸಿಕೊಂಡಿವೆ. ಒಟ್ಟು ನಗರಗಳಲ್ಲಿ ಶೇ 95ರಷ್ಟು ನಗರಗಳು ನಿಜವಾಗಿಯೂ ಬಯಲು ಶೌಚ ಮುಕ್ತವಾಗಿವೆಯೇ ಎಂಬುದನ್ನು ಪರಿಶೀಲಿಸಲಾಗಿದೆ. ಇವುಗಳಲ್ಲಿ ಶೇ 23ರಷ್ಟು ನಗರಗಳು ಬಯಲು ಶೌಚ ಮುಕ್ತವಾಗಿಲ್ಲ ಎಂಬುದು ದೃಢಪಟ್ಟಿದೆ. ಹೀಗಾಗಿ ಒಟ್ಟು ನಗರಗಳಲ್ಲಿ ಶೇ 73ರಷ್ಟು ನಗರಗಳಿಗಷ್ಟೇ ಬಯಲು ಶೌಚ ಮುಕ್ತ ನಗರ ಎಂಬ ಪ್ರಮಾಣ ಪತ್ರ ದೊರೆತಿದೆ. ಶೇ 27ರಷ್ಟು ನಗರಗಳು ಬಯಲುಶೌಚ ಮುಕ್ತವಾಗಿಯೇ ಇಲ್ಲ. ಹೀಗಿದ್ದೂ ಸರ್ಕಾರವು ‘ಭಾರತವು ಬಯಲು ಶೌಚ ಮುಕ್ತ ದೇಶ’ ಎಂದು ಘೋಷಿಸಿದೆ

ಆಧಾರ: ಸ್ವಚ್ಛಭಾರತ ಗ್ರಾಮೀಣ ಡ್ಯಾಶ್‌ಬೋರ್ಡ್, ಸ್ವಚ್ಛಭಾರತ ನಗರ ಡ್ಯಾಶ್‌ಬೋರ್ಡ್, 2011ರ ಜನಗಣತಿ ವರದಿ

ಪೋಕ್ಸೊ ಪ್ರಕರಣದಿಂದ ಆರೋಪಿ ಖುಲಾಸೆಗೊಳಿಸಿದ್ದ ಪ್ರಕರಣ

ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣಾ ಕಾಯ್ದೆ (ಪೋಕ್ಸೊ) ಅಡಿ ದಾಖಲಾದ ಪ್ರಕರಣದಿಂದ ಆರೋಪಿಯನ್ನು ಖುಲಾಸೆಗೊಳಿಸಿ, ಬಾಂಬೆ ಹೈಕೋರ್ಟ್ ನೀಡಿದ್ದ ವಿವಾದಾತ್ಮಕ ತೀರ್ಪು ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿಗಳ ತೀರ್ಪನ್ನು ಸುಪ್ರೀಂ ಕೋರ್ಟ್ ಗುರುವಾರ ಕಾಯ್ದಿರಿಸಿದೆ.

ಕಕ್ಷಿದಾರರ ವಕೀಲರ ವಾದಗಳನ್ನು ನ್ಯಾಯಮೂರ್ತಿ ಯು.ಯು. ಲಲಿತ್ ನೇತೃತ್ವದ ಪೀಠವು ಆಲಿಸಿತು. ಲಿಖಿತ ಹೇಳಿಕೆಗಳನ್ನು ದಾಖಲಿಸುವಂತೆ ಸೂಚಿಸಿತು.

ವಾದಿ ಮತ್ತು ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಗಳನ್ನು ಮೂರು ದಿನಗಳ ಒಳಗೆ ಸಲ್ಲಿಸಬೇಕು ಎಂದು ತಿಳಿಸಿದ ಪೀಠ ಆದೇಶವನ್ನು ಕಾಯ್ದಿರಿಸಿದೆ. ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಮತ್ತು ಬೇಲಾ ಎಂ. ತ್ರಿವೇದಿ ಅವರನ್ನೂ ಪೀಠ ಒಳಗೊಂಡಿದೆ.

ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರು ಸಲ್ಲಿಸಿರುವ ಹೇಳಿಕೆಗಳನ್ನು ತನ್ನ ಹೇಳಿಕೆಯಲ್ಲಿ ಸೇರಿಸಿಕೊಳ್ಳುವುದಾಗಿ ಮಹಾರಾಷ್ಟ್ರ ಸರ್ಕಾರವು ಸುಪ್ರೀಂಕೋರ್ಟ್‌ಗೆ ತಿಳಿಸಿದೆ.

ಬಾಂಬೆ ಹೈಕೋರ್ಟ್‌ನ ವಿವಾದಾತ್ಮಕ ತೀರ್ಪು ‘ಅಪಾಯಕಾರಿ ಮತ್ತು ಅತಿರೇಕಕ್ಕೆ ಪೂರ್ವನಿದರ್ಶನ’ವಾಗಿದೆ. ಈ ತೀರ್ಪನ್ನು ಹಿಂಪಡೆಯುವ ಅಗತ್ಯವಿದೆ ಎಂದು ವೇಣುಗೋಪಾಲ್ ಈ ಹಿಂದೆ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದರು.

ಪೋಕ್ಸೊ ಕಾಯ್ದೆಯಡಿ ಒಬ್ಬ ಆರೋಪಿಯನ್ನು ಖುಲಾಸೆಗೊಳಿಸಿದ ಆದೇಶಕ್ಕೆ ಜನವರಿ 27ರಂದು ಸುಪ್ರೀಂ ಕೋರ್ಟ್ ತಡೆ ನೀಡಿತ್ತು.

‘ಬಾಲಕಿಯ ಸ್ತನಗಳನ್ನು ಆಕೆಯು ತೊಟ್ಟ ಉಡುಪಿನ ಮೇಲಿನಿಂದ ಸ್ಪರ್ಶಿಸಿದರೆ ಅದನ್ನು ಲೈಂಗಿಕ ದೌರ್ಜನ್ಯ ಎಂದು ಪರಿಗಣಿಸಲಾಗದು; ಚರ್ಮದಿಂದ ಚರ್ಮದ ಸ್ಪರ್ಶವಾಗಿದ್ದರೆ ಮಾತ್ರ ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣಾ ಕಾಯ್ದೆ (ಪೋಕ್ಸೊ) ಅಡಿ ಅಪರಾಧ ಎಂದು ಪರಿಗಣಿಸಲಾಗುತ್ತದೆ’ ಎಂದು ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠದ ನ್ಯಾಯಮೂರ್ತಿ ಪುಷ್ಪಾ ಗಣೇಡಿವಾಲಾ ತೀರ್ಪು ನೀಡಿದ್ದರು.

ಮೊಬೈಲ್: ಕನಿಷ್ಠ ದರ ನಿಗದಿಗೆ ಸರ್ಕಾರ ನಕಾರ

ನವದೆಹಲಿ: ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿರುವ ಉದ್ಯಮ ಚೇತರಿಸಿಕೊಳ್ಳಲು ಸಹಾಯವಾಗುವಂತೆ ಕನಿಷ್ಠ ದರ ನಿಗದಿ ಮಾಡವಂತೆ (ಟ್ಯಾರಿಫ್) ದೂರಸಂಪರ್ಕ ಕಂಪನಿಗಳ ಬೇಡಿಕೆಯನ್ನು ಸರ್ಕಾರ ಒಪ್ಪಿಲ್ಲ. ಸರ್ಕಾರವು ಈ ವಿಷಯದಲ್ಲಿ ಮಧ್ಯಪ್ರವೇಶಿಸುವ ಯಾವುದೇ ಸೂಚನೆ ನೀಡಿಲ್ಲ.

‘ದೂರಸಂಪರ್ಕ ಉದ್ಯಮದಲ್ಲಿನ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸರ್ಕಾರಕ್ಕೆ ಕಾಳಜಿಯಿದೆ. ಆದರೂ ಅದು ದರ ನಿಯಂತ್ರಣಕ್ಕೆ ಒಲವು ತೋರುತ್ತಿಲ್ಲ. ಸರ್ಕಾರವು ಇತ್ತೀಚೆಗೆ ಬೃಹತ್ ಪರಿಹಾರ ಪ್ಯಾಕೇಜ್ ಅನ್ನು ಘೋಷಿಸಿತ್ತು. ಇದು ಉದ್ಯಮ ಬಿಕ್ಕಟ್ಟಿನಿಂದ ಹೊರಬರಲು ಸಹಾಯ ಮಾಡುತ್ತದೆ’ ಎಂದು ದೂರಸಂಪರ್ಕ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೂರಸಂಪರ್ಕ ವಲಯದಲ್ಲಿ ಸಮಸ್ಯೆ ಹೆಚ್ಚು ಕಾಲ ಮುಂದುವರಿಯುವುದಿಲ್ಲ. ಇದು ಶೀಘ್ರದಲ್ಲೇ ಕೊನೆಗೊಳ್ಳಲಿದ್ದು, ಸಂಸ್ಥೆಗಳು ಈ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲಿವೆ ಎಂದು ಅವರು ಹೇಳಿದ್ದಾರೆ.

ಉದ್ಯಮವನ್ನು ಸಂಕಷ್ಟದಿಂದ ಮೇಲೆತ್ತಲು ಕನಿಷ್ಠ ಎರಡು ವರ್ಷಗಳವರೆಗೆ ಕನಿಷ್ಠ ದರ ನಿಗದಿಗೆ ಸರ್ಕಾರ ಮುಂದಾಗಬೇಕಿದೆ ಎಂದು ಸೆಲ್ಯುಲಾರ್ ಆಪರೇಟರ್ಸ್ ಅಸೋಸಿಯೇಷನ್ (ಸಿಒಎಐ) ಒತ್ತಾಯಿಸುತ್ತಿದೆ. ಆದರೆ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಮೊಬೈಲ್ ಫೋನ್‌ಗಳಿಗೆ ಕನಿಷ್ಠ ದರ ನಿಗದಿಗೆ ಒಪ್ಪುತ್ತಿಲ್ಲ.

ಭಾರತದಲ್ಲಿ ಮೊಬೈಲ್ ಡೇಟಾ ದರವು ಜಗತ್ತಿನಲ್ಲಿ ಕಡಿಮೆಯಿದೆ. ಪ್ರಸ್ತುತ ಒಂದು ಜಿಬಿ ಡೇಟಾಗೆ ₹8 ದರವಿದ್ದು, ಇದನ್ನು ಹೆಚ್ಚಿಸಿ, ಕನಿಷ್ಠ ದರ ನಿಗದಿ ಮಾಡಬೇಕು ಎಂಬುದು ಎಲ್ಲ ದೂರಸಂಪರ್ಕ ಕಂಪನಿಗಳ ಒತ್ತಾಯ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ರೈತ ನಾಯಕ ರಾಕೇಶ್ ಟಿಕಾಯತ್ ಅವರ ನಿಜಬಣ್ಣ ಬಯಲಾಗಿದೆ. ಅವರು ಮಾಧ್ಯಮ ಸಂಸ್ಥೆಗಳಿಗೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಜೀನ್ಯೂಸ್ ನಿರೂಪಕ ಸುಧೀರ್ ಚೌಧರಿ ಟ್ವೀಟ್ ಮಾಡಿದ್ದಾರೆ. ಆ ಟ್ವೀಟ್‌ನಲ್ಲಿ ವಿಡಿಯೊ ಒಂದನ್ನೂ ಸುಧೀರ್ ಹಂಚಿಕೊಂಡಿದ್ದಾರೆ. ‘ಮಾಧ್ಯಮ ಸಂಸ್ಥೆಗಳು ರೈತರನ್ನು ಬೆಂಬಲಿಸಬೇಕು. ಇಲ್ಲದಿದ್ದರೆ ನಿಮ್ಮ ಕತೆಯೂ ಮುಗಿದ ಹಾಗೆ’ ಎಂದು ಟಿಕಾಯತ್ ಅವರು ಹೇಳುತ್ತಿರುವ ದೃಶ್ಯವಿದೆ. ಈ ವಿಡಿಯೊ ಮತ್ತು ಟ್ವೀಟ್ ಅನ್ನು 1 ಲಕ್ಷಕ್ಕೂ ಹೆಚ್ಚು ಬಾರಿ ಹಂಚಿಕೊಳ್ಳಲಾಗಿದೆ. ಹಲವರು ಟಿಕಾಯತ್ ಅವರ ವಿರುದ್ಧ ಕಿಡಿ ಕಾರಿದ್ದಾರೆ. ಅವರಿಗೆ ಮಾಧ್ಯಮಗಳು ಬೆಂಬಲ ನೀಡಬಾರದು ಎಂದು ಆಗ್ರಹಿಸಿದ್ದಾರೆ.

ಇದು ತಿರುಚಲಾದ ವಿಡಿಯೊ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಸುಧೀರ್ ಚೌಧರಿ ಹಂಚಿಕೊಂಡಿರುವ ವಿಡಿಯೊ ಪೂರ್ಣವಲ್ಲ. ಪೂರ್ಣ ವಿಡಿಯೊ 43 ಸೆಕೆಂಡ್‌ಗಳಷ್ಟು ದೀರ್ಘವಾಗಿದೆ. ಅದರಲ್ಲಿ ಟಿಕಾಯತ್ ಅವರು, ‘ಈ ಸರ್ಕಾರವು ನೂತನ ಕೃಷಿ ಕಾಯ್ದೆಗಳನ್ನು ತರುವ ಮೂಲಕ ಅರ್ಧ ದೇಶವನ್ನು ಮಾರಾಟ ಮಾಡಿದೆ. ಹೀಗಾಗಿ ನಾವು ಅವರ ವಿರುದ್ಧ ಹೋರಾಡುತ್ತಿದ್ದೇವೆ. ಕೇಂದ್ರ ಸರ್ಕಾರದ ಮುಂದಿನ ಗುರಿ ಮಾಧ್ಯಮ ಸಂಸ್ಥೆಗಳು. ನೀವು ಈಗ ನಮ್ಮ ಹೋರಾಟಕ್ಕೆ ಬೆಂಬಲ ನೀಡಬೇಕು. ಇಲ್ಲದಿದ್ದಲ್ಲಿ ನಿಮ್ಮ ಕತೆಯೂ ಮುಗಿಯುತ್ತದೆ’ ಎಂದು ಹೇಳಿದ್ದಾರೆ. ಈ ಹೇಳಿಕೆಯಲ್ಲಿ ಕೊನೆಯ ಎರಡು ವಾಕ್ಯಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು, ತಪ್ಪು ಅರ್ಥ ಬರುವ ರೀತಿಯಲ್ಲಿ ವಿಡಿಯೊವನ್ನು ತಿರುಚಲಾಗಿದೆ ಎಂದು ದಿ ಲಾಜಿಕಲ್ ಇಂಡಿಯನ್ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಆತ್ಮ ಸೌಂದರ್ಯ

ಗಣನೆಗೆಟುಕದ ಗುಣಗಳಾತ್ಮದವವರ್ಣ್ಯಗಳು |
ಮನದ ದೇಹದ ಜೀವದೆಲ್ಲ ಕರಣಗಳಾ ||
ಅನುಭವದ ಮುಕುರದೊಳ್ ಪ್ರತಿಫಲಿಸೆ ತನ್ನದೊಂ- |
ದಣುವದನೆ ಸುಂದರವೊ – ಮಂಕುತಿಮ್ಮ
|| 467 ||

ಪದ-ಅರ್ಥ: ಗಣನೆಗೆಟುಕದ = ಗಣನೆಗೆ (ಲೆಕ್ಕಕ್ಕೆ) + ಎಟುಕದ(ನಿಲುಕದ), ಗುಣಗಳಾತ್ಮದವವರ್ಣ್ಯಗಳು = ಗುಣಗಳು + ಆತ್ಮದವು- + ಅವರ್ಣ್ಯಗಳು (ವರ್ಣನೆಗೆ ನಿಲುಕದವು), ಮುಕುರ = ಕನ್ನಡಿ, ತನ್ನದೊಂದಣುವದುವೆ = ತನ್ನದೊಂದು + ಅಣು + ಅದುವೆ.

ವಾಚ್ಯಾರ್ಥ: ಲೆಕ್ಕಕ್ಕೆ ಸಿಗದ, ವರ್ಣನೆಗೆ ಅಸಾಧ್ಯವಾದ ಗುಣಗಳು ಆತ್ಮದವು. ಮನಸ್ಸಿನ, ದೇಹದ, ಜೀವದ ಎಲ್ಲ ಸಾಧನಗಳ ಮೂಲಕ ಅನುಭವದ ಕನ್ನಡಿಯೊಳಗೆ ತನ್ನ ಆತ್ಮವೆಂಬ ಅಣು ಪ್ರತಿಫಲಿಸಿದಾಗ ಅದೇ ಸುಂದರ.

ವಿವರಣೆ: ಲೋಕದಲ್ಲಿ ಎರಡು ಪದಾರ್ಥಗಳು, ಒಂದು ದೇಹ. ಇದು ಎಲ್ಲರಿಗೂ ಕಾಣುವ, ತಿಳಿದಿರುವ ವಸ್ತು. ಇದರಲ್ಲಿ ಭೌತಿಕವಾದ ಅಂಗಾಂಗಳು ಮಾತ್ರವಲ್ಲದೆ ಮನಸ್ಸು, ಬುದ್ಧಿ ಮೊದಲಾದ ಅಂತಃಕರಣಗಳು, ಕರ್ಮ, ಋಣಶೇಷಗಳು ಸೇರಿಕೊಂಡಿವೆ. ಇವು ಜೀವಲಕ್ಷಣಗಳು. ಎರಡನೆಯದು ದೇಹದೊಳಗಿದ್ದ ಚೈತನ್ಯ. ಯಾವುದರಿಂದ ದೇಹಕ್ಕೆ ನಾನು ಎಂಬ ಪ್ರಜ್ಞೆ ಮೂಡಿದೆಯೋ ಅದು ಶುದ್ಧಾತ್ಮ. ದೇಹ ಆತ್ಮದ ಸೊತ್ತು. ನಾವು ದೇಹವನ್ನು ವರ್ಣಿಸಬಲ್ಲೆವು, ಕಣ್ಣಿಗೆ ತೋರದ ಅತ್ಮವನ್ನು ವರ್ಣಿಸುವುದು ಅಸಾಧ್ಯ. ಅದಕ್ಕೇ ಅದು ಅವರ್ಣನೀಯ. ಇದೆಷ್ಟು ಚೆಂದದ ಹೊಂದಾಣಿಕೆ? ಕಣ್ಣಿಗೆ ಕಾಣದ ಆತ್ಮವಸ್ತು, ಕಣ್ಣಿಗೆ ಕಾಣುವ ಆದರೆ ಜಡವಾದ ದೇಹದಲ್ಲಿ ಕುಳಿತು ಏನೇನೋ ಕಾರ್ಯಗಳನ್ನು ಅದರ ಮೂಲಕ ಮಾಡಿಸುತ್ತದೆ. ಆತ್ಮದ ನೆಲೆಯೇ ದೇಹ. ಆದರೆ ಆತ್ಮವಿಲ್ಲದ ದೇಹ ಒಂದು ಮರದ ತುಂಡು-ಹೆಣ. ಅಂದರೆ ಜಡವಾದ, ಅನಿತ್ಯವಾದ ದೇಹದಲ್ಲಿ ಚೈತನ್ಯರೂಪಿಯಾದ, ನಿತ್ಯವಾದ ಆತ್ಮ ಆದರೆ ಇಲ್ಲೊಂದು ತೊಂದರೆ ಇದೆ. ಶ್ರೀಗಂಧವನ್ನು ತೇಯ್ದ ಕೈಗೆ ಸುಗಂಧದ ವಾಸನೆ ಬರುವಂತೆ, ಸೀಮೆಎಣ್ಣೆಯಲ್ಲಿ ನೆನೆದ ಕೈಗೆ ಅದರ ಘಾಟು ವಾಸನೆ ಅಂಟಿಕೊಳ್ಳುವಂತೆ, ಜೀವ ದೇಹಕರ್ಮದಲ್ಲಿ ಸತತವಾಗಿ ತೊಡಗಿದಾಗ ಅನೇಕ ಕಷ್ಟಗಳನ್ನು ಅನುಭವಿಸುತ್ತದೆ. ಆಗ ಅದರ ಚೈತನ್ಯ ಮಸುಕಾದಂತಾಗಿ ತನ್ನ ನಿಜಸ್ವರೂಪವನ್ನು ಮರೆತು ಬಿಡುತ್ತದೆ. ನಿತ್ಯವೂ ಬಳಸುವ ವಜ್ರದೋಲೆಯ ಮೇಲೆ ಎಣ್ಣೆ, ಬೆವರು, ಧೂಳು ಕುಳಿತು ಮಸಕಾಗುವುದಿಲ್ಲವೆ? ಆದರೆ ವಜ್ರ ವಜ್ರವೇ. ಅದರ ಮೇಲಿನ ಕೊಳೆಯನ್ನು ತೊಳೆದರೆ ಮತ್ತೆ ಫಳಫಳನೆ ಹೊಳೆಯುತ್ತದೆ. ಹಾಗೆಯೇ ಆತ್ಮ ಕೂಡ ಕೆಲಗುಣಗಳಿಂದ ತನ್ನನ್ನು ಶುದ್ಧಿಗೊಳಿಸಿಕೊಳ್ಳುತ್ತದೆ. ಆ ಗುಣಗಳೂ ದೇಹದ ಕರಣಗಳಿಂದಲೇ ಬರುವಂಥವುಗಳು.

ಎಂಟು ಗುಣಗಳ ಮೂಲಕ ಆತ್ಮಕ್ಕೆ ಪುನಃ ಮೊದಲಿನ ಕಾಂತಿ ಬರುತ್ತದೆ. ಅವುಗಳು, ಎಲ್ಲ ಪ್ರಾಣಿಗಳಲ್ಲಿ ದಯೆ, ಉದ್ವೇಗವಿಲ್ಲದ ಶಾಂತಿ, ಮತ್ತೊಬ್ಬರ ಬಗ್ಗೆ ಅಸೂಯೆಯಿಲ್ಲದ ಅನಸೂಯ ಗುಣ, ಅಂತರಂಗ ಬಹಿರಂಗಗಳನ್ನು ಶುದ್ಧವಾಗಿಟ್ಟುಕೊಳ್ಳುವ ಶೌಚ, ಅತಿಯಾದ ಆಯಾಸವಾಗದಂತಿರುವ ಅನಾಯಾಸ ಗುಣ, ಸಕಲ ಜೀವಿಗಳಿಗೆ ಸದಾಕಾಲ ಶುಭವನ್ನೇ ಹಾರೈಸುವ ಮಂಗಲ ಬುದ್ಧಿ, ಜಿಪುಣತನವನ್ನು ಬಿಟ್ಟು ಸಂತೋಷದಿಂದ ಬದುಕುವ ಅಕಾರ್ಪಣ್ಯ ಬುದ್ಧಿ, ತನ್ನದಲ್ಲದರ ಬಗ್ಗೆ ಆಸೆಯಿಲ್ಲದೆ ಬದುಕುವ ಅಸ್ಪೃಹ ಗುಣ.

ಕಗ್ಗ ಎಷ್ಟೆಲ್ಲವನ್ನು ಸಮಗ್ರವಾಗಿ ನಾಲ್ಕು ಸಾಲಿನಲ್ಲಿ ಹೇಳುತ್ತದೆ! ಅವರ್ಣನೀಯವಾದ ಆತ್ಮ, ದೇಹದ ಕರಣಗಳನ್ನೆಲ್ಲ ಬಳಸಿಕೊಂಡು, ಅಷ್ಟಗುಣಗಳನ್ನು ಪಡೆದು, ಅವುಗಳನ್ನು ಅನುಭವದ ಕನ್ನಡಿಯಲ್ಲಿ ಕಂಡಾಗ ಅದರ ಮೂಲ ಪ್ರಕಾಶ ಹೊಳೆಯುತ್ತದೆ. ಅದೇ ಅನ್ಯಾದೃಶವಾದ ಸೌಂದರ್ಯ!

ದಿನ ಭವಿಷ್ಯ

ಶುಕ್ರವಾರ ಅಕ್ಟೋಬರ್ 1, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಹಸ್ತೆ ದಶಮಿ ಗಂ. 31-23 (ಸಾ. 6-48) ಶುಕ್ರವಾರ ನಿತ್ಯ ನಕ್ಷತ್ರ ಪುಷ್ಯ ಗಂ. 44-54 (ರಾ. 12-13) ಶಿವ ನಾಮ ಯೋಗ ಗಂ. 27-5 ವಣಿಜ ಕರಣ ಗಂ. 0-2 ವಿಷ ಗಂ. 2-7 ಅಮೃತ ಗಂ 27-27: ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30: ಸೂರ್ಯೋದಯ: 6-12 ಸೂರ್ಯಾಸ್ತ: 6-06 ಅದೃಷ್ಟ ಸಂಖ್ಯೆ 7, 8

ಮೇಷ: ಪ್ರಯಾಣ ಕಾಲದಲ್ಲಿ ಎಚ್ಚರಿಕೆ ಅಗತ್ಯ. ಧೈರ್ಯದಿಂದ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬಹುದು. ಕೆಲಸ ಕಾರ್ಯಗಳಿಗೆ ಕಾಲಮಿತಿ ಹಾಕಿಕೊಳ್ಳುವುದು ಉತ್ತಮ. ಸಾಂಸಾರಿಕ ತೃಪ್ತಿ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಲಿದ್ದೀರಿ.

ವೃಷಭ: ನಿಮ್ಮ ಅನಿರೀಕ್ಷಿತ ನಡವಳಿಕೆಯಿಂದಾಗಿ ಕುಟುಂಬದ ಸದಸ್ಯರಲ್ಲಿ ಅಸಹನೆ ಉಂಟಾಗಬಹುದು. ನಿರ್ಧಾರಗಳನ್ನು ಪದೇ ಪದೆ ಬದಲಿಸದಿರಿ. ಸ್ನೇಹಿತರಿಂದ ಸಕಾಲಿಕ ಸಹಾಯ ದೊರೆಯಲಿದೆ.

ಮಿಥುನ: ಆರೋಗ್ಯದಲ್ಲಿ ಕೊಂಚ ಏರುಪೇರಾಗುವ ಸಾಧ್ಯತೆ. ಆರ್ಥಿಕ ಸಬಲತೆ. ಪ್ರಮುಖ ವಿಚಾರಗಳ ಬಗ್ಗೆ ನಿರ್ಧಾರ ಕೈಗೊಳ್ಳುವುದು ದಿನದ ಮಟ್ಟಿಗೆ ಬೇಡ. ಉತ್ತಮ ಸಂಗಾತಿ ದೊರಕುವ ಸಾಧ್ಯತೆ ಇದ್ದು ನೆಮ್ಮದಿ.

ಕರ್ಕಾಟಕ: ನೌಕರ ವರ್ಗದವರಿಗೆ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ದೊರೆಯಲಿದೆ. ಮಹಿಳೆಯರು ಭಾವೋದ್ವೇಗಕ್ಕೆ ಒಳಗಾಗುವ ಸಾಧ್ಯತೆ ಇದ್ದು ಸಮಾಧಾನ ಚಿತ್ತರಾಗಿ ವ್ಯವಹರಿಸಿ. ವಾಹನ ಚಾಲನೆಯಲ್ಲಿ ಜಾಗರೂಕತೆ ಅಗತ್ಯ.

ಸಿಂಹ: ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸಿ. ವಿದ್ಯಾರ್ಥಿಗಳು ಅಭ್ಯಾಸದ ಕಡೆ ಹೆಚ್ಚಿನ ಶ್ರಮ ವಹಿಸಬೇಕಾದೀತು. ಉದ್ಯೋಗಾಕಾಂಕ್ಷಿಗಳಿಗೆ ಯಥಾಸ್ಥಿತಿ. ಅನಿರೀಕ್ಷಿತ ಪ್ರವಾಸ ಸಂಭವ. ಅವಕಾಶ ಸದುಪಯೋಗ ಪಡಿಸಿಕೊಳ್ಳಿ.

ಕನ್ಯಾ: ನಿಮ್ಮ ಇಚ್ಛೆಗಳು ಸುಗಮವಾಗಿ ಈಡೇರುವವು. ಯೋಗ್ಯ ವಯಸ್ಕರಿಗೆ ಉತ್ತಮ ಅವಕಾಶಗಳಿಂದಾಗಿ ವೈವಾಹಿಕ ಭಾಗ್ಯ. ಪ್ರೇಮಿಗಳ ಪಾಲಿಗೆ ಮಹತ್ತರ ಬೆಳವಣಿಗೆ. ಇತರರೊಂದಿಗೆ ಉತ್ತಮ ಸಂಬಂಧವನ್ನು ಸಾಧಿಸಲಿದ್ದೀರಿ.

ತುಲಾ: ವಿವಿಧ ಮೂಲಗಳಿಂದ ಧನಾಗಮನದಿಂದಾಗಿ ಕಾರ್ಯಾನುಕೂಲ. ಮಹಿಳಾ ಉದ್ಯೋಗಿಗಳಿಗೆ ಪದೋನ್ನತಿ ಸಾಧ್ಯತೆ. ಅಸಹನೆಯ ಮನೋವೃತ್ತಿ ಅನಾವಶ್ಯಕ ತಪ್ಪು ಅಭಿಪ್ರಾಯಕ್ಕೆ ಕಾರಣವಾದೀತು. ಸಾಂಸಾರಿಕ ತೃಪ್ತಿ.

ವೃಶ್ಚಿಕ: ಉತ್ತಮ ಫಲ ನೀಡುವ ದಿನ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಸಾಮರ್ಥ್ಯವನ್ನರಿತು ಕೆಲಸ ನಿರ್ವಹಿಸುವುದು ಉತ್ತಮ. ಮಿತ್ರವೃಂದದಿಂದ ಉಪಯುಕ್ತ ಸಲಹೆ ದೊರೆತು ವೃತ್ತಿಯಲ್ಲಿ ಯಶಸ್ಸು.

ಧನು: ಕುಟುಂಬ ಸದಸ್ಯರಲ್ಲಿ ಅಸಹನೆ ಕಂಡುಬರಬಹುದು. ವಿದ್ಯಾರ್ಥಿಗಳಿಗೆ ಅಭ್ಯಾಸದ ಮೇಲೆ ಏಕಾಗ್ರತೆ ಕಡಿಮೆಯಾದರೂ ಗುರಿ ಸಾಧನೆಗೆ ತೊಡಕಾಗದು. ನಿರುದ್ಯೋಗಿಗಳು ಉತ್ತಮ ಅವಕಾಶಕ್ಕಾಗಿ ಕಾಯಬೇಕಾದೀತು.

ಮಕರ: ಕೆಲಸ ಕಾರ್ಯಗಳಿಗೆ ವಿಘ್ನಗಳುಂಟಾದರೂ ಎದೆಗುಂದದೇ ಮುಂದುವರಿದು ಯಶಸ್ಸು ಸಾಧಿಸಲಿದ್ದೀರಿ. ಸಹೋದ್ಯೋಗಿಗಳ ಸಹಕಾರದಿಂದಾಗಿ ನೆಮ್ಮದಿ. ಹೊಂದಾಣಿಕೆಯ ಮನೋಭಾವದಿಂದ ವರ್ತಿಸಿ.

ಕುಂಭ: ಆದಾಯ ಮತ್ತು ವೆಚ್ಚಗಳೆರಡೂ ಹೆಚ್ಚಾಗುವ ಸಾಧ್ಯತೆ. ನ್ಯಾಯಾಲಯದ ಕೆಲಸ ಕಾರ್ಯಗಳಲ್ಲಿ ಪ್ರಗತಿ. ಹೊಸ ಆದಾಯದ ಮೂಲಗಳು ಗೋಚರವಾಗಲಿವೆ. ಸರಿ ತಪ್ಪುಗಳನ್ನು ಅರಿತು ಮುಂದುವರೆಯಿರಿ.

ಮೀನ: ಯಾವುದೇ ವಿಚಾರದಲ್ಲಿ ಆತುರದ ತೀರ್ಮಾನ ಬೇಡ. ಬಿಡುವಿಲ್ಲದ ಕೆಲಸ ಕಾರ್ಯಗಳಿಂದಾಗಿ ಒತ್ತಡ ಹೆಚ್ಚಾಗಿ ಮಾನಸಿಕ ಚಂಚಲತೆ ಮತ್ತು ಆಯಾಸ. ಆರೋಗ್ಯದ ಬಗ್ಗೆ ನಿರ್ಲಕ್ಷ್ಯದಿಂದಾಗಿ ಪ್ರತಿಕೂಲ ಪರಿಣಾಮ.

ನಿಮ್ಮ ಜನ್ಮದಿನ 1-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕ. ವ್ಯವಹಾರಕ್ಷೇತ್ರದಲ್ಲಿ ಸಂಘರ್ಷದ ವಾತಾವರಣ ಸೃಷ್ಟಿಯಾಗುವ ಸಾಧ್ಯತೆ. ಅನಾವಶ್ಯಕವಾಗಿ ಭಾವೋದ್ವೇಗಕ್ಕೆ ಒಳಗಾಗುವ ಪ್ರಸಂಗ ಬಂದೊದಗೀತು. ಸರ್ಕಾರಿ ಉದ್ಯೋಗದಲ್ಲಿ ಇರುವವರಿಗೆ ಕಾನೂನಿನ ಭಯ ಕಾಡುವ ಸಾಧ್ಯತೆ. ಕಠಿಣ ನಿಲುವಿನಿಂದಾಗಿ ಪಶ್ಚಾತ್ತಾಪ. ತಾಳ್ಮೆಯ ನಡೆ ಅವಶ್ಯಕ.

ಪದಬಂಧ 4735

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹೊಸ ಬಗೆಯಲ್ಲಿ ಸಂತೋಷ ಬಂದಿದೆಯಲ್ಲಾ! (3)
4.ಸತ್ತವರನ್ನು ಹೂಳುವ ಜಾಗ (3)
5.ಒಪ್ಪಂದ ಪತ್ರ (4)
6.ಬಯಕೆಯೂ ಆಗುವ ದಿಗ್ಭ್ರಮೆ (4)
8.ತಿರುಗಿ ನಿಂತು ಹೇಳಿದ ಸುಳ್ಳು (2)
10.ಹಿಸ್ಸೆಯಿಲ್ಲಿ ಉಲ್ಟಾಪಲ್ಟಾ ಆಗಿದೆ (2)
13.ರಸಭರಿತವಾದುದು (4)
14.ಈ ಪರಿ ಮಾಡಿದ ಗೇಲಿ! (4)
15.ಹಳ್ಳಿಯವನ ಬಾಯಲ್ಲಿ ಗ್ರಹಚಾರ (3)
16.ವಠಾರದವರ ಕೊಡಲಿ (3)

ಮೇಲಿಂದ ಕೆಳಕ್ಕೆ
1.ಹಳ್ಳಿಗಳಲ್ಲಿ ಕೈಗೊಳ್ಳುವ ಉದ್ಯಮ (6)
2.ಕೆಲಸಕ್ಕೆ ಬಾರದ ಮಾತು (5)
3.ಇನಾಂದಾರ ನೀಡಿರುವ ಬಹುಮಾನ (3)
5.ಗುಡಿಸಲ ಹತ್ತಿರವಿರುವ ಜಲಪಾತ (4)
7.ಹೊಟ್ಟೆ ಹೊರೆಯುವಿಕೆ (6)
9.ಸರಸ, ವಿರಸವೆರಡೂ ಸಮನಾಗಿರುವಿಕೆ (4)
11.ಸಣ್ಣ ಪ್ರಾಂತ್ಯದ ಮುಖಂಡ (5)
12.ತಿಳಿವಳಿಕೆ ಹೀಗೆ ಬಂದಿದೆ (3)



4734ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಂಧಾಮ 3.ಹುಸಿನಗು
5.ನೆನಪು 6.ನಿಕ್ಷೇಪ 8.ಕುಶಲ
9.ಅಹಿತ 10.ರಥಿಕ 12.ವರ್ಜನ
14.ನಿಯಂತ್ರಣ 15.ದುರಾಚಾರ

ಮೇಲಿಂದ ಕೆಳಕ್ಕೆ:
1.ಪಯಸ್ವಿನಿ
2.ಮದ್ದಾನೆ 3.ಹುರುಪು
4.ಗುರುಕುಲ 7.ಪರ್ವತ
8.ಕುಬೇರ 9.ಅವಧಾನಿ
11.ಕಳೇವರ 12.ವರುಣ
13.ನಗದು

ಸುಡೊಕು 5121

			4		2		7	6
3		6				2		5
	2			5			8	
8		5						1
			5	9	3		2	
7		2		6				4
				2		8		7
2		7					6	
6			7		9	4		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5120 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಪರಸ್ಪರ ಅಂತರ ಕಾಯ್ದುಕೊಳ್ಳಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಪೂಜ್ಯ ತಾಯಿಯವರಾದ ದಿವಂಗತ ರಾಮಭದ್ರಯ್ಯ ಅವರ ಧರ್ಮಪತ್ನಿ
ಶ್ರೀಮತಿ ಪದ್ಮಮ್ಮ
ಅವರು ತಾ.22.9.2021 ರಂದು ದೈವಾಧೀನರಾದರು ಎಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂದವಾದ ಉತ್ತರಾಕ್ರಿಯಾದಿಗಳು ದಿನಾಂಕ: 02.10.2021 ರಂದು ಶನಿವಾರ ಬೆಳಿಗ್ಗೆ 9ಕ್ಕೆ ವೈಕುಂಠ ಸಮಾರಾಧನೆ ದೊಡ್ಡಬಳ್ಳಾಪುರ ನಗರದ ಅರಣ್ಯ ಇಲಾಖೆ ಸಮೀಪದ ಮೃತರ ಸ್ವಗೃಹದಲ್ಲಿ ನಡೆಯಲಿದೆ.
ಇಂತಿ ದುಃಖತಪ್ತರು:
ಆರ್.ಚಂದ್ರತೇಜಸ್ವಿ, ಆರ್.ಗೋವಿಂದರಾಜು, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗ.

ನಾಲ್ಕನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಬಿ. ಸಿ. ಮೀನಾಕ್ಷಮ್ಮನವರು
ನಿನ್ನ ನಡೆ, ನುಡಿ ಮತ್ತು
ತತ್ವಗಳು ನನಗೆ ದಾರಿದೀಪ
ಹಾಗೂ ನಿನ್ನ ನೆನಪುಗಳು
ಸದಾ ನನ್ನಲ್ಲಿ ಜೀವಂತವಾಗಿವೆ.
ಸದಾ ನಿನ್ನ ಸ್ಮರಣೆಯೊಂದಿಗೆ
ಪತಿ: ಡಿ. ಬಿ. ಕುಮಾರಾಚಾರ್

3ನೇ ವರ್ಷದ ಸ್ಮರಣೆ

ಡಾ. ಎಸ್. ಅದೀಪ್
ಬಾಳು ಅರುಳುವ ಮುನ್ನ
ಬದುಕು ಮುಗಿಸಿ
ಅನುಕ್ಷಣವೂ ನೆನಪಾಗಿ
ಜೊತೆಯಲ್ಲಿ ನಿಂತಿರುವೆ
ಕುಟುಂಬವರ್ಗದವರು

ವೈಕುಂಠ ಸಮಾರಾಧನೆ

ಶ್ರೀ ಜಿ. ಭಗವಾನ್
ಜನನ: 08-08-1931 – ಮರಣ: 22-09-2021
ನನ್ನ ಪೂಜ್ಯ ಪತಿದೇವರಾದ ಶ್ರೀ ಜಿ. ಭಗವಾನ್‌ರವರು ದಿನಾಂಕ 22-09-2021 ಬುಧವಾರದಂದು ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ವೈಕುಂಠ ಸಮಾರಾಧನೆಯನ್ನು ದಿನಾಂಕ 02-10-2021 ಶನಿವಾರದಂದು ಮಧ್ಯಾಹ್ನ 12:00 ಘಂಟೆಗೆ ಈ ಕೆಳಕಂಡ ಸ್ಥಳದಲ್ಲಿ ನೆರವೇರಿಸಲಾಗುವುದು
ದಯಮಾಡಿ ತಾವು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಸ್ಥಳ: "ತವರುಮನೆ" ಜಾಲಪ್ಪ ಕಾಲೇಜ್ ರಸ್ತೆ, ಶಾಂತಿನಗರ, ಬಸವೇಶ್ವರ ಸಮುದಾಯ ಭವನದ ಎದುರು (ಮುತ್ಯಾಲಮ್ಮ ದೇವಸ್ಥಾನದ ಹತ್ತಿರ) ದೊಡ್ಡಬಳ್ಳಾಪುರ.
ದುಃಖತಪ್ತರು: ಮಡದಿ ಶ್ರೀಮತಿ ಆರ್.ಎಲ್. ಜಯಮ್ಮ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ಮೊಬೈಲ್ ನಂ. 9449039839

LOOKING TO BUILD, BUY OR SELL A PROPERTY — Please refer Classifieds on Sunday

ಮಲೆನಾಡು, ಕರಾವಳಿ: ಹವಾಮಾನ ವೈಪರೀತ್ಯದ ಪ್ರಭಾವ, ಬೆಳೆಗಾರರು ಕಂಗಾಲು

ಅಡಿಕೆಗೆ ಎಲೆಚುಕ್ಕಿ ರೋಗ

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಮಲೆನಾಡು, ಕರಾವಳಿ ಭಾಗದ ಅಡಿಕೆ ತೋಟಗಳಲ್ಲಿ ಎಲೆಚುಕ್ಕಿ ರೋಗ ವೇಗವಾಗಿ ಹರಡುತ್ತಿದ್ದು, ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ.

ಅಡಿಕೆ ಸಸಿಗಳು, ಸಸಿ ತೋಟಗಳಲ್ಲೇ ರೋಗ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಗಾಳಿಯಲ್ಲಿ ವೇಗವಾಗಿ ಮರದಿಂದ ಮರಕ್ಕೆ ಹಬ್ಬುತ್ತಿದೆ. ಪರಿಣಾಮ ಅಡಿಕೆ ಮರದ ಹೆಡೆಗಳಲ್ಲಿ ಚುಕ್ಕಿ ಕಾಣಿಸಿಕೊಂಡು ನಂತರ ಹಳದಿ ಬಣ್ಣಕ್ಕೆ ತಿರುಗಿ ಒಣಗುತ್ತಿವೆ. ಹೆಡೆಗಳು ನೆಲಕ್ಕೆ ಬೀಳುವ ಜತೆಗೆ ಅಡಿಕೆ ಕಾಯಿಗಳೂ ಉದುರುತ್ತಿವೆ. ಕೆಲವು ಭಾಗಗಳಲ್ಲಿ ಮರಗಳಿಗೂ ಹಾನಿಯಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಎರಡು ಸಾವಿರ, ದಕ್ಷಿಣ ಕನ್ನಡದಲ್ಲಿ 9 ಸಾವಿರ, ಚಿಕ್ಕಮಗಳೂರಿನಲ್ಲಿ 300 ಹೆಕ್ಟೇರ್ ಪ್ರದೇಶದಲ್ಲಿ ರೋಗ ಹಬ್ಬಿದೆ. ಸುಮಾರು 7 ಲಕ್ಷ ಮರಗಳಿಗೆ ಹಾನಿಯಾಗಿದೆ ಎನ್ನುತ್ತಾರೆ ತೀರ್ಥಹಳ್ಳಿ ತಾಲ್ಲೂಕು ಗುಡ್ಡೇಕೇರಿ ಅಡಿಕೆ ಬೆಳೆಗಾರ ಶಶಾಂಕ್ ಹೆಗ್ಡೆ, ಮ್ಯಾಮ್ಕೋಸ್ ನಿರ್ದೇಶಕರಾದ ಸಿ.ಬಿ.ಈಶ್ವರ್, ನರೇಂದ್ರ ಬೇಳೆಗದ್ದೆ.

ಅಡಿಕೆ ಮರದ ಹೆಡೆಗೆ ಎಲೆಚುಕ್ಕಿ ರೋಗ ಕಾಣಿಸಿಕೊಂಡಿರುವುದು

‘ಹವಾಮಾನ ವೈಪರೀತ್ಯಗಳ ಸಮಯದಲ್ಲಿ ಹಿಂದೆಯೂ ಈ ರೋಗ ಕಾಣಿಸಿಕೊಳ್ಳುತ್ತಿತ್ತು. ಇದೇ ಮೊದಲ ಬಾರಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹರಡುತ್ತಿದೆ. ನಿತ್ಯವೂ ರೋಗ ಹರಡುವಿಕೆಯ ವ್ಯಾಪ್ತಿ ವಿಸ್ತಾರವಾಗುತ್ತಿದೆ. ಒಂದು ಲೀಟರ್ ನೀರಿಗೆ ಎರಡು ಗ್ರಾಂನಷ್ಟು ಕಾರ್ಬನ್ ಡೈಸಿಮ್ ಮತ್ತು ಮ್ಯಾಂಗೊಜಬ್ ಮಿಶ್ರಣ ಮಾಡಿ ಸಿಂಪಡಣೆ ಮಾಡಿದರೆ ರೋಗ ಹತೋಟಿಗೆ ಬರುತ್ತದೆ. ಹೊಸನಗರ, ತೀರ್ಥಹಳ್ಳಿ ತಾಲ್ಲೂಕಿನ ಕೆಲವೆಡೆ ನಿರಂತರವಾಗಿ ಮಳೆ ಸುರಿಯುತ್ತಿರುವ ಪರಿಣಾಮ ಔಷಧ ಸಿಂಪಡಿಸಲು ಆಗದೆ ಹತೋಟಿ ಸಾಧ್ಯವಾಗಿಲ್ಲ. ಹಲವು ತೋಟಗಳಿಗೆ ಭೇಟಿ ನೀಡಿ ಬೆಳೆಗಾರರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ’ ಎಂದು ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯದ ಅಡಿಕೆ ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ನಾಗರಾಜ ಅಡಿವಪ್ಪರ್ ಮಾಹಿತಿ ನೀಡಿದರು.

> ಎಲೆಚುಕ್ಕಿ ರೋಗ ಕುರಿತು ಸಮಗ್ರ ಅಧ್ಯಯನ ನಡೆಸಲು ಜಿಕೆವಿಕೆ ವಿಜ್ಞಾನಿಗಳನ್ನು ಕಳುಹಿಸಲಾಗುವುದು. ನಿಯಂತ್ರಣಕ್ಕೆ ಸರ್ಕಾರ ಸಕಲ ನೆರವು ನೀಡಲಿದೆ
> **ಆರಗ ಜ್ಞಾನೇಂದ್ರ**, ಅಧ್ಯಕ್ಷ, ಅಡಿಕೆ ಟಾಸ್ಕ್‌ಫೋರ್ಸ್ ಸಮಿತಿ

> ಹೊಸನಗರ, ಸಾಗರ, ತೀರ್ಥಹಳ್ಳಿ ತಾಲ್ಲೂಕಿನ ಶೇ 25 ಭಾಗದಲ್ಲಿ ರೋಗ ಹರಡಿದೆ. ನಿಯಂತ್ರಣಕ್ಕೆ ಇಲಾಖೆ ಕ್ರಮ ಕೈಗೊಂಡಿದೆ
> **ಕೆ.ರಾಮಚಂದ್ರ**, ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ, ಶಿವಮೊಗ್ಗ

ಪ್ರಜಾವಾಣಿ ವಿಶೇಷ

ಎಲೆಚುಕ್ಕಿ ರೋಗವನ್ನು ತುಂಡೆ ರೋಗ, ಶಿಲೀಂಧ್ರ ರೋಗವೆಂದೂ ಕರೆಯುತ್ತಾರೆ. ಕೊಲಟೊಸ್ಟ್ರೈಕಮ್ ಶಿಲೀಂಧ್ರದಿಂದ ಈ ರೋಗ ಬರುತ್ತದೆ. ಅರಣ್ಯಗಳ ಬಳಿ ಇರುವ ತೋಟಗಳಲ್ಲೇ ಹೆಚ್ಚು ಕಾಣಿಸಿಕೊಂಡಿದೆ. ರೋಗ ಅಧಿಕ ಪ್ರಮಾಣದಲ್ಲಿ ಕಾಣಿಸಿಕೊಂಡಿರುವ ಹೊಸನಗರ ತಾಲ್ಲೂಕು ನಿಟ್ಟೂರು ಸುತ್ತಲ ತೋಟಗಳಿಗೆ ಕೇರಳದ ಸೆಂಟ್ರಲ್ ಪ್ಲಾಂಟೇಷನ್ ಕ್ರಾಪ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ (ಸಿಪಿಸಿಆರ್‌ಐ) ವಿಜ್ಞಾನಿಗಳ ತಂಡ ಭೇಟಿ ಪರಿಶೀಲನೆ ನಡೆಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 96 ಸಾವಿರ ಹೆಕ್ಟೇರ್ ಅಡಿಕೆ ತೋಟವಿದ್ದು, ಶೇ 10ರಷ್ಟು ತೋಟಗಳಲ್ಲಿ ಕಾಣಿಸಿಕೊಂಡಿದೆ. ಉಡುಪಿ, ಉತ್ತರ ಕನ್ನಡ ಜಿಲ್ಲೆಯ ತೋಟಗಳು ಎಲೆಚುಕ್ಕೆ ರೋಗದಿಂದ ಮುಕ್ತವಾಗಿವೆ.

‘ಎಲೆ ಚುಕ್ಕಿ ರೋಗವು ತಕ್ಷಣಕ್ಕೆ ಫಸಲಿನ ಮೇಲೆ ಪ್ರಭಾವ ಬೀರುವುದಿಲ್ಲ. ಆದರೆ, ಅಡಿಕೆ ಎಲೆಗಳು (ಸೋಗೆ) ಬೇಗನೆ ಹಣ್ಣಾಗಿ ಉದುರಲು ಆರಂಭಿಸುತ್ತವೆ. ಗಿಡದ ಬೆಳವಣಿಗೆ ಮೇಲೆ ದೀರ್ಘಕಾಲೀನ ಪರಿಣಾಮ ಬೀರುತ್ತದೆ. ಆರಂಭದಲ್ಲೇ ನಿಯಂತ್ರಿಸಬೇಕು’ ಎನ್ನುತ್ತಾರೆ ಕೃಷಿಕ ಉಪ್ಪಿನಂಗಡಿಯ ರಾಮ್‌ಪ್ರಸಾದ್.

ಡಿಪ್ಲೊಮಾ ಪಿಯುಗೆ ಸಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ವರ್ಷಗಳ ಡಿಪ್ಲೊಮಾ ಕೋರ್ಸ್ ಇನ್ನುಮುಂದೆ ಪಿಯುಸಿ ವಿದ್ಯಾರ್ಹತೆ ತತ್ಸಮಾನ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಘೋಷಿಸಿದೆ.

ಈ ವಿಷಯದಲ್ಲಿ ಇದ್ದ ಗೊಂದಲ ನಿವಾರಿಸಲು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಹಲವು ಸುತ್ತಿನ ಸಭೆಗಳನ್ನು ನಡೆಸಿದ್ದರು. ಅವರ ನಿರ್ದೇಶನದ ಮೇರೆಗೆ ಇಲಾಖೆ ಈ ತೀರ್ಮಾನ ಕೈಗೊಂಡಿದೆ.

ನೇಮಕಾತಿ ಮತ್ತು ಉನ್ನತ ಶಿಕ್ಷಣ ಪಡೆಯಲು ಪಿಯುಸಿ ಉತ್ತೀರ್ಣ ಮಾನದಂಡವಾಗಿತ್ತು. ಇನ್ನು ಮುಂದೆ ನೇರ ನೇಮಕಾತಿ ಅಥವಾ ಅನುಕಂಪದ ಆಧಾರದ ಮೇಲೆ ನೇಮಕಾತಿ ಅವಕಾಶ ಪಡೆಯಲು ಹಾಗೂ ಉನ್ನತ ಶಿಕ್ಷಣದ ಪ್ರವೇಶಕ್ಕೆ ತಾಂತ್ರಿಕ ಶಿಕ್ಷಣ ಇಲಾಖೆಯ ಮೂರು ವರ್ಷಗಳ ಡಿಪ್ಲೊಮಾ ಶಿಕ್ಷಣವನ್ನು ಪಿಯುಸಿಗೆ ಸಮಾನ ಎಂದು ಆದೇಶದಲ್ಲಿ ತಿಳಿಸಲಾಗಿದೆ.

2015ಕ್ಕಿಂತ ಮೊದಲು ಡಿಪ್ಲೊಮಾ ಕೋರ್ಸ್‌ಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಕೆಪಿಎಸ್‌ಸಿ ನಡೆಸುವ ಇಲಾಖಾ ಪರೀಕ್ಷೆಗಳ ಜತೆಗೆ ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದನ್ನು ಕಡ್ಡಾಯ ಮಾಡಲಾಗಿದೆ.

₹28 ಲಕ್ಷ ಮೌಲ್ಯದ 685 ಚೀಲ ಖಾರದ ಪುಡಿ ಜಪ್ತಿ

ಬ್ಯಾಡಗಿ (ಹಾವೇರಿ ಜಿಲ್ಲೆ): ಪಟ್ಟಣದ ಮೆಣಸಿನಕಾಯಿ ವರ್ತಕ ಆರ್.ಎಸ್. ಮೇಲಗಿರಿ ಆ್ಯಂಡ್ ಕಂಪನಿ ಇವರಿಗೆ ಸಂಬಂಧಿಸಿದ ₹28 ಲಕ್ಷ ಮೌಲ್ಯದ 685 ಖಾರದ ಪುಡಿ ಚೀಲಗಳನ್ನು ನಿಗದಿತ ಸ್ಥಳಕ್ಕೆ ತಲುಪಿಸದೇ ಮೋಸ ಮಾಡಿದ ಇಬ್ಬರು ಆರೋಪಿಗಳನ್ನು ಬಂಧಿಸಿ ಗುರುವಾರ ಇಲ್ಲಿನ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಪುಣೆಯ ಸ್ವೀಟ್ ತಯಾರಿಸುವ ರಾಜೇಶ ವೇದ್ ಹಾಗೂ ತೆಲಂಗಾಣದ ಸುಶೀಲ್ ಭೇರಾ ಬಂಧಿತರು. ಪುಣೆಯ ಭೋಲೇನಾಥ ನಗರದ ಗೋದಾಮಿನಲ್ಲಿ ಸಂಗ್ರಹಿಸಿದ್ದ 685 ಚೀಲ ಖಾರದ ಪುಡಿ ಜಪ್ತಿ ಮಾಡಲಾಗಿದೆ.

ನಟಿ ಸೌಜನ್ಯಾ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು ದಕ್ಷಿಣ ತಾಲ್ಲೂಕಿನ ದೊಡ್ಡಬೆಲೆ ಗ್ರಾಮದ ಅಪಾರ್ಟ್‌ಮೆಂಟ್‌ವೊಂದರಲ್ಲಿ ಕಿರುತೆರೆ ನಟಿ ಸೌಜನ್ಯಾ (ಸವಿ ಮಾದಪ್ಪ) (25) ನೇಣು ಬಿಗಿದುಕೊಂಡು ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸ್ಥಳದಲ್ಲಿ ಪೊಲೀಸರಿಗೆ ನಾಲ್ಕು ಪುಟಗಳ ಡೆಟ್‌ನೋಟ್ ದೊರೆತಿದೆ. ‘ನನ್ನ ಸಾವಿಗೆ ನಾನೇ ಕಾರಣ. ಇತ್ತೀಚೆಗೆ ನನ್ನ ಮಾನಸಿಕ ಆರೋಗ್ಯ ಸರಿಯಿಲ್ಲ. ಆರೋಗ್ಯ ಸಹ ಕೈ ಕೊಟ್ಟಿದೆ. ವೈಯಕ್ತಿಕ ಕಾರಣಗಳಿಗೆ ಮನನೊಂದು ಈ ನಿರ್ಧಾರಕ್ಕೆ ಬಂದಿದ್ದೇನೆ’ ಎಂದು ಮರಣ ಪತ್ರ ಬರೆದಿರುವ ಸೌಜನ್ಯಾ, ಇದಕ್ಕಾಗಿ ಹೆತ್ತವರ ಕ್ಷಮೆ ಕೇಳಿದ್ದಾರೆ.

ಇತ್ತೀಚೆಗೆ ಇನ್‌ಸ್ಟಾಗ್ರಾಂನಲ್ಲಿ ಪುಟ್ಟ ಬರಹವೊಂದನ್ನು ಪೋಸ್ಟ್ ಮಾಡಿದ್ದ ಸೌಜನ್ಯಾ, ನಿಮ್ಮ ಜೀವನದ ಬಗ್ಗೆ ಹಾಗೂ ಗುರಿ ಬಗ್ಗೆ ಹೆಚ್ಚು ಗಮನ ಕೇಂದ್ರೀಕರಿಸಿದರೆ ನೀವು ನಿಮ್ಮ ಜೀವನದಲ್ಲಿ ಸಾಕಷ್ಟು ಜನರನ್ನು ಕಳೆದುಕೊಳ್ಳಬೇಕಾಗುತ್ತದೆ’ ಎಂದು ಅವರು ಬರೆದುಕೊಂಡಿದ್ದರು.

ಸೌಜನ್ಯಾ

‘ಯಾರನ್ನೂ ಕೀಳಾಗಿ ಕಾಣಬೇಡಿ. ನಗುತ್ತಾ ಇರುವ ವ್ಯಕ್ತಿಗಳ ಹಿಂದೆಯೂ ಸಾಕಷ್ಟು ನೋವಿರುತ್ತದೆ, ಆ ಬಗ್ಗೆ ಯಾರಿಗೂ ಗೊತ್ತಿರುವುದಿಲ್ಲ’ ಎಂದು ಅವರು ಇನ್ನೊಂದು ಪೋಸ್ಟ್‌ನಲ್ಲಿ ಬರೆದಿದ್ದರು. ‘happiness, sadness’ ಹ್ಯಾಶ್ ಟ್ಯಾಗ್ ಹಾಕಿ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿ, ಗೆಳೆಯರು ಹಾಗೂ ಸಹೋದರರ ಫೋಟೋ ಹಾಕಿ ಅವರಿಗೆ ಧನ್ಯವಾದ ಹೇಳಿದ್ದರು. ಇದಾದ ಬೆನ್ನಲ್ಲೇ ಅವರು ಆತ್ಮಹತ್ಯೆಗೆ ಶರಣಾಗಿದ್ದಾರೆ.

‘ಈ ಯುವತಿ ಕಳೆದ ಒಂದೂವರೆ ವರ್ಷದಿಂದ ಅಪಾರ್ಟ್‌ಮೆಂಟ್‌ನಲ್ಲಿ ಒಬ್ಬರೇ ವಾಸವಿದ್ದರು. ಮೇಲ್ನೋಟಕ್ಕೆ ಆತ್ಮಹತ್ಯೆ ಎಂದು ಕಂಡುಬಂದಿದ್ದು, ನಾನಾ ಆಯಾಮಗಳ ಕುರಿತು ತನಿಖೆ ನಡೆಸುತ್ತಿದ್ದೇವೆ’ ರಾಮನಗರ ಎಸ್ಪಿ ಗಿರೀಶ್ ತಿಳಿಸಿದರು.

ಕೊಡಗು ಜಿಲ್ಲೆಯ ಕುಶಾಲನಗರದವರಾದ ಸೌಜನ್ಯಾ ‘ಚೌಕಟ್ಟು’, ‘ಫನ್’ ಸಿನಿಮಾಗಳಲ್ಲಿ ನಟಿಸಿದ್ದರು. ಹಲವು ಧಾರಾವಾಹಿಗಳಲ್ಲೂ ಅಭಿನಯಿಸಿದ್ದರು. ಕುಂಬಳಗೋಡು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಹೇಡಿ ಅಲ್ಲ’ (ಮಡಿಕೇರಿ ವರದಿ): ‘ನನ್ನ ಮಗಳು ಆತ್ಮಹತ್ಯೆ ಮಾಡಿಕೊಳ್ಳುವಂಥ ಹೇಡಿ ಅಲ್ಲ. ಬುಧವಾರ ಸಂಜೆ ಕರೆ ಮಾಡಿ ಎರಡು ದಿನದಲ್ಲಿ ಕೊಡಗಿಗೆ ಬರುವುದಾಗಿ ತಿಳಿಸಿದ್ದಳು. ಸಾವಿನ ಬಗ್ಗೆ ಸಂಶಯವಿದ್ದು, ಪೊಲೀಸರು ತನಿಖೆ ನಡೆಸಬೇಕು’ ಎಂದು ಸೌಜನ್ಯಾ ಅವರ ತಂದೆ, ಕುಶಾಲನಗರದ ನಿವಾಸಿ ಮಾದಪ್ಪ ಹೇಳಿದ್ದಾರೆ.

ಕಿರುತೆರೆ ನಟ ಮತ್ತು ಸೌಜನ್ಯ ಸಹಾಯಕ ಮಹೇಶ್ ವಿರುದ್ಧ ನಟಿಯ ತಂದೆ ದೂರು ನೀಡಿದ್ದಾರೆ.

ಬೆಂಗಳೂರು ಮೂಲದ ಕಂಪನಿಯ ಆಸ್ತಿ ಜಪ್ತಿ ಮಾಡಿದ ಇ.ಡಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಗೆ ಸಂಬಂಧಿಸಿ ಜಮ್ಮು ಮತ್ತು ಕಾಶ್ಮೀರದ ಬ್ಯಾಂಕ್‌ಗೆ ಸಾಲ ವಂಚನೆಯ ಆರೋಪದಡಿ ಜಾರಿ ನಿರ್ದೇಶನಾಲಯವು (ಇ.ಡಿ), ಬೆಂಗಳೂರು ಮೂಲದ ಸಂಬಾರ ಉತ್ಪನ್ನಗಳ ಕಂಪನಿಯ ₹145 ಕೋಟಿ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಿದೆ.

ಎಸ್.ಎ. ರಾವ್‌ತರ್ ಸ್ಪೈಸಸ್ ಪ್ರೈ. ಲಿ ಕಂಪನಿಗೆ ಸೇರಿದ ಕಟ್ಟಡ, ಅಂಗಡಿಗಳು, ಪ್ಲಾಟ್‌ಗಳು ಮತ್ತು ಜಮೀನುಗಳನ್ನು ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆಯಡಿ (ಪಿಎಂಎಲ್‌ಎ) ಅಡಿಯಲ್ಲಿ ವಶಕ್ಕೆ ಪಡೆಯಲಾಗಿದೆ ಎಂದು ಇ.ಡಿ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ಜಮ್ಮು ಮತ್ತು ಕಾಶ್ಮೀರದ ಭ್ರಷ್ಟಾಚಾರ ನಿಗ್ರಹ ದಳದ ಸಿಬ್ಬಂದಿ, ಕಂಪನಿಯ ಪ್ರವರ್ತಕರಾದ ಸೈಯದ್ ಅನಿಶ್ ರಾವ್‌ತರ್ ಹಾಗೂ ಬೆಂಗಳೂರಿನಲ್ಲಿರುವ ಜೆ ಅಂಡ್ ಕೆ ಬ್ಯಾಂಕ್ ಶಾಖೆಯಲ್ಲಿ ಆಗಸ್ಟ್ 2019ರಲ್ಲಿ ವ್ಯವಸ್ಥಾಪಕ ಆಗಿದ್ದವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

ಎಂಎನ್‌ಸಿಗೆ ಅಕೌಂಟೆಂಟ್ಸ್, ರಿಸೆಪ್ಷನಿಸ್ಟ್, ಆಫೀಸ್/ಅಕೌಂಟ್ಸ್ ಅಸಿಸ್ಟೆಂಟ್ಸ್, ಕಂಪ್ಯೂಟರ್ ಆಪರೇಟರ್ಸ್, ಕ್ಲಾರ್ಕ್ಸ್, ಟೆಲಿಕಾಲರ್ಸ್, ಪರ್ಛೇಸ್/ಸ್ಟೋರ್ ಕೀಪರ್ಸ್. “ರಮ್ಯ”: 7204367465/ 8050107101

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 7618763886, 7618760283

ತಕ್ಷಣ ಬೇಕಾಗಿದ್ದಾರೆ ಮಾರ್ಕೇಟಿಂಗ್ ಅಲ್ಲ MNC, TVS, TOYOTA, BRITANIYA ಕಂಪನಿಗಳಿಗೆ 7th,SSLC, PUC, Degree, DIPLOMA ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಊಟದೊಂದಿಗೆ ESI/PFನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 7829400441, 7829416611

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಐಟಿಐ, ಡಿಪ್ಲೊಮಾದವರು 16,600-62000/-. ವಸತಿಯೂಟದೊಂದಿಗೆ 8123884588, 8123884788

ಕರ್ನಾಟಕದಾದ್ಯಂತ ಹೆಸರಾಂತ 450 ಕಂಪನಿ ಹಾಗೂ Office ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ ನೇರನೇಮಕಾತಿ, ವಸತಿಯೂಟದೊಂದಿಗೆ 16,200-65,000/- 7022366461, 8904049301

ಖಾಸಗಿ ಬ್ಯಾಂಕ್ ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ 15000-28000 ಸಂರ್ಪಕಿಸಿ:8904879948/ 8904879491

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC, PUC,Degree ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿ ಊಟದೊಂದಿಗೆ ESI/PF ನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 8884486100, 7829919947

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

ವಿಡಿಯೋಕಾನ್, TVS, TOYOTA, ಬ್ರಿಟಾನಿಯಾ MNCಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 7899778278, 9611715755

ಶ್ರೀ ಶಕ್ತಿ ಹೆಲ್ತ್ ಕೇರ್ ಗೆ ಯುವಕ-ಯುವತಿಯರು Helper ಕೆಲಸಕ್ಕೆ ಬೇಕಾಗಿದ್ದಾರೆ.ತಿಂಗಳಿಗೆ ವೇತನ 10,000-ರಿಂದ 12,000/- ಸ್ಥಳ: ಶೇಷಾದ್ರಿಪುರಂ, ಬೆಂಗಳೂರು. 90196 26612

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

★ಮನೆಯಿಂದಲೇ ಮೆಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.9060472077, ಶಿವಮೊಗ್ಗ.9008012895

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8103990990

ಭವಿಷ್ಯ

Astrology

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಶ್ರೀಚಕ್ರ, ಜ್ಯೋತಿಷ್ಯ ಪೀಠಂ ಕಠಿಣ ನಿಗೂಢ ಗುಪ್ತ ಸಮಸ್ಯೆಗಳಿಗೆ ಸಲಹೆ ಪಡೆಯಿರಿ. ಯಾವುದೇ ವಶೀಕರಣಗಳಿಗೆ 2865/-. 50 ವರ್ಷದ ಅನುಭವ 9845899127.

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★॥ಶ್ರೀಚಾಮುಂಡೇಶ್ವರಿದೇವಿ ಜ್ಯೋತಿಷ್ಯರು॥★ ಸ್ತ್ರೀಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಪರಿಹಾರ. ರಾಘವೇಂದ್ರ_ಗುರೂಜಿ. 8050061378

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ,ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

ಪ್ರವಾಸ

Travel

10.11.2021, 4 ದಿನಗಳ ಗೋವಾ, ದೂದ್- ಸಾಗರ್. 24.11.2021, 12 ದಿನಗಳ ಗುಜರಾತ್, ಮಧ್ಯಪ್ರದೇಶ. 18.11.2021, 12 ದಿನಗಳ ಕಾಶಿ, ನೇಪಾಳ, ಮುಕ್ತಿನಾಥ. 11.11.2021, 12 ದಿನಗಳ ಸಂಪೂರ್ಣ ರಾಜಸ್ಥಾನ್. 11.11.2021 11 ದಿನಗಳ ಪುರಿ, ಕೊಲ್ಕತಾ, ದಾರ್ಜೀಲಿಂಗ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು. 9880847001, 9342848791

ಶ್ರೀ ರಾಜರಾಜೇಶ್ವರಿ ಟೂರ್, 9743895346/ 9739618243. 11-11-2021, 7ದಿನ ಪ್ರವಾಸ ವೈಷ್ಣೋದೇವಿ, ಶಿವಕೋರಿ, ಜಮ್ಮು ಡಾಲ್ ಹೌಸಿ, ಧರ್ಮಶಾಲ, ದೆಹಲಿ

28/10/21ರಿಂದ ವಿಮಾನದಲ್ಲಿ ನೇಪಾಳ ಪಶುಪತಿನಾಥ್ ಮುಕ್ತಿನಾಥ್ ಲುಂಬಿನಿ ಮತ್ತು ಕಾಶಿ ಶ್ರೀ ರಾಮ್ ಟೂರ್: 9036060610 / 9108933383

ಪೂರಿ ಜಗನ್ನಾಥ ಪ್ರವಾಸ: 3ದಿನಗಳು ವಿಮಾನದಲ್ಲಿ 16-11-2021 ಕಂದಗಿರಿ, ಉದಯಗಿರಿ, ಮುಕ್ತೇಶ್ವರ ದೇವಸ್ಥಾನ ಜಗನ್ನಾಥ, ಕೊನಾರ್ಕ್ ಸೂರ್ಯ ದೇವಸ್ಥಾನ ಹಾಗೂ ಇತರೆ. 9019462508, 9008381022

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ **Classifieds**
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಹಣಾಹಣಿ: ವರುಣ್, ರವಿ ಬಿಷ್ಣೋಯಿ ಮೇಲೆ ಭರವಸೆ

ರಾಹುಲ್ ಬಳಗಕ್ಕೆ ಕಠಿಣ ಹಾದಿ

ದುಬೈ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡ ಶುಕ್ರವಾರ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಎದುರಿಸಲಿದೆ.

11 ಪಂದ್ಯಗಳಿಂದ ಎಂಟು ಅಂಕ ಗಳಿಸಿರುವ ರಾಹುಲ್ ಬಳಗಕ್ಕೆ ಪ್ಲೇ ಆಫ್ ಪ್ರವೇಶದ ಹಾದಿಯು ಕಠಿಣವಾಗಿದೆ. ಇನ್ನುಳಿದಿರುವ ಮೂರು ಪಂದ್ಯಗಳಲ್ಲಿಯೂ ಉತ್ತಮ ರನ್ ಸರಾಸರಿಯಿಂದ ಗೆದ್ದರೆ ಅವಕಾಶ ದೊರೆಯುವ ಸಾಧ್ಯತೆ ಇದೆ. ಆದರೆ, 10 ಪಾಯಿಂಟ್‌ಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿರುವ ಏಯಾನ್ ಮಾರ್ಗನ್ ಬಳಗದ ಸವಾಲನ್ನು ಮೆಟ್ಟಿನಿಲ್ಲುವುದು ಸುಲಭವಲ್ಲ.

ಟೂರ್ನಿಯಲ್ಲಿ ತಡವಾಗಿ ಯಾದರೂ ಪುಟಿದೆದ್ದಿರುವ ಕೋಲ್ಕತ್ತ ತಂಡದ ನವಪ್ರತಿಭೆ ವೆಂಕಟೇಶ್ ಅಯ್ಯರ್, ಆಲ್ ರೌಂಡರ್ ಸುನೀಲ್ ನಾರಾಯಣ್, ಕನ್ನಡಿಗ ಬೌಲರ್ ಪ್ರಸಿದ್ಧ ಕೃಷ್ಣ ಮತ್ತು ಲಾಕಿ ಫರ್ಗ್ಯುಸನ್ ಅವರ ಸವಾಲನ್ನು ಸಮರ್ಥವಾಗಿ ಎದುರಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ 'ನಿಗೂಢ ಸ್ಪಿನ್ನರ್' ವರುಣ್ ಚಕ್ರವರ್ತಿಯ ದಾಳಿಯನ್ನೂ ಎದುರಿಸಿ ನಿಲ್ಲಬೇಕು.

ಪಂಜಾಬ್ ಬಳಗದಲ್ಲಿ ಪ್ರತಿಭಾವಂತರ ದೊಡ್ಡ ದಂಡು ಇದೆ. ಆದರೆ ತಂಡವಾಗಿ ಆಡುವಲ್ಲಿ ಸೋಲುತ್ತಿದೆ. ಸ್ಪಿನ್ನರ್ ರವಿ ಬಿಷ್ಣೋಯಿ ಬಿಟ್ಟರೆ ಉಳಿದ ಬೌಲರ್‌ಗಳಿಂದ ಸ್ಥಿರ ಪ್ರದರ್ಶನ ಮೂಡಿ ಬರುತ್ತಿಲ್ಲ. ಅನುಭವಿ ಮೊಹಮ್ಮದ್ ಶಮಿ, ಏಡನ್ ಮರ್ಕರಮ್ ಮತ್ತು ಹರಪ್ರೀತ್ ಬ್ರಾರ್ ವಿಕೆಟ್ ಕಿತ್ತುವಲ್ಲಿ ಯಶಸ್ವಿಯಾಗುತ್ತಿಲ್ಲ. ಮಯಂಕ್ ಅಗರವಾಲ್ ಈ ಪಂದ್ಯದಲ್ಲಿಯೂ ಕಣಕ್ಕಿಳಿಯುವುದು ಸಂಶಯ. ಆದ್ದರಿಂದ ಇನಿಂಗ್ಸ್ ಆರಂಭದ ಹೊಣೆ ನಾಯಕ ರಾಹುಲ್ ಮೇಲೆಯೇ ಇದೆ. ಮನದೀಪ್ ಸಿಂಗ್ ಮತ್ತು ಕ್ರಿಸ್ ಗೇಲ್ ಲಯಕ್ಕೆ ಮರಳಿದರೆ ತಂಡದ ಬ್ಯಾಟಿಂಗ್ ಬಲಗೊಳ್ಳಬಹುದು.

ಕೆ.ಎಲ್. ರಾಹುಲ್ ಮತ್ತು ರವಿ ಬಿಷ್ಣೋಯಿ

ವರುಣ್ ಚಕ್ರವರ್ತಿ

ಬಲಾಬಲ

ಪಂದ್ಯಗಳು	28
ಪಂಜಾಬ್ ಜಯ	9
ಕೋಲ್ಕತ್ತ ಜಯ	19

ಪಂದ್ಯ ಆರಂಭ
ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	454
ಸಂಜು ಸ್ಯಾಮ್ಸನ್	ರಾಜಸ್ಥಾನ್	452
ಫಫ್ ಡುಪ್ಲೆಸಿ	ಚೆನ್ನೈ	435

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	26
ಆವೇಶ್ ಖಾನ್	ಡೆಲ್ಲಿ	18
ಬೂಮ್ರಾ	ಮುಂಬೈ	16

'ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯದಲ್ಲಿ ಒತ್ತಡದ ಸಂದರ್ಭದಲ್ಲಿ ನಾವು ಸರಿಯಾಗಿ ಆಡಲಿಲ್ಲ. ಅದು ಸೋಲಿಗೆ ಕಾರಣವಾಯಿತು' ಎಂದು ರಾಹುಲ್ ಹೇಳಿದ್ದಾರೆ.

ಟೂರ್ನಿಯಲ್ಲಿ 422 ರನ್ ಗಳಿಸಿರುವ ರಾಹುಲ್ ಮತ್ತು 10 ಪಂದ್ಯಗಳಿಂದ 193 ರನ್ ಗಳಿಸಿರುವ ಗೇಲ್ ಅವರಿಂದ ದೊಡ್ಡ ಇನಿಂಗ್ಸ್‌ನ ನಿರೀಕ್ಷೆ ಇದೆ. ಕೋಲ್ಕತ್ತದ ಬೌಲಿಂಗ್ ದಾಳಿಯನ್ನು ಎದುರಿಸಿ ನಿಂತರೆ ಮಾತ್ರ ದೊಡ್ಡ ಮೊತ್ತ ಪೇರಿಸಲು ಸಾಧ್ಯ. ಪ್ಲೇ ಆಫ್ ಪೈಪೋಟಿಯಲ್ಲಿ ಉಳಿಯಬೇಕಾದರೆ ಪಂಜಾಬ್ ತಂಡಕ್ಕೆ ಇದು 'ಮಾಡು ಇಲ್ಲವೇ ಮಡಿ' ಪಂದ್ಯವಾಗಲಿದೆ.

ಪ್ಲೇ ಆಫ್‌ಗೆ ಚೆನ್ನೈ ಸೂಪರ್ ಕಿಂಗ್ಸ್

ಶಾರ್ಜಾ (ಪಿಟಿಐ): ಆಲ್‌ರೌಂಡ್ ಆಟದ ಮೂಲಕ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಮಣಿಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಪ್ಲೇ ಆಫ್ ಪ್ರವೇಶಿಸಿತು.

ಗುರುವಾರ ನಡೆದ ಪಂದ್ಯದಲ್ಲಿ 135 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಚೆನ್ನೈ ತಂಡ ಇನ್ನೂ ಎರಡು ಎಸೆತ ಬಾಕಿ ಇರುವಾಗ ನಾಲ್ಕು ವಿಕೆಟ್ ಕಳೆದುಕೊಂಡು 139 ರನ್ ಗಳಿಸಿತು. 75 ರನ್‌ಗಳ ಜೊತೆಯಾಟ ಆಡಿದ ಆರಂಭಿಕ ಜೋಡಿ ಋತುರಾಜ್ ಗಾಯಕವಾಡ್ ಮತ್ತು ಫಫ್ ಡು ಪ್ಲೆಸಿ ಜಯದ ರೂವಾರಿಗಳಾದರು.

ಈ ಜಯದೊಂದಿಗೆ 18 ಪಾಯಿಂಟ್ ಗಳಿಸಿ ನಾಲ್ಕರ ಘಟ್ಟ ಪ್ರವೇಶಿಸಿತು.

ಟಾಸ್ ಸೋತು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ ತಂಡ ಜೋಶ್ ಹ್ಯಾಜಲ್ ವುಡ್ ಮತ್ತು ಡ್ವೇನ್ ಬ್ರಾವೊ ಅವರ ದಾಳಿಗೆ ನಲುಗಿ ಸಾಧಾರಣ ಮೊತ್ತ ಗಳಿಸಿತು. ಕೇನ್ ವಿಲಿಯಮ್ಸನ್ ಬಳಗವು 20 ಓವರ್‌ಗಳಲ್ಲಿ ಏಳು ವಿಕೆಟ್‌ಗಳಿಗೆ 134 ರನ್ ಗಳಿಸಿತು.

ಆರಂಭಿಕ ಬ್ಯಾಟ್ಸ್‌ಮನ್ ವೃದ್ಧಿಮಾನ್ ಸಹಾ (44; 46ಎ, 1ಬೌಂ, 2ಸಿ) ವೈಯಕ್ತಿಕವಾಗಿ ಹೆಚ್ಚು ಸ್ಕೋರ್ ಮಾಡಿದ ಬ್ಯಾಟ್ಸ್‌ಮನ್ ಎನಿಸಿಕೊಂಡರು. ನಾಲ್ಕನೇ ಓವರ್‌ನಲ್ಲಿ ಜೇಸನ್ ರಾಯ್ (2) ಮತ್ತು ಮಧ್ಯಮಕ್ರಮಾಂಕದಲ್ಲಿ ತುಸು ಹೋರಾಟ ತೋರಿದ ಅಭಿಷೇಕ್ ವರ್ಮಾ ಮತ್ತು ಅಬ್ದುಲ್ ಸಮದ್ ವಿಕೆಟ್‌ಗಳನ್ನು ಜೋಶ್ ಗಳಿಸಿದರು.

ಇನ್ನೊಂದು ತುದಿಯಿಂದ ಡಿಜೆ ಬ್ರಾವೊ, ಸನ್‌ರೈಸರ್ಸ್ ನಾಯಕ ಕೇನ್ ವಿಲಿಯಮ್ಸನ್ ಮತ್ತು ಯುವ ಆಟಗಾರ ಪ್ರಿಯಂ ಗರ್ಗ್ ಅವರ ಆಟಕ್ಕೆ ತಡೆಯೊಡ್ಡಿದರು.

13ನೇ ಓವರ್‌ನವರೆಗೂ ಇನಿಂಗ್ಸ್ ಕಟ್ಟುವ ಯತ್ನ ಮಾಡಿದ ಸಹಾ ಆಟಕ್ಕೆ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಅಂತ್ಯ ಹಾಡಿದರು. ಆಲ್‌ರೌಂಡರ್ ಜೇಸನ್ ಹೋಲ್ಡರ್ ಇನಿಂಗ್ಸ್ ಕಟ್ಟುವ ಯತ್ನವನ್ನು ಶಾರ್ದೂಲ್ ಠಾಕೂರ್ ತಡೆದರು. ದೀಪಕ್ ಚಾಹರ್ ತುಸು ದುಬಾರಿಯಾದರು. ಅವರು ವಿಕೆಟ್ ಗಳಿಸಲಿಲ್ಲ. ಮೋಯಿನ್ ಅಲಿ ಒಂದು ಓವರ್ ಮಾತ್ರ ಬೌಲಿಂಗ್ ಮಾಡಿದರು.

ಕೊನೆಯ ಹಂತದಲ್ಲಿ ಅಫ್ಗನ್ ಆಟಗಾರ ರಶೀದ್ ಖಾನ್ (ಔಟಾಗದೆ 17, 13ಎ) ಅವರ ಆಟ ಗಮನ ಸೆಳೆಯಿತು. ಹೈದರಾಬಾದ್ ತಂಡವು ಈ ಪಂದ್ಯದಲ್ಲಿಯೂ ಡೇವಿಡ್ ವಾರ್ನರ್ ಮತ್ತು ಕರ್ನಾಟಕದ ಮನೀಷ್ ಪಾಂಡೆ ಅವರನ್ನು ಕಣಕ್ಕಿಳಿಸಲಿಲ್ಲ.

ಗಾಯಕವಾಡ್ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 7ಕ್ಕೆ 134 (20 ಓವರ್)
ಜೇಸನ್ ಸಿ ಧೋನಿ ಬಿ ಹ್ಯಾಜಲ್‌ವುಡ್ 2 (7 ಎ), ವೃದ್ಧಿಮಾನ್ ಸಿ ಧೋನಿ ಬಿ ಜಡೇಜ 44 (46 ಎ, 4x1, 6x2), ವಿಲಿಯಮ್ಸನ್ ಎಲ್‌ಬಿಡಬ್ಲ್ಯು ಬಿ ಬ್ರಾವೊ 11 (11 ಎ, 4x2), ಗರ್ಗ್ ಸಿ ಧೋನಿ ಬಿ ಬ್ರಾವೊ 7 (10 ಎ), ಅಭಿಷೇಕ್ ಸಿ ಡುಪ್ಲೆಸಿ ಬಿ ಹ್ಯಾಜಲ್‌ವುಡ್ 18 (13 ಎ, 4x1, 6x1), ಸಮದ್ ಸಿ ಅಲಿ ಬಿ ಹ್ಯಾಜಲ್‌ವುಡ್ 18 (14 ಎ, 4x1, 6x1), ಹೋಲ್ಡರ್ ಸಿ ಚಾಹರ್ ಬಿ ಠಾಕೂರ್ 5 (5 ಎ), ರಶೀದ್ ಔಟಾಗದೆ 17 (13 ಎ, 4x2), ಭುವನೇಶ್ವರ್ ಔಟಾಗದೆ 2 (2 ಎ)
ಇತರೆ (ಲೆಗ್ ಬೈ 5, ನೋಬಾಲ್ 1, ವೈಡ್ 4) 10
ವಿಕೆಟ್ ಪತನ: 1-23 (ಜೇಸನ್ ರಾಯ್, 3.3), 2-43 (ಕೇನ್ ವಿಲಿಯಮ್ಸನ್, 6.3), 3-66 (ಪ್ರಿಯಂ ಗರ್ಗ್, 10.5), 4-74 (ವೃದ್ಧಿಮಾನ್ ಸಹಾ, 12.3), 5-109 (ಅಭಿಷೇಕ್ ಶರ್ಮಾ, 16.3), 6-110 (ಅಬ್ದುಲ್ ಸಮದ್, 16.5), 7-117 (ಜೇಸನ್ ಹೋಲ್ಡರ್, 18.2)
ಬೌಲಿಂಗ್: ದೀಪಕ್ ಚಾಹರ್ 4-0-32-0, ಜೋಶ್ ಹ್ಯಾಜಲ್‌ವುಡ್ 4-0-24-3, ಶಾರ್ದೂಲ್ ಠಾಕೂರ್ 4-0-37-1, ಡ್ವೇನ್ ಬ್ರಾವೊ 4-0-17-2, ರವೀಂದ್ರ ಜಡೇಜ 3-0-14-1, ಮೋಯಿನ್ ಅಲಿ 1-0-5-0

ಚೆನ್ನೈ ಸೂಪರ್ ಕಿಂಗ್ಸ್ 4ಕ್ಕೆ 139 (19.4ಓವರ್)
ಋತುರಾಜ್ ಸಿ ವಿಲಿಯಮ್ಸನ್ ಬಿ ಹೋಲ್ಡರ್ 45 (38 ಎ, 4x4, 6x2), ಡು ಪ್ಲೆಸಿ ಸಿ ಕೌಲ್ ಬಿ ಹೋಲ್ಡರ್ 41 (36 ಎ, 4x3, 6x2), ಮೋಯಿನ್ ಬಿ ರಶೀದ್ ಖಾನ್ 17 (17 ಎ, 4x2), ರೈನಾ ಎಲ್‌ಬಿಡಬ್ಲ್ಯು ಹೋಲ್ಡರ್ 2 (3 ಎ), ರಾಯುಡು ಔಟಾಗದೆ 17 (13 ಎ, 4x1, 6x1), ಧೋನಿ ಔಟಾಗದೆ 14 (11 ಎ, 4x1, 6x1)
ಇತರೆ (ವೈಡ್ 3) 3
ವಿಕೆಟ್ ಪತನ: 1-75 (ಋತುರಾಜ್ ಗಾಯಕವಾಡ್, 10.1), 2-103 (ಮೋಯಿನ್ ಅಲಿ, 14.4), 3-107 (ಸುರೇಶ್ ರೈನಾ, 15.3), 4-108 (ಫಫ್ ಡು ಪ್ಲೆಸಿ, 15.5)
ಬೌಲಿಂಗ್: ಸಂದೀಪ್ ಶರ್ಮಾ 3-0-18-0, ಭುವನೇಶ್ವರ್ ಕುಮಾ ೯4-0-34-0, ಜೇಸನ್ ಹೋಲ್ಡ ೯4-0-27-3, ರಶೀದ್ ಖಾನ್ 4-0-27-1, ಸಿದ್ಧಾರ್ಥ್ ಕೌಲ್ 2.4-0-24-0, ಅಭಿಷೇಕ್ ಶರ್ಮಾ 2-0-9-0

ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ 6 ವಿಕೆಟ್‌ಗಳ ಗೆಲುವು

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	11	9	2	00	00	18
ಡೆಲ್ಲಿ ಕ್ಯಾಪಿಟಲ್ಸ್	11	8	3	00	00	16
ಬೆಂಗಳೂರು	11	7	4	00	00	14
ಕೋಲ್ಕತ್ತ ನೈಟ್ ರೈಡರ್ಸ್	11	5	6	00	00	10
ಮುಂಬೈ ಇಂಡಿಯನ್ಸ್	11	5	6	00	00	10
ಪಂಜಾಬ್	11	4	7	00	00	8
ರಾಜಸ್ಥಾನ	11	4	7	00	00	8
ಹೈದರಾಬಾದ್	11	2	9	00	00	4

* ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

8 ಕೈಗಾರಿಕಾ ವಲಯಗಳಲ್ಲಿ ಶೇ 11.6 ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ಮೂಲಸೌಕರ್ಯ ವಲಯಗಳ ಪ್ರಮುಖ ಎಂಟು ಕೈಗಾರಿಕೆಗಳು ಆಗಸ್ಟ್‌ನಲ್ಲಿ ಶೇಕಡ 11.6ರಷ್ಟು ಬೆಳವಣಿಗೆ ಕಂಡಿವೆ. 2020ರ ಆಗಸ್ಟ್‌ನಲ್ಲಿ ಈ ಎಂಟು ವಲಯಗಳು ಶೇ (−)6.9ರಷ್ಟು ಇಳಿಕೆ ಕಂಡಿದ್ದವು.

ದೇಶದ ಕೈಗಾರಿಕಾ ಉತ್ಪಾದನೆ ಸೂಚ್ಯಂಕಕ್ಕೆ (ಐಐಪಿ) ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳು ಶೇ 40.27ರಷ್ಟು ಕೊಡುಗೆ ನೀಡುತ್ತಿವೆ.

ಸರ್ಕಾರ ನೀಡಿರುವ ಮಾಹಿತಿಯ ಪ್ರಕಾರ, ಕಳೆದ ವರ್ಷದ ಆಗಸ್ಟ್‌ಗೆ ಹೋಲಿಸಿದರೆ ಈ ವರ್ಷದ ಆಗಸ್ಟ್‌ನಲ್ಲಿ ಕಲ್ಲಿದ್ದಲು, ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳ ಉತ್ಪಾದನೆ ಹೆಚ್ಚಾಗಿದೆ. ಇನ್ನೊಂದೆಡೆ ಕಚ್ಚಾ ತೈಲ ಮತ್ತು ರಸಗೊಬ್ಬರ ಕೈಗಾರಿಕೆಗಳ ಉತ್ಪಾದನೆ ಇಳಿಕೆ ಆಗಿದೆ. ಕಲ್ಲಿದ್ದಲು ಮತ್ತು ನೈಸರ್ಗಿಕ ಅನಿಲದ ಉತ್ಪಾದನೆಯು ಕಳೆದ ಆಗಸ್ಟ್‌ಗೆ ಹೋಲಿಸಿದರೆ ಈ ವರ್ಷದ ಆಗಸ್ಟ್‌ನಲ್ಲಿ ಶೇ 20.6ರಷ್ಟು ಬೆಳವಣಿಗೆ ಕಂಡಿದೆ. ಸಿಮೆಂಟ್ ಉತ್ಪಾದನೆಯು ಶೇ 36.3ರಷ್ಟು, ಉಕ್ಕು ಉತ್ಪಾದನೆಯು ಶೇ 5.1ರಷ್ಟು ಏರಿಕೆ ಆಗಿದೆ.

ಈ ಎಂಟು ವಲಯಗಳಿಗೆ ಸೇರಿದ ಕೈಗಾರಿಕೆಗಳ ಉತ್ಪಾದನೆಯಲ್ಲಿನ ಬೆಳವಣಿಗೆಯು ಏಪ್ರಿಲ್‌ನಿಂದ ಆಗಸ್ಟ್‌ವರೆಗಿನ ಅವಧಿಯಲ್ಲಿ ಶೇ 19.3 ಆಗಿದೆ. ಹಿಂದಿನ ವರ್ಷದ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ಈ ವಲಯದಲ್ಲಿ ಶೇ (−)17.3ರಷ್ಟು ಇಳಿಕೆ ದಾಖಲಾಗಿತ್ತು.

ಐಪಿಎಲ್: ದಾಖಲೆ ಸಂಖ್ಯೆಯ ವೀಕ್ಷಣೆ

ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯಗಳನ್ನು ಟಿವಿಯಲ್ಲಿ ವೀಕ್ಷಿಸುವವರ ಸಂಖ್ಯೆಯು ಹೊಸ ದಾಖಲೆ ನಿರ್ಮಿಸಿದೆ.

ಹೋದ ವರ್ಷಕ್ಕಿಂತಲೂ ಈ ವರ್ಷದ ಟೂರ್ನಿ ಯನ್ನು ಹೆಚ್ಚು ವೀಕ್ಷಕರು ನೋಡಿದ್ದಾರೆ.

ಗುರುವಾರ ಈ ಕುರಿತು ಪ್ರಕಟಣೆ ಬಿಡುಗಡೆ ಮಾಡಿರುವ ಐಪಿಎಲ್ ಅಧಿಕೃತ ಪ್ರಸಾರಕರಾದ ಸ್ಟಾರ್ ಇಂಡಿಯಾ, 'ಈ ವರ್ಷದ ಐಪಿಎಲ್‌ನ 35ನೇ ಪಂದ್ಯದ ಮುಕ್ತಾಯದ ವೇಳೆಗೆ ವೀಕ್ಷಕರ ಸಂಖ್ಯೆಯು 38 ಕೋಟಿ ದಾಟಿದೆ. ಇದು ಹೋದ ವರ್ಷದ ಐಪಿಎಲ್ ಟೂರ್ನಿಗಿಂತ 1.2 ಕೋಟಿ ಹೆಚ್ಚಾಗಿದೆ' ಎಂದಿದೆ.

ಸದ್ಯ ಯುಎಇಯಲ್ಲಿ ನಡೆಯುತ್ತಿರುವ 14ನೇ ಆವೃತ್ತಿಯ ಎರಡನೇ ಹಂತದ ಪಂದ್ಯಗಳಿಗೂ ವೀಕ್ಷಕರ ಸಂಖ್ಯೆ ಹೆಚ್ಚುತ್ತಿದೆ.

ಪ್ರತಿ ಪಂದ್ಯಕ್ಕೂ ಶೇ 32ರ ಸರಾಸರಿಯಲ್ಲಿ ವೀಕ್ಷಕರ ಸಂಖ್ಯೆ ಹೆಚ್ಚುತ್ತಿದೆ. ಪ್ಲೇ ಆಫ್ ಮತ್ತು ಫೈನಲ್‌ಗೆ ಇದು ಇನ್ನೂ ಹೆಚ್ಚುವ ನಿರೀಕ್ಷೆ ಇದೆ ಎಂದು ಸ್ಟಾರ್ ಇಂಡಿಯಾ ತಿಳಿಸಿದೆ.

ರಾಜ್ಯದ ಆಟಗಾರ ಅನರ್ಹ

ಬೆಂಗಳೂರು: ವಿನೂ ಮಂಕಡ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲು ಮಧ್ಯಪ್ರದೇಶದ ಇಂದೋರ್‌ಗೆ ತೆರಳಿರುವ ಕರ್ನಾಟಕದ 19 ವರ್ಷದೊಳಗಿನವರ ತಂಡದ ಆಟಗಾರ ಸಂಜಯ್ ಅಶ್ವಿನ್ ಅವರನ್ನು ಅನರ್ಹಗೊಳಿಸಲಾಗಿದೆ. ಅವರು ನೀಡಿರುವ ವಿಳಾಸದ ದಾಖಲೆಗಳು ಸೂಕ್ತವಾಗಿಲ್ಲವೆಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತಿಳಿಸಿದೆ.

ರಾಜ್ಯ ತಂಡದ ವಿಕೆಟ್‌ಕೀಪರ್ ಸಂಜಯ್ ಅಶ್ವಿನ್ ಅವರನ್ನು ತಂಡದಿಂದ ಹೊರಗೆ ಕಳಿಸಲಾಗಿದ್ದು, ಬದಲಿಗೆ ಅಜಿತೇಶ್ವರ್ ಅವರನ್ನು ಸೇರ್ಪಡೆ ಮಾಡಲಾಗಿದೆ.

ಆಟಗಾರರ ವಯಸ್ಸಿನ ಮಾಹಿತಿಗಾಗಿ ಎಲುವು ಸಾಂದ್ರತೆ ಪರೀಕ್ಷೆ ನಡೆಸಿದ ನಂತರ ದಾಖಲೆಗಳೆಲ್ಲವನ್ನೂ ಆಯೋಜಕರು ಪರಿಶೀಲನೆಗೆ ಬಿಸಿಸಿಐಗೆ ಕಳಿಸಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	400-405
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಹಳತು	46000-51500
ಕುಮಟ	
ಚಿಪ್ಪು	38699-43456
ಕೋಕ	18509-40956
ಹೊಸಚಾಲಿ	45624-47799
ಹಳೆಚಾಲಿ	46449-47369
ಪುತ್ತೂರು	
ಕೋಕ	10500-26000
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	37899-42099
ಕೋಕ	26699-36699
ಚಾಲಿ	416099-48409
ಕೆಂಪುಗೋಟು	32699-35289
ರಾಶಿ	49379-50009
ತಟ್ಟಿಬೆಟ್ಟೆ	39989-40699
ಶಿರಸಿ	
ಬೆಟ್ಟೆ	32191-46669
ಬಿಳಿಗೋಟು	27999-42699
ಚಾಲಿ	45391-48698
ರಾಶಿ	47009-50899
ಯಲ್ಲಾಪುರ	
ಬಿಳಿಗೋಟು	35212-42300
ಕೋಕ	22612-36499
ಚಾಲಿ	44179-48591
ಕೆಂಪುಗೋಟು	31000-36619
ರಾಶಿ	48712-52099
ತಟ್ಟಿಬೆಟ್ಟೆ	37373-47699
ಶಿವಮೊಗ್ಗ (ಎಪಿಎಂಸಿ)	
ಬೆಟ್ಟೆ	47219-52899
ಗೊರಬಲು	16250-39269
ನ್ಯೂ ವೆರೈಟಿ	44169-47019
ರಾಶಿ	44869-50299
ಸರಕು	49000-75696
ಸಾಗರ	
ಬಿಳಿಗೋಟು	29099-37789
ಚಾಲಿ	44059-45499
ಕೆಂಪುಗೋಟು	30169-37899
ರಾಶಿ	42269-50209
ಸಿಪ್ಪೆಗೋಟು	9499-26169

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13850	13000	13200	193.4 ಸೆಂಟ್ಸ್
ಎಸಿ	6325	4800	5350	
ಆರ್‌ಪಿ	6150	6100	6250	ಲಂಡನ್
ಆರ್‌ಸಿ	3575	3500	3625	2116 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ
30-9-2021

ಜಾವಾ 70/80(ಹೊಸ)	10700-10750
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10600-10700
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1510)
ಒಂದು ವಾರದ ಡೆಲಿವರಿ	1495 (1505)
ಸೋಯಾ ಕಚ್ಚಾ	1295 (1285)
ಪಾಮ್ ವಾರದ ಡೆಲಿವರಿ	1218 (1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1315 (1310)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10 ಗ್ರಾಂ 45,900 (45,800)
ಬೆಳ್ಳಿ ಕೆ.ಜಿ 58,200 (59,800)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪೌಷ್ಟಿಕ ಆಹಾರ ಸೇವಿಸಿ

ಷೇರುಪೇಟೆ ವಹಿವಾಟು ▼ 287



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,711
ಇಂದಿನ ಅಂತ್ಯ	17,618
▼	93
ದಿನದ ಕನಿಷ್ಠ	17,585

ವಿನಿಮಯ ದರ

$ ಡಾಲರ್	74.23
£ ಪೌಂಡ್	99.9
€ ಯುರೊ	86.12
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹460

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1490 (1500)
ಸೋಯಾ (ರಿಫೈನ್ಡ್)	₹1335 (1325)
ಸೂರ್ಯಕಾಂತಿ (ರಿಫೈನ್ಡ್)	₹1385(1370)
ಪಾಮೋಲಿನ್	₹1220 (1210)

ಪೆಟ್ರೋಲ್, ಡೀಸೆಲ್ ದರ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಗುರುವಾರ ಇಂಧನ ದರ ಹೆಚ್ಚಿಸಿವೆ. ಗುರುವಾರ ಪೆಟ್ರೋಲ್ ದರ 25 ಪೈಸೆ ಮತ್ತು ಡೀಸೆಲ್ ದರ 30 ಪೈಸೆ ಹೆಚ್ಚಳ ಆಗಿದೆ. ಇದರಿಂದ ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹105.15 ಮತ್ತು ಡೀಸೆಲ್ ದರ ₹ 95.34ಕ್ಕೆ ಏರಿಕೆ ಆಗಿದೆ.

ದೆಹಲಿಯಲ್ಲಿ ಪೆಟ್ರೋಲ್ ದರ ₹ 101.64 ಮತ್ತು ಡೀಸೆಲ್ ದರ ₹ 89.87ರಷ್ಟಾಗಿದೆ. ಮುಂಬೈನಲ್ಲಿ ಪೆಟ್ರೋಲ್ ದರ ₹ 107.71 ಮತ್ತು ಡೀಸೆಲ್ ದರ ₹ 97.52ಕ್ಕೆ ಏರಿಕೆ ಆಗಿದೆ.

ಸೆಪ್ಟೆಂಬರ್ 24ರ ನಂತರ ಡೀಸೆಲ್ ದರ ಐದು ಬಾರಿ ಹೆಚ್ಚಳ ಆಗಿದೆ. ಇದರಿಂದ ಲೀಟರಿಗೆ ₹ 1.25 ರಷ್ಟು ಏರಿಕೆ ಆದಂತಾಗಿದೆ. ಪೆಟ್ರೋಲ್ ದರವು ಒಟ್ಟಾರೆ ಎರಡು ಬಾರಿಗೆ ಹೆಚ್ಚಳ ಆಗಿದ್ದು, ಲೀಟರಿಗೆ 50 ಪೈಸೆಗಳಷ್ಟು ಏರಿಕೆ ಆಗಿದೆ.

ಅ. 7ರಿಂದ ಮಹೀಂದ್ರ ಎಕ್ಸ್‌ಯುವಿ700 ಬುಕಿಂಗ್

ಮುಂಬೈ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ತನ್ನ ಪ್ರೀಮಿಯಂ ಸ್ಪೋರ್ಟ್ಸ್ ಯುಟಿಲಿಟಿ ವಾಹನ 'ಎಕ್ಸ್‌ಯುವಿ700' ಬುಕಿಂಗ್ ಅಕ್ಟೋಬರ್ 7ರಿಂದ ಆರಂಭ ಆಗಲಿದೆ ಎಂದು ಗುರುವಾರ ತಿಳಿಸಿದೆ.

ಈ ಎಕ್ಸ್‌ಯುವಿ ಡೀಸೆಲ್ ಮತ್ತು ಗ್ಯಾಸೊಲಿನ್ ಆವೃತ್ತಿಗಳಲ್ಲಿ ಇದ್ದು, ಮ್ಯಾನುಯಲ್ ಮತ್ತು ಆಟೊಮ್ಯಾಟಿಕ್ ಆಯ್ಕೆಗಳನ್ನು ಹೊಂದಿದೆ ಎಂದು ಹೇಳಿದೆ.

ಎಂಎಕ್ಸ್ ಮತ್ತು ಎಕ್ಸ್ ಎಂಬ ಎರಡು ಸರಣಿಗಳಲ್ಲಿ ಎಕ್ಸ್‌ಯುವಿ700 ಅನ್ನು ಕಂಪನಿ ನೀಡುತ್ತಿದೆ. ಎಂಎಕ್ಸ್ ಸರಣಿಯ ಬೆಲೆ ₹ 11.99 ಲಕ್ಷದಿಂದ ಮತ್ತು ಎಎಕ್ಸ್ ಸರಣಿಯ ಬೆಲೆ ₹ 13.99 ಲಕ್ಷದಿಂದ ಆರಂಭ ಆಗುತ್ತದೆ. ಮೊದಲ 25 ಸಾವಿರ ಬುಕಿಂಗ್‌ಗೆ ಮಾತ್ರ ಈ ಬೆಲೆ ಅನ್ವಯಿಸಲಿದೆ ಎಂದು ಕಂಪನಿಯು ತಿಳಿಸಿದೆ.

ಅದಾನಿ ಅವರ ಪ್ರತಿದಿನದ ಆದಾಯ ₹ 1,000 ಕೋಟಿ!

ಅಂಬಾನಿ ದೇಶದ ಸಿರಿವಂತ ವ್ಯಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುರೂನ್ ಇಂಡಿಯಾ ಸಿದ್ಧಪಡಿಸುವ 'ಐಐಎಫ್‌ಎಲ್ ವೆಲ್ತ್ ಹುರೂನ್ ಇಂಡಿಯಾ ರಿಚ್ ಲಿಸ್ಟ್ – 2021' ಗುರುವಾರ ಬಿಡುಗಡೆ ಆಗಿದ್ದು, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಆರ್‌ಐಎಲ್) ಅಧ್ಯಕ್ಷ ಮುಕೇಶ್ ಅಂಬಾನಿ ಅವರು ಭಾರತದ ಅತ್ಯಂತ ಸಿರಿವಂತ ವ್ಯಕ್ತಿ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ.

ಅಂಬಾನಿ

ಉದ್ಯಮಿ ಗೌತಮ್ ಅದಾನಿ ಮತ್ತು ಅವರ ಕುಟುಂಬವು ಪಟ್ಟಿಯಲ್ಲಿ ಎರಡನೆಯ ಸ್ಥಾನದಲ್ಲಿ ಇದೆ. ಅದಾನಿ ಅವರು ಪ್ರತಿದಿನ ₹ 1,000 ಕೋಟಿ ಆದಾಯ ಗಳಿಸುತ್ತಿದ್ದಾರೆ ಎಂದು ವರದಿಯು ಹೇಳಿದೆ.

ಮುಕೇಶ್ ಅಂಬಾನಿ ಅವರು ಸತತವಾಗಿ ಹತ್ತು ವರ್ಷಗಳಿಂದ 'ಭಾರತದ ಅತ್ಯಂತ ಶ್ರೀಮಂತ ವ್ಯಕ್ತಿ' ಆಗಿದ್ದಾರೆ ಎಂದು ಹುರೂನ್ ಇಂಡಿಯಾ ಹೇಳಿದೆ. ಸೆಪ್ಟೆಂಬರ್ 15ರವರೆಗಿನ ಅಂಕಿ–ಅಂಶಗಳನ್ನು ಆಧರಿಸಿ ಈ ಪಟ್ಟಿ ಸಿದ್ಧಪಡಿಸಲಾಗಿದೆ.

ಪಟ್ಟಿಯಲ್ಲಿ ಇರುವ ಶ್ರೀಮಂತರ ಸಂಪತ್ತಿನ ಒಟ್ಟು ಮೌಲ್ಯವು ಶೇಕಡ 51ರಷ್ಟು ಹೆಚ್ಚಳವಾಗಿದೆ.

ಹುರೂನ್ ಸಿದ್ಧಪಡಿಸಿದ ಶ್ರೀಮಂತರ ಪಟ್ಟಿ

ಸ್ಥಾನ	ಹೆಸರು	ಸಂಪತ್ತಿನ ಮೌಲ್ಯ*	ಕಂಪನಿ	ವಾಸಸ್ಥಳ
1	ಮುಕೇಶ್ ಅಂಬಾನಿ ಮತ್ತು ಕುಟುಂಬ	₹7.18	ಆರ್‌ಐಎಲ್	ಮುಂಬೈ
2	ಗೌತಮ್ ಅದಾನಿ ಮತ್ತು ಕುಟುಂಬ	₹5.05	ಅದಾನಿ	ಅಹಮದಾಬಾದ್
3	ಶಿವ ನಾಡಾರ್ ಮತ್ತು ಕುಟುಂಬ	₹2.36	ಎಚ್‌ಸಿಎಲ್	ನವದೆಹಲಿ
4	ಎಸ್.ಪಿ. ಹಿಂದುಜಾ ಮತ್ತು ಕುಟುಂಬ	₹2.20	ಹಿಂದುಜಾ	ಲಂಡನ್
5	ಎಲ್.ಎನ್. ಮಿತ್ತಲ್ ಮತ್ತು ಕುಟುಂಬ	₹1.74	ಆರ್ಸೆಲರ್ ಮಿತ್ತಲ್	ಲಂಡನ್
6	ಸೈರಸ್ ಪೂನಾವಾಲಾ ಮತ್ತು ಕುಟುಂಬ	₹1.63	ಸೆರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ	ಪುಣೆ
7	ರಾಧಾಕಿಶನ್ ದಮಾನಿ ಮತ್ತು ಕುಟುಂಬ	₹1.54	ಅವೆನ್ಯು ಸೂಪರ್‌ಮಾರ್ಟ್ಸ್	ಮುಂಬೈ
8	ವಿನೋದ್ ಶಾಂತಿಲಾಲ್ ಅದಾನಿ ಮತ್ತು ಕುಟುಂಬ	₹1.31	ಅದಾನಿ	ದುಬೈ
9	ಕುಮಾರಮಂಗಲಂ ಬಿರ್ಲಾ ಮತ್ತು ಕುಟುಂಬ	₹1.22	ಆದಿತ್ಯ ಬಿರ್ಲಾ	ಮುಂಬೈ
10	ಜಯ್ ಚೌಧರಿ	₹1.21	ಝೆಡ್‌ಸ್ಕೇಲರ್	ಸ್ಯಾನ್‌ಜೋ

* ಸಂಪತ್ತಿನ ಮೌಲ್ಯವನ್ನು ಲಕ್ಷ ಕೋಟಿಗಳಲ್ಲಿ ನೀಡಲಾಗಿದೆ



ಗೌತಮ್ ಅದಾನಿ



ಶಿವ ನಾಡಾರ್

ರಾಸಾಯನಿಕಗಳು ಮತ್ತು ಸಾಫ್ಟ್‌ವೇರ್ ಉದ್ಯಮ ವಲಯಗಳು ಹೊಸ ಶ್ರೀಮಂತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೃಷ್ಟಿಸಿವೆ.

'ಹತ್ತು ವರ್ಷಗಳ ಹಿಂದೆ ಈ ಪಟ್ಟಿಯಲ್ಲಿ ಸ್ಥಾನ ಪಡೆದ ಶ್ರೀಮಂತರ ಸಂಖ್ಯೆ 100ಕ್ಕಿಂತ ಕಡಿಮೆ ಇತ್ತು. ಈಗ ಅದು ಒಂದು ಸಾವಿರಕ್ಕೆ ಹೆಚ್ಚಳವಾಗಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಇನ್ನು ಐದು ವರ್ಷಗಳ ನಂತರ ಶ್ರೀಮಂತರ ಪಟ್ಟಿಯಲ್ಲಿ ಒಟ್ಟು ಮೂರು ಸಾವಿರ ವ್ಯಕ್ತಿಗಳ ಹೆಸರು ಇರುತ್ತದೆ ಎಂಬುದು ನನ್ನ ಅಂದಾಜು. ಶ್ರೀಮಂತರ ಪಟ್ಟಿಯು ಬೆಳೆಯುತ್ತಿರುವುದು ಭಾರತದ ಆರ್ಥಿಕ ಬೆಳವಣಿಗೆಯ ದ್ಯೋತಕವೂ ಹೌದು' ಎಂದು ಹುರೂನ್ ಇಂಡಿಯಾ ಸಂಸ್ಥೆಯ ಮುಖ್ಯ ಸಂಶೋಧಕ ಅನಸ್ ರೆಹ್ಮಾನ್ ಜುನೈದ್ ಹೇಳಿದ್ದಾರೆ.

ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್: ಶೇ 15ರಷ್ಟು ಲಾಭಾಂಶ ನೀಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್' ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ ಷೇರುದಾರರಿಗೆ ಶೇಕಡ 15ರಷ್ಟು ಲಾಭಾಂಶ ನೀಡಿದೆ.

ಬ್ಯಾಂಕ್‌ನ ಸರ್ವಸದಸ್ಯರ ಮಹಾಸಭೆಯು ಅಧ್ಯಕ್ಷ ಆವಲಹಳ್ಳಿ ಚಂದ್ರಪ್ಪ ಆರ್. ಅವರ ನೇತೃತ್ವದಲ್ಲಿ ಈಚೆಗೆ ವರ್ಚುವಲ್ ಆಗಿ ನಡೆಯಿತು. ಲಾಭಾಂಶ ಮೊತ್ತವನ್ನು ಸದಸ್ಯರ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ ಎಂದು ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ಪಿ. ಮಂಜುನಾಥ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಸರ್ಗಿಕ ಅನಿಲ ಬೆಲೆ ಶೇ 62 ಹೆಚ್ಚಳ

ನವದೆಹಲಿ (ಪಿಟಿಐ): ವಿದ್ಯುತ್ ಉತ್ಪಾದನೆ, ರಸಗೊಬ್ಬರ ತಯಾರಿಕೆ, ಸಿಎನ್‌ಜಿ ಉತ್ಪಾದನೆಯಲ್ಲಿ ಬಳಸುವ ನೈಸರ್ಗಿಕ ಅನಿಲದ ಬೆಲೆಯನ್ನು ಕೇಂದ್ರ ಸರ್ಕಾರವು ಗುರುವಾರ ಶೇಕಡ 62ರಷ್ಟು ಹೆಚ್ಚಳ ಮಾಡಿದೆ.

2019ರ ಏಪ್ರಿಲ್ ನಂತರದಲ್ಲಿ ಆಗಿರುವ ಮೊದಲ ಬೆಲೆ ಏರಿಕೆ ಇದು. ಪರಿಣಾಮವಾಗಿ ಸಿಎನ್‌ಜಿ ಬೆಲೆಯಲ್ಲಿ ಶೇ 10ರಿಂದ ಶೇ 11ರಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ಅಲ್ಲದೆ, ದೆಹಲಿ ಮತ್ತು ಮುಂಬೈನಂತಹ ನಗರಗಳಲ್ಲಿ ಮನೆಗಳಿಗೆ ಕೊಳವೆ ಮೂಲಕ ಪೂರೈಕೆ ಮಾಡುವ ಅಡುಗೆ ಅನಿಲದ ಬೆಲೆಯಲ್ಲಿ ಕೂಡ ಇದೇ ಪ್ರಮಾಣದಲ್ಲಿ ಏರಿಕೆ ಆಗಬಹುದು ಎನ್ನಲಾಗಿದೆ.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ

ಸಿಬ್ಬಂದಿ ನೇಮಕಾತಿ ಆಯೋಗ
(ಕರ್ನಾಟಕ–ಕೇರಳ ಪ್ರದೇಶ)
ಭಾರತ ಸರ್ಕಾರ

ಸಂಕ್ಷಿಪ್ತ ಪ್ರಕಟಣೆ: ಫೇಸ್–9/2021/ನೇಮಕಾತಿ ಹುದ್ದೆಗಳು.

1. ಸಿಬ್ಬಂದಿ ನೇಮಕಾತಿ ಆಯೋಗ (ಎಸ್‌ಎಸ್‌ಸಿ) ಇವರು ತಮ್ಮ ಜಾಹೀರಾತು ಸಂ.: ಫೇಸ್–9/2021/ನೇಮಕಾತಿ ಹುದ್ದೆಗಳು ಮೂಲಕ ಭಾರತದಾದ್ಯಂತ ಭಾರತ ಸರ್ಕಾರದ ವಿವಿಧ ಸಚಿವಾಲಯಗಳು/ಇಲಾಖೆಗಳು/ಸಂಸ್ಥೆಗಳಲ್ಲಿನ 3261 ಖಾಲಿಹುದ್ದೆಗಳಿಗೆ (271 ಪ್ರವರ್ಗಗಳ ಹುದ್ದೆಗಳಿಗೆ) ನೇಮಕಾತಿ ಕೈಗೊಳ್ಳುತ್ತಲಿದ್ದಾರೆ. ಕಂಪ್ಯೂಟರ್ ಆಧಾರಿತ ಪರೀಕ್ಷೆ ವಿಧಾನದಲ್ಲಿ ಆಯ್ಕೆ ಮಾಡಲಾಗುತ್ತದೆ. ವಿವರವಾದ ಜಾಹೀರಾತು ಹಾಗೂ ಅರ್ಹತಾ ಮಾನದಂಡಗಳು, ಷರತ್ತು ಮತ್ತು ನಿಬಂಧನೆಗಳು ಹಾಗೂ ಅರ್ಜಿ ನಮೂನೆ ಇತ್ಯಾದಿ ವಿವರಗಳು 24 ಸೆಪ್ಟಂಬರ್ 2021 ರಿಂದ https://ssc.nic.in ಮತ್ತು http://ssckkr.kar.nic.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಅರ್ಜಿಗಳನ್ನು ಸ್ವೀಕರಿಸುವ (ಆನ್‌ಲೈನ್ ಮೂಲಕ ಮಾತ್ರ) ಅಂತಿಮ ದಿನಾಂಕ 25.10.2021.
2. (1) ಎಲ್ಲಾ ಮಹಿಳೆಯರಿಗೆ (2) ಎಸ್‌ಸಿ/ಎಸ್‌ಟಿ/ಎಕ್ಸ್–ಎಸ್/ಪಿಡಬ್ಲ್ಯುಡಿ(ಒಎಚ್/ಎಚ್‌ಎಚ್/ವಿಎಚ್/ಇತರೆ) ಮೀಸಲಾತಿಗೆ ಅರ್ಹರಾಗಿರುವ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇರುತ್ತದೆ.
3. ವಿಧವೆಯರು/ವಿಚ್ಛೇದಿತ ಮಹಿಳೆ/ಜುಡಿಷಿಯಲಿ ಪ್ರತ್ಯೇಕಗೊಂಡ ಮಹಿಳೆ/ವಿಕಲಾಂಗ ರಕ್ಷಣಾ ಸಿಬ್ಬಂದಿ/ಜ&ಕಾ ರಹವಾಸಿ/ಕೇಂದ್ರ ಸರ್ಕಾರದ ಉದ್ಯೋಗಿ ಮುಂತಾದ, ಪರೀಕ್ಷಾ ಪ್ರಕಟಣೆಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಷರತ್ತುಗಳನ್ನು ಪೂರೈಸಬಲ್ಲವರು, ಸದರಿ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿರುವ ನಿರ್ದಿಷ್ಟ ಹುದ್ದೆಗಳಿಗೆ ಅನ್ವಯಿಕ ನಿರ್ದಿಷ್ಟ ವಯೋಮಿತಿ ಸಡಿಲಿಕೆಗೆ ಅರ್ಹರಾಗಿರುತ್ತಾರೆ.
4. ಮೇಲ್ಕಾಣಿಸಿದ ಜಾಹೀರಾತಿನಲ್ಲಿ ಕರ್ನಾಟಕ–ಕೇರಳ ಪ್ರದೇಶಕ್ಕೆ ಸಂಬಂಧಿಸಿದಂತೆ 14 ಪ್ರವರ್ಗಗಳ 117 ಖಾಲಿಹುದ್ದೆಗಳಿರುತ್ತವೆ ಮತ್ತು ಇವುಗಳಿಗೆ ವಿವಿಧ ವಿಷಯಗಳಲ್ಲಿನ ವಿಭಿನ್ನ ಅಗತ್ಯ ವಿದ್ಯಾರ್ಹತೆ ಅನ್ವಯವಾಗಿರುತ್ತದೆ.
5. ಕರ್ನಾಟಕ ಕೇರಳ ಪ್ರದೇಶದಲ್ಲಿ ಹುದ್ದೆಗಳ ವಿವರ ಕೆಳಗಿನಂತಿರುತ್ತದೆ:–

ಕ್ರ.ಸಂ.	ಅಗತ್ಯ ವಿದ್ಯಾರ್ಹತೆ	ಖಾಲಿಹುದ್ದೆಗಳು			ಹುದ್ದೆಯ ಹೆಸರು
		ಕೇರಳ	ಕರ್ನಾಟಕ	ಲಕ್ಷದ್ವೀಪ	
1	ಪದವಿ ಮತ್ತು ಮೇಲ್ಪಟ್ಟು (ವಿಷಯ ವಿವರ, ಅನುಭವದ ವಿವರ ಇತ್ಯಾದಿಗಳಿಗಾಗಿ ದಯವಿಟ್ಟು ಪ್ರಕಟಣೆಯನ್ನು ಪರಿಶೀಲಿಸಿರಿ)	20	27	-	ಗರ್ಲ್ ಕೆಡೆಟ್ ಇನ್‌ಸ್ಟ್ರಕ್ಟರ್ ಒಟ್ಟು – 47 (12–ಯುಆರ್, 13–ಒಬಿಸಿ, 08–ಎಸ್‌ಸಿ, 14–ಇಡಬ್ಲ್ಯುಎಸ್)
2		-	01 (ಯುಆರ್)	-	ಟೆಕ್ನಿಕಲ್ ಸೂಪರಿಂಟೆಂಡಂಟ್ (ಪ್ರಾಸೆಸಿಂಗ್)
3		01 (ಯುಆರ್)	01 (ಯುಆರ್)	-	ಟೆಕ್ನಿಕಲ್ ಸೂಪರಿಂಟೆಂಡಂಟ್ (ವೀವಿಂಗ್)
4		01	01	-	ಟೆಕ್ಸ್‌ಟೈಲ್ ಡಿಸೈನರ್ ಒಟ್ಟು – 02 (01–ಯುಆರ್, 01–ಒಬಿಸಿ)
5		-	01 (ಒಬಿಸಿ)	-	ರಿಸರ್ಚ್ ಅಸೋಸಿಯೇಟ್ (ಫಿಜಿಕಲ್ ಆಂಥ್ರೋಪಾಲಜಿ ಡಿವಿಜನ್)
6		-	01 (ಯುಆರ್)	-	ಲೈಬ್ರರಿ ಮತ್ತು ಇನ್‌ಫಾರ್ಮೇಶನ್ ಅಸಿಸ್ಟಂಟ್
7		-	01 (ಯುಆರ್) (ಅಂಗವಿಕಲರಿಗೆ ಮೀಸಲು)	-	ರಿಸರ್ಚ್ ಅಸೋಸಿಯೇಟ್ (ಕಲ್ಚರಲ್ ಆಂಥ್ರೋಪಾಲಜಿ)
8		-	02(1–ಯುಆರ್, 1–ಇಡಬ್ಲ್ಯುಎಸ್)	-	ಸೈಂಟಿಫಿಕ್ ಅಸಿಸ್ಟಂಟ್ (ಕಂಪ್ಯೂಟರ್ ಸೈನ್ಸ್)
9		-	01–ಯುಆರ್	-	ಸೈಂಟಿಫಿಕ್ ಅಸಿಸ್ಟಂಟ್ (ಇಲೆಕ್ಟ್ರಿಕಲ್)
10		-	02(1–ಯುಆರ್, 1–ಒಬಿಸಿ)	-	ಸೈಂಟಿಫಿಕ್ ಅಸಿಸ್ಟಂಟ್ (ಇಲೆಕ್ಟ್ರಾನಿಕ್ಸ್)
11		-	01 (ಯುಆರ್)	-	ಅಸಿಸ್ಟಂಟ್ ವೆಲ್‌ಫೇರ್ ಅಡ್ಮಿನಿಸ್ಟ್ರೇಟರ್
12		40 (18–ಯುಆರ್, 5–ಒಬಿಸಿ, 8–ಎಸ್‌ಸಿ, 5–ಎಸ್‌ಟಿ, 4–ಇಡಬ್ಲ್ಯುಎಸ್, (01)–ಎಚ್‌ಎಚ್, (01)–ವಿಎಚ್)). ಭಾಷಾವಾರು ಖಾಲಿಹುದ್ದೆಗಳ ಮೇರೆಗೆ ಭಾರತದಲ್ಲಿ ಎಲ್ಲಿಯಾದರೂ.			ಜೂನಿಯರ್ ಗ್ರೇಡ್ ಆಫ್ ಇಂಡಿಯನ್ ಇನ್‌ಫಾರ್ಮೇಶನ್ ಸರ್ವೀಸ್ ಗ್ರೇಡ್ 'ಬಿ'
13	ಹೈಯರ್ ಸೆಕಂಡರಿ	-	12(8–ಯುಆರ್, 2–ಒಬಿಸಿ, 1–ಎಸ್‌ಸಿ, 1–ಇಡಬ್ಲ್ಯುಎಸ್)	-	ಡೆಪ್ಯೂಟಿ ರೇಂಜರ್
14		-	04 (ಯುಆರ್)	–	ಫೀಲ್ಡ್‌ಮ್ಯಾನ್

6. ಮೇಲ್ಕಂಡ ಎಲ್ಲಾ ಹುದ್ದೆಗಳನ್ನು ಒಂದೇ ಹಂತದ ಕಂಪ್ಯೂಟರ್ ಆಧಾರಿತ ಪರೀಕ್ಷೆಯ ಮೂಲಕ ಮಾತ್ರ ಭರ್ತಿ ಮಾಡಿಕೊಳ್ಳಲಾಗುತ್ತದೆ. ಸಂದರ್ಶನ ಏರ್ಪಡಿಸಲಾಗುವುದಿಲ್ಲ.

ಪ್ರಾದೇಶಿಕ ನಿರ್ದೇಶಕರು, ಎಸ್‌ಎಸ್‌ಸಿ(ಕೆಕೆಆರ್) ಬೆಂಗಳೂರು

ಬೆಂಗಳೂರಿನಲ್ಲಿ ನಡೆಯುವ ರಾಷ್ಟ್ರೀಯ ಶಿಬಿರದಲ್ಲಿ ಅವಕಾಶ ಸಿಗುವ ಸಾಧ್ಯತೆಗಳು ಕ್ಷೀಣವಾದದ್ದೇ ಕಾರಣ?

ಹಾಕಿಗೆ ರೂಪಿಂದರ್, ಲಾಕ್ರ ವಿದಾಯ

ನವದೆಹಲಿ (ಪಿಟಿಐ): ಡ್ರ್ಯಾಗ್ ಫ್ಲಿಕ್ಕರ್ ರೂಪಿಂದರ್ ಪಾಲ್ ಸಿಂಗ್ ಮತ್ತು ಡಿಫೆಂಡರ್ ಬೀರೇಂದ್ರ ಲಾಕ್ರ ಅವರು ಅಂತರರಾಷ್ಟ್ರೀಯ ಹಾಕಿಗೆ ಗುರುವಾರ ವಿದಾಯ ಹೇಳಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ಕಂಚಿನ ಪದಕ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಇವರಿಬ್ಬರು ಒಂದೇ ದಿನ, ಕೆಲವೇ ತಾಸುಗಳ ಅವಧಿಯಲ್ಲಿ ನಿವೃತ್ತಿ ಘೋಷಿಸಿದ್ದಾರೆ. ಇದು ಕ್ರೀಡಾ ವಲಯದಲ್ಲಿ ಅಚ್ಚರಿ ಮೂಡಿಸಿದೆ.

'ಯುವ ಆಟಗಾರರಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ನಿವೃತ್ತನಾಗಲು ನಿರ್ಧರಿಸಿದ್ದೇನೆ' ಎಂದು ರೂಪಿಂದರ್ ಪಾಲ್ ಸಿಂಗ್ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ. ಬೀರೇಂದ್ರ ಲಾಕ್ರ ಅವರ ನಿವೃತ್ತಿ ವಿಷಯವನ್ನು ಹಾಕಿ ಇಂಡಿಯಾ ಬಹಿರಂಗ ಮಾಡಿದೆ. ಹಾಕಿ ಬೆಳವಣಿಗೆ ಯೋಜನೆಯಲ್ಲಿ

ಇವರಿಬ್ಬರ ಹೆಸರು ಕಾಣಿಸಿಕೊಳ್ಳುವುದು ಸಾಧ್ಯವಿಲ್ಲ ಮತ್ತು ಮುಂದಿನ ವಾರ ಬೆಂಗಳೂರಿನಲ್ಲಿ ಆರಂಭವಾಗಲಿರುವ ರಾಷ್ಟ್ರೀಯ ಶಿಬಿರದಲ್ಲಿ ಅವಕಾಶ ಸಿಗುವುದಿಲ್ಲ ಎಂದು ಖಚಿತವಾದ ಕಾರಣ ಇಬ್ಬರೂ ನಿವೃತ್ತರಾಗಲು ನಿರ್ಧರಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಭಾರತ ಕಂಡ ಅತ್ಯುತ್ತಮ ಡ್ರ್ಯಾಗ್ ಫ್ಲಿಕ್ಕರ್ ಎಂದೆನಿಸಿಕೊಂಡಿದ್ದ 30 ವರ್ಷದ ರೂಪಿಂದರ್ ಪಾಲ್ ದೇಶಕ್ಕಾಗಿ 223 ಪಂದ್ಯಗಳನ್ನು ಆಡಿದ್ದಾರೆ.

'ಬಾಬ್' ಎಂದೇ ಕರೆಯಲಾಗುವ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಒಟ್ಟು ನಾಲ್ಕು ಗೋಲು ಗಳಿಸಿದ್ದರು. ಕಂಚಿನ ಪಕದಕ್ಕಾಗಿ ನಡೆದ ಪಂದ್ಯದಲ್ಲಿ ಒಂದು ಪೆನಾಲ್ಟಿ ಸ್ಟ್ರೋಕ್‌ನಲ್ಲೂ ಯಶಸ್ವಿಯಾಗಿದ್ದರು.

31 ವರ್ಷದ ಲಾಕ್ರ ಭಾರತ ತಂಡದ ಉಪನಾಯಕ ಕೂಡ ಆಗಿದ್ದರು. 2014ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದ ತಂಡದಲ್ಲೂ 2018ರ ಏಷ್ಯನ್ ಗೇಮ್ಸ್‌ನಲ್ಲಿ ಕಂಚು ಗೆದ್ದ ತಂಡದಲ್ಲೂ ಅವರು ಇದ್ದರು. ಒಟ್ಟು 201 ಅಂತರರಾಷ್ಟ್ರೀಯ ಪಂದ್ಯಗಳನ್ನು ಅವರು ಆಡಿದ್ದಾರೆ.

2012ರಲ್ಲಿ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಯಲ್ಲಿ ಅಂತರರಾಷ್ಟ್ರೀಯ ಹಾಕಿಗೆ ಪದಾರ್ಪಣೆ ಮಾಡಿದ ಒಡಿಶಾ ಆಟಗಾರ ಲಾಕ್ರ ಲಂಡನ್ ಒಲಿಂಪಿಕ್ಸ್‌ನಲ್ಲೂ ಆಡಿದ್ದಾರೆ. ಪಂಜಾಬ್‌ನ ಫರೀದ್‌ಕೋಟ್‌ನಲ್ಲಿ ಜನಿಸಿದ ರೂಪಿಂದರ್ ಕಠಿಣ ಪರಿಶ್ರಮದ ಮೂಲಕ ವೃತ್ತಿಜೀವನದಲ್ಲಿ ಸಾಧನೆ ಮಾಡಿದ್ದಾರೆ.

ಬೀರೇಂದ್ರ ಲಾಕ್ರ –ಪ್ರಜಾವಾಣಿ ಚಿತ್ರ

ರೂಪಿಂದರ್ ಪಾಲ್ ಸಿಂಗ್ –ಪಿಟಿಐ ಚಿತ್ರ

> ಈಚಿನ ಕೆಲವು ತಿಂಗಳುಗಳು ನನ್ನ ಜೀವನದಲ್ಲಿ ಅತ್ಯಂತ ಮಹತ್ವದ್ದಾಗಿದ್ದವು. ಸಹ ಆಟಗಾರರ ಜೊತೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕವನ್ನು ಕೊರಳಿಗೆ ಹಾಕಿಕೊಂಡ ಗಳಿಗೆಯನ್ನು ಎಂದಿಗೂ ಮರೆಯಲಾರೆ. 13 ವರ್ಷ ದೇಶವನ್ನು ಪ್ರತಿನಿಧಿಸಿದ್ದೇನೆ. ಈಗ ಹೊಸ ಪೀಳಿಗೆಗೆ ಅವಕಾಶ ಮಾಡಿಕೊಡಬೇಕಾದ ಜವಾಬ್ದಾರಿ ನನ್ನ ಮೇಲಿದೆ.
>
> **ರೂಪಿಂದರ್ ಪಾಲ್ ಸಿಂಗ್** ನಿವೃತ್ತ ಆಟಗಾರ

ಡಿಫೆನ್ಸ್ ವಿಭಾಗದ ಬಲಿಷ್ಠ ಆಟಗಾರ ಮತ್ತು ಭಾರತ ಹಾಕಿ ತಂಡದ ಆಧಾರ ಸ್ತಂಭಗಳಲ್ಲಿ ಒಬ್ಬರಾಗಿದ್ದ ಒಡಿಶಾದ ಬೀರೇಂದ್ರ ಲಾಕ್ರ ಅಂತರರಾಷ್ಟ್ರೀಯ ಹಾಕಿಗೆ ವಿದಾಯ ಹೇಳಿದ್ದಾರೆ.
ಹಾಕಿ ಇಂಡಿಯಾ

2010ರ ಸುಲ್ತಾನ್ ಅಜ್ಲಾನ್ ಶಾ ಕಪ್ ಟೂರ್ನಿಯಲ್ಲಿ ಪದಾರ್ಪಣೆ ಮಾಡಿದ ಅವರು ವಿ.ಆರ್.ರಘುನಾಥ್ ಜೊತೆಗೂಡಿ ಡ್ರ್ಯಾಗ್‌ಫ್ಲಿಕ್‌ಗೆ ಹೊಸ ಭಾಷ್ಯ ಬರೆದಿದ್ದರು. ಪೆನಾಲ್ಟಿ ಕಾರ್ನರ್ ಮತ್ತು ಪೆನಾಲ್ಟಿ ಸ್ಟ್ರೋಕ್ ಅವಕಾಶಗಳು ಸಿಕ್ಕಿದಾಗಲೆಲ್ಲ ರೂಪಿಂದರ್ ಅವರು ತಂಡದ ಭರವಸೆಯಾಗುತ್ತಿದ್ದರು. ಗಟ್ಟಿಮುಟ್ಟಾದ ದೇಹ ಹೊಂದಿರುವ ಅವರು ಯಾವುದೇ ತಂಡಕ್ಕೆ ಸಿಂಹಸ್ವಪ್ನವಾಗಿದ್ದರು.

ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದ ತಂಡದಲ್ಲಿ ಆಡಿದ್ದ ರೂಪಿಂದರ್ ಅವರನ್ನು 2014ರ ವಿಶ್ವಕಪ್‌ನಲ್ಲಿ ಆಡಿದ ತಂಡದ ಉಪನಾಯಕನನ್ನಾಗಿ ಮಾಡಲಾಗಿತ್ತು. 2014 ಮತ್ತು 2018ರ ಏಷ್ಯನ್ ಗೇಮ್ಸ್‌ನಲ್ಲೂ ಆಡಿದ್ದಾರೆ. 2017ರಲ್ಲಿ ಗಾಯದ ಸಮಸ್ಯೆ ಅವರನ್ನು ಕಾಡಿತ್ತು.

ಜೈಂಟ್ಸ್ ಬೆಳ್ಳಿಹಬ್ಬ ಕಪ್ ಕ್ರಿಕೆಟ್

ಬೆಂಗಳೂರು: ಮುಂಬೈನ ಜೈಂಟ್ಸ್ ವೆಲ್ಫೇರ್ ಫೌಂಡೇಷನ್‌ನ ಅಂಗ ಸಂಸ್ಥೆಯಾದ ಜೈಂಟ್ಸ್ ಗ್ರೂಪ್ ಆಫ್ ಗಾರ್ಡನ್ ಸಿಟಿಯ ಬೆಳ್ಳಿಮಹೋತ್ಸವದ ಅಂಗವಾಗಿ ಕ್ರಿಕೆಟ್ ಟೂರ್ನಿ ನವೆಂಬರ್ ಒಂದರಿಂದ ನಡೆಯಲಿದೆ.

ಬೆಳ್ಳಿಹಬ್ಬದ ಟೂರ್ನಿಯ ಏಳನೇ ಆವೃತ್ತಿ ಇದಾಗಿದ್ದು ಪ್ರವೇಶ ಪತ್ರಗಳನ್ನು ಸಲ್ಲಿಸಲು ಅಕ್ಟೋಬರ್ 15 ಕೊನೆಯ ದಿನವಾಗಿದೆ.

ಮಾಹಿತಿಗೆ ಚಂದ್ರಶೇಖರ್ ಅಥವಾ ವಿವೇಕಾನಂದ ಕಿಣಿ (9844760690/9845179908) ಅವರನ್ನು ಸಂಪರ್ಕಿಸಬಹುದು. giantsaturservice@gmail.comಗೆ ಪ್ರವೇಶಪತ್ರಗಳನ್ನು ಮೇಲ್ ಮಾಡಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಆಸ್ಟ್ರೇಲಿಯಾ ಮಹಿಳಾ ತಂಡದ ಎದುರಿನ ಪಿಂಕ್ ಬಾಲ್ ಟೆಸ್ಟ್: ಭಾರತದ ಉತ್ತಮ ಆರಂಭ

ಮಳೆ ಕಾಡಿದ ಪಂದ್ಯ: ಬೆಳಗಿದ ಮಂದಾನ

ಗೋಲ್ಡ್ ಕೋಸ್ಟ್, ಆಸ್ಟ್ರೇಲಿಯಾ (ಪಿಟಿಐ): ಪ್ರಭಾವಿ ವೇಗದ ದಾಳಿಯನ್ನು ಒಳಗೊಂಡಿರುವ ಆಸ್ಟ್ರೇಲಿಯಾ ಎದುರು ಭಾರತದ ಸ್ಮೃತಿ ಮಂದಾನ ದಿಟ್ಟ ಆಟವಾಡಿದರು. ಮಳೆ ಕಾಡಿದ ಪಂದ್ಯದಲ್ಲಿ ಸ್ಮೃತಿ ಮತ್ತು ಶಫಾಲಿ ವರ್ಮಾ ಅವರ 93 ರನ್‌ಗಳ ಮೊದಲ ವಿಕೆಟ್ ಜೊತೆಯಾಟದ ನೆರವಿನಿಂದ ಭಾರತ ಉತ್ತಮ ಆರಂಭ ಪಡೆಯಿತು.

ಗುರುವಾರ ಇಲ್ಲಿ ಆರಂಭಗೊಂಡ ಆತಿಥೇಯ ಆಸ್ಟ್ರೇಲಿಯಾ ಮಹಿಳಾ ತಂಡದ ಎದುರಿನ ಭಾರತ ಮಹಿಳಾ ತಂಡದ ಹಗಲು ರಾತ್ರಿ ಟೆಸ್ಟ್ ಪಂದ್ಯದ ದಿನದಾಟವನ್ನು ಮಳೆಯ ಕಾರಣದಿಂದ 44.1 ಓವರ್‌ಗೇ ಮುಕ್ತಾಯಗೊಳಿಸಲಾಯಿತು. ಭಾರತ ಮೊದಲ ಇನಿಂಗ್ಸ್‌ನಲ್ಲಿ ಒಂದು ವಿಕೆಟ್ ಕಳೆದುಕೊಂಡು 132 ರನ್ ಗಳಿಸಿದೆ. ಅಮೋಘ ಆಟವಾಡಿದ ಸ್ಮೃತಿ ಮಂದಾನ 80 (144 ಎಸೆತ, 15 ಬೌಂಡರಿ, 1 ಸಿಕ್ಸರ್) ರನ್ ಗಳಿಸಿ ಕ್ರೀಸ್‌ನಲ್ಲಿದ್ದು 16 ರನ್ ಗಳಿಸಿರುವ ಪೂನಂ ರಾವತ್ ಕೂಡ ಮಂದಾನ ಜೊತೆ ಇದ್ದಾರೆ.

ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡದ ನಾಯಕಿ ಮೆಗ್ ಲ್ಯಾನಿಂಗ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಏಕದಿನ ಸರಣಿಯಲ್ಲಿ ಭಾರತದ ಬ್ಯಾಟರ್‌ಗಳು ರನ್ ಗಳಿಸಲು ಪರದಾಡಿದ್ದರು. ಹೀಗಾಗಿ ಟೆಸ್ಟ್‌ನಲ್ಲೂ ಎದುರಾಳಿಗಳನ್ನು ಬೇಗನೇ ಔಟ್ ಮಾಡಬಹುದು ಎಂಬುದು ಅವರ ಲೆಕ್ಕಾಚಾರ ಆಗಿತ್ತು. ಆದರೆ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅವರು ದಿಟ್ಟ ಆಟವಾಡಿದರು. ಭಾರತಕ್ಕೆ ಎರಡನೇ ಓವರ್‌ನಿಂದಲೇ ರನ್ ಹರಿದು ಬರಲು ಆರಂಭವಾಯಿತು.

ವೇಗಿಗಳಾದ ಎಲಿಸ್ ಪೆರಿ ಮತ್ತು ಡಾರ್ಸಿ ಬ್ರೌನ್ ಅವರ ಎಸೆತಗಳನ್ನು ನಿರಾತಂಕವಾಗಿ ಎದುರಿಸಿದ ಸ್ಮೃತಿ–ಶಫಾಲಿ ಜೋಡಿ ನಂತರ ಸ್ಟೆಲ್ಲಾ ಕ್ಯಾಂಬೆಲ್, ತಹಲಿಯಾ ಮೆಗ್ರಾ, ಸೋಫಿ ಮೋಲಿನೆಕ್ಸ್ ಅವರನ್ನೂ ದಂಡಿಸಿದರು. 67 ಎಸೆತಗಳಲ್ಲಿ 50 ರನ್ ಸೇರಿಸಿದ ಅವರು 15ನೇ ಓವರ್ ಪೂರ್ಣಗೊಂಡಾಗ ತಂಡದ ಮೊತ್ತವನ್ನು 70 ರನ್‌ಗಳಿಗೆ ಏರಿಸಿದರು. ಸ್ಮೃತಿ ಮಂದಾನ ನಾಲ್ಕು ಬೌಂಡರಿಗಳೊಂದಿಗೆ 51 ಎಸೆತಗಳಲ್ಲಿ 50 ರನ್ ಪೂರೈಸಿದರು.

ಶತಕದ ಜೊತೆಯಾಟದತ್ತ ಸಾಗಿದ್ದ ಜೊತೆಯಾಟವನ್ನು 26ನೇ ಓವರ್‌ನಲ್ಲಿ ಮೋಲಿನೆಕ್ಸ್ ಮುರಿದರು. ಶಫಾಲಿ ವರ್ಮಾ (31; 64 ಎ, 4 ಬೌಂ) ಮೆಗ್ರಾ ಅವರಿಗೆ ಕ್ಯಾಚ್ ನೀಡಿ ಮರಳಿದರು. ಪೂನಂ ರಾವತ್ ಜೊತೆಗೂಡಿ ಸ್ಮೃತಿ ತಮ್ಮ ಬ್ಯಾಟಿಂಗ್ ವೈಭವ ಮುಂದುವರಿಸಿದರು. 35ನೇ ಓವರ್‌ನಲ್ಲಿ ತಂಡದ ಮೊತ್ತ ಮೂರಂಕಿ ದಾಟಿತು.

'ಡಿನ್ನರ್' ನಂತರದ ಏಳನೇ ಓವರ್ ವೇಳೆ ಮಳೆ ಸುರಿಯಲು ಆರಂಭವಾಯಿತು. ಎರಡನೇ ಅವಧಿಯಲ್ಲಿ ಪದೇ ಪದೇ ಮಳೆ ಕಾಡಿತು. ಸ್ಮೃತಿ ಜೀವನಶ್ರೇಷ್ಠ 80 ರನ್ ಗಳಿಸಿ ಅಜೇಯರಾಗಿ ಉಳಿದರು. ಇದಕ್ಕೂ ಮೊದಲು ಟೆಸ್ಟ್‌ನಲ್ಲಿ ಅವರ ಗರಿಷ್ಠ ಮೊತ್ತ 78 ರನ್ ಆಗಿತ್ತು.

ಭಾರತ ಇನಿಂಗ್ಸ್‌ನ ಮೊದಲ 16 ಓವರ್‌ಗಳಲ್ಲಿ 16 ಬೌಂಡರಿಗಳು ಹರಿದು ಬಂದಿದ್ದವು. ಇವುಗಳ ಪೈಕಿ ಹೆಚ್ಚಿನವು ಸ್ಮೃತಿ ಬ್ಯಾಟ್‌ನಿಂದ ಮೂಡಿದ್ದವು. ತಹಲಿಯಾ ಮೆಗ್ರಾ ಅವರ ಎಸೆತವನ್ನು ಡೀಪ್ ಸ್ಕ್ವೇರ್ ಲೆಗ್ ಮೇಲಿಂದ ಸಿಕ್ಸರ್‌ಗೆ ಎತ್ತಿದ ಸ್ಮೃತಿ ಎರಡನೇ ವಿಕೆಟ್‌ಗೆ ರಾವತ್ ಅವರೊಂದಿಗೆ 39 ರನ್ ಸೇರಿಸಿದರು.

ಏಳು ಬೌಲರ್‌ಗಳ ಬಳಕೆ: ಭಾರತದ ಬ್ಯಾಟರ್‌ಗಳು ನಿರಾಯಾಸವಾಗಿ ರನ್ ಗಳಿಸುತ್ತಿದ್ದಂತೆ ಮೆಗ್ ಲ್ಯಾನಿಂಗ್ ಬೌಲರ್‌ಗಳನ್ನು ಬದಲಿಸುತ್ತ ಸಾಗಿದರು. ಒಟ್ಟು ಏಳು ಬೌಲರ್‌ಗಳನ್ನು ಅವರು ಬಳಸಿಕೊಂಡರು.

ಆಕ್ರಮಣಕಾರಿ ಆಟಗಾರ್ತಿ ಶಫಾಲಿ ತಾಳ್ಮೆಯಿಂದ ಆಡಿ ಸಹ ಆಟಗಾರ್ತಿಗೆ ಹೆಚ್ಚು ಅವಕಾಶಗಳನ್ನು ನೀಡಿದರು. ಪದಾರ್ಪಣೆ ಪಂದ್ಯ ಆಡಿದ ಡಾರ್ಸಿ ಬ್ರೌನ್ ಹೆಚ್ಚು ದಂಡನೆಗೆ ಒಳಗಾದರು. ಕೆಲವು ಕ್ಯಾಚ್‌ಗಳನ್ನು ಕೈಚೆಲ್ಲಿದ್ದು ಕೂಡ ಭಾರತಕ್ಕೆ ಅನುಕೂಲವಾಯಿತು.

ಸ್ಮೃತಿ ಮಂದಾನ –ಟ್ವಿಟರ್ ಚಿತ್ರ

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್)
1 ವಿಕೆಟ್‌ಗೆ 132 (44.1 ಓವರ್)
ಸ್ಮೃತಿ ಮಂದಾನ ಬ್ಯಾಟಿಂಗ್ 80 (144 ಎ, 4x15, 6x1), ಶಫಾಲಿ ವರ್ಮಾ ಸಿ ಮೆಗ್ರಾ ಬಿ ಮೋಲಿನೆಕ್ಸ್ 32 (64ಎ, 4x4), ಪೂನಂ ರಾವತ್ ಬ್ಯಾಟಿಂಗ್ 16 (57ಎ, 4x1)
ಇತರೆ (ವೈಡ್ 5) 5
ವಿಕೆಟ್ ಪತನ: 1-93 (ಶಫಾಲಿ ವರ್ಮಾ, 25.1)
ಬೌಲಿಂಗ್: ಎಲಿಸ್ ಪೆರಿ 7-1-24-0, ಡಾರ್ಸಿ ಬ್ರೌನ್ 4-0-28-0, ಸ್ಟೆಲ್ಲಾ ಕ್ಯಾಂಬೆಲ್ 3-0-14-0, ತಹಲಿಯಾ ಮೆಗ್ರಾ 10-1-34-0, ಸೋಫಿ ಮೋಲಿನೆಕ್ಸ್ 9-4-18-1, ಆ್ಯಶ್ಲಿ ಗಾರ್ಡನರ್ 10.1-3-14-0, ಅನಾಬೆಲ್ ಸೂಥರ್ಲೆಂಡ್ 1-1-0-0.

ರ‍್ಯಾಂಕಿಂಗ್: 2ನೇ ಸ್ಥಾನಕ್ಕೆ ಜೂಲನ್

ದುಬೈ (ಪಿಟಿಐ): ಭಾರತ ತಂಡದ ನಾಯಕಿ ಮಿಥಾಲಿ ರಾಜ್ ಅವರು ಐಸಿಸಿ ಏಕದಿನ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಕಳೆದುಕೊಂಡಿದ್ದು, ಮೂರನೇ ಕ್ರಮಾಂಕಕ್ಕೆ ಕುಸಿದಿದ್ದಾರೆ. ಆದರೆ ಬೌಲರ್‌ಗಳ ವಿಭಾಗದಲ್ಲಿ ಜೂಲನ್ ಗೋಸ್ವಾಮಿ ಎರಡನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

38 ವರ್ಷದ ಮಿಥಾಲಿ, ಇತ್ತೀಚೆಗೆ ಕೊನೆಗೊಂಡ ಆಸ್ಟ್ರೇಲಿಯಾ ವಿರುದ್ಧದ ಮೂರು ಪಂದ್ಯಗಳ ಸರಣಿಯಲ್ಲಿ ಕೇವಲ 87 ರನ್ ಗಳಿಸಿದ್ದರು. ಸದ್ಯ ಅವರ ಬಳಿ 738 ಪಾಯಿಂಟ್‌ಗಳಿವೆ. ದಕ್ಷಿಣ ಆಫ್ರಿಕಾದ ಲಿಜೆಲಿ ಲೀ (761) ಮೊದಲ ಸ್ಥಾನಕ್ಕೇರಿದ್ದರೆ, ಆಸ್ಟ್ರೇಲಿಯಾದ ಅಲೈಸಾ ಹೀಲಿ (750) ಎರಡನೇ ಸ್ಥಾನ ಗಳಿಸಿದ್ದಾರೆ.

ಭಾರತದ ಎದುರಿನ ಸರಣಿಯಲ್ಲಿ ಅಲೈಸಾ 112 ರನ್ ಕಲೆಹಾಕಿದ್ದರು. ಭಾರತದ ಸ್ಮೃತಿ ಮಂದಾನ ಪಟ್ಟಿಯಲ್ಲಿ ಒಂದು ಸ್ಥಾನ ಏರಿಕೆ ಕಂಡಿದ್ದು, ಸದ್ಯ ಆರನೇ ಸ್ಥಾನದಲ್ಲಿದ್ದಾರೆ.

ಪ್ರಕಾಶ್ ಶರಣ್ ಮತ್ತು ಮೀರ್ ಫಜಲ್ ಅಲಿ

ಸೃಷ್ಟಿ ಕಿರಣ್ ಮತ್ತು ತನು ವಿಶ್ವಾಸ್

ಟೆನಿಸ್: ಮೀರ್ ಫಜಲ್–ಪ್ರಕಾಶ್ ಶರಣ್ ಚಾಂಪಿಯನ್

ಸೃಷ್ಟಿ-ತನು ಜೋಡಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ಶ್ರೇಯಾಂಕದ ಆಟಗಾರ್ತಿ ಸೃಷ್ಟಿ ಕಿರಣ್ ಮತ್ತು ತನು ವಿಶ್ವಾಸ್ ಅವರು ರಾಜ್ಯ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ 12 ವರ್ಷದೊಳಗಿನವರ ತತ್ವಂ ಜೂನಿಯರ್ ಸರ್ಕೀಟ್ ಎಐಟಿಎ ಟೂರ್ನಿಯ ಬಾಲಕಿಯರ ವಿಭಾಗದ ಡಬಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡರು.

ಫೈನಲ್‌ನಲ್ಲಿ ಸೃಷ್ಟಿ ಮತ್ತು ತನು ಜೋಡಿ 6-4, 6-0ಯಿಂದ ಪೂಜಾ ನಾಗರಾಜ್ ಮತ್ತು ದೇಶ್ನಾ ಭಟ್ಟಾಚಾರ್ಯ ವಿರುದ್ಧ ಗೆಲುವು ಸಾಧಿಸಿದರು. ತಮಿಳುನಾಡಿನ ಮೀರ್ ಫಜಲ್ ಅಲಿ ಮತ್ತು ಕರ್ನಾಟಕದ ಪ್ರಕಾಶ್ ಶರಣ್ 6-1, 6-1ರಲ್ಲಿ ಅನಿರುದ್ಧ ಪಳನಿಸಾಮಿ ಮತ್ತು ಋತಿಕ್ ಜಯಂತ್ ವಿರುದ್ಧ ಜಯ ಗಳಿಸಿ ಬಾಲಕರ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಗಗನ ಮೋಹನ್ ಫೈನಲ್‌ಗೆ: ಸ್ಪೋರ್ಟಲ್ ಟಾಪ್‌ಸ್ಪಿನ್ ಎಐಟಿಎ 18 ವರ್ಷದೊಳಗಿನವರ ಟೂರ್ನಿಯ ಬಾಲಕಿಯರ ವಿಭಾಗದಲ್ಲಿ ಗಗನ ಮೋಹನ್ ಕುಮಾರ್ ಫೈನಲ್ ಪ್ರವೇಶಿಸಿದರು. ಸೆಮಿಫೈನಲ್‌ನಲ್ಲಿ ಅವರು ಎಸ್.ಪ್ರೇಶಾ ವಿರುದ್ಧ 6-7 (6-8), 6-1, 6-1ರಲ್ಲಿ ಜಯ ಗಳಿಸಿದರು. ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಅವರು ಡೆನಿಕಾ ನಿರ್ಮಲ್ ವಿರುದ್ಧ ಸೆಣಸುವರು. ಡೆನಿಕಾ 6-5, 6-0ರಲ್ಲಿ ನಿಧಿ ಬುವಿಲಾ ಎದುರು ಜಯ ಗಳಿಸಿದರು.

ಬಾಲಕರ ವಿಭಾಗದ ಫೈನಲ್‌ನಲ್ಲಿ ಜೇಸನ್ ಮಿಖಾಯಲ್ ಡೇವಿಡ್ ಮತ್ತು ರಿಷಿ ವರ್ಧನ್ ಮುಖಾಮುಖಿಯಾಗುವರು. ಸೆಮಿಫೈನಲ್‌ನಲ್ಲಿ ಜೇಸನ್ 7-5, 6-3ರಲ್ಲಿ ಕೃಶ್ ಅಜಯ್ ತ್ಯಾಗಿ ವಿರುದ್ಧ ಮತ್ತು ರಿಷಿ 7-6, 6-2ರಲ್ಲಿ ವೈಭವ್ ಕೃಷ್ಣ ಎದುರು ಗೆದ್ದರು.

ಗಗನ ಮೋಹನ್ ಕುಮಾರ್

ವಿಶ್ವ ಮಹಿಳಾ ಚೆಸ್ ಚಾಂಪಿಯನ್‌ಷಿಪ್: ರಷ್ಯಾಗೆ ಮಣಿದ ಭಾರತ ತಂಡ

ಸಿಟ್‌ಜಸ್, ಸ್ಪೇನ್: ಸತತ ಎರಡು ಸುತ್ತುಗಳಲ್ಲಿ ಗೆಲುವಿನ ಸಿಹಿ ಉಂಡಿದ್ದ ಭಾರತ ತಂಡವು ವಿಶ್ವ ಮಹಿಳೆಯರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ರಷ್ಯಾ ಎದುರು ನಿರಾಸೆ ಅನುಭವಿಸಿತು.

'ಎ' ಗುಂಪಿನ ಪಂದ್ಯದಲ್ಲಿ ಭಾರತದ ಆಟಗಾರ್ತಿಯರು 1-3ರಿಂದ ರಷ್ಯಾ ಎದುರು ಸೋತರು. ಆದರೆ ಈಗಾಗಲೇ ಕ್ವಾರ್ಟರ್‌ಫೈನಲ್ ತಲುಪಿರುವ ಭಾರತ ತಂಡವು ಪ್ರಿಲಿಮನರಿ ಹಂತದ ಐದನೇ ಸುತ್ತಿನಲ್ಲಿ ಫ್ರಾನ್ಸ್ ಎದುರು ಆಡಲಿದೆ.

ರಷ್ಯಾ ಎದುರಿನ ಸೆಣಸಾಟದಲ್ಲಿ ಭಾರತದ ದ್ರೋಣವಳ್ಳಿ ಹಾರಿಕಾ ಮತ್ತು ಮೇರಿ ಆ್ಯನಾ ಗೋಮ್ಸ್ ಅವರು ಕ್ರಮವಾಗಿ ಅಲೆಕ್ಸಾಂಡ್ರಾ ಗೋರಿಚ್‌ಕಿನಾ ಹಾಗೂ ಪೊಲಿನಾ ಶುವಲೊವಾ ಎದುರು ಡ್ರಾ ಸಾಧಿಸಿದರು.

ಆದರೆ ತಾನಿಯಾ ಸಚ್‌ದೇವ್ ಮತ್ತು ಆರ್. ವೈಶಾಲಿ ಸೋಲು ಅನುಭವಿಸಿದರು.

ಇದಕ್ಕೂ ಮೊದಲು ಭಾರತ ತಂಡವು ಬಲಿಷ್ಠ ಆರ್ಮೇನಿಯಾ ಎದುರು 2.5-1.5ರಿಂದ ಗೆದ್ದಿದ್ದರೆ, ಸ್ಪೇನ್ ತಂಡವನ್ನು 2.5-1.5ರಿಂದ ಸೋಲಿಸಿತ್ತು.